UNIVERSAL
LIBRARY
OU_198654
UNIVERSAL
LIBRARY

ಬಿ. ಬಿ. ಡಿ. ಪವರ್ ಪ್ರೆಸ್
ಅರಳೇಪೇಟೆ, ಬೆಂಗಳೂರು ಸಿಟಿ

# ಅರಿಕೆ

ಸಾವಿರಾರು ವರ್ಷಗಳ ಹಿಂದೆ **ಭಾಸ**ನೆಂಬ ಕವಿ ಸಂಸ್ಕೃತ ಭಾಷೆಯಲ್ಲಿ ಹದಿಮೂರು ನಾಟಕಗಳನ್ನು ಬರೆದನು. ಅವುಗಳಲ್ಲಿ ಮಹಾಭಾರತದ ಕಥೆಗೆ ಸಂಬಂಧಪಟ್ಟ ಐದು ಏಕಾಂಕ ನಾಟಕಗಳನ್ನು **ಶ್ರೀ ಎಲ್. ಗುಂಡಪ್ಪ**ನವರು **'ಭಾಸನ ಏಕಾಂಕ ನಾಟಕಗಳು'** ಎಂದು ಹದಿನೈದು ವರುಷದ ಹಿಂದೆ ಕನ್ನಡಕ್ಕೆ ಅನುವಾದಮಾಡಿದರು.

ಈ ನಾಟಕಗಳನ್ನು ಕಥಾರೂಪದಲ್ಲಿ ನಾನು ಹಲವಾರು ಶಾಲೆಗಳಲ್ಲಿ ಮಕ್ಕಳಿಗೆ ಪರಿಚಯಮಾಡಿಕೊಟ್ಟಿದ್ದೇನೆ. ಅದರಿಂದ ಅವರಿಗಾದ ಸಂತೋಷವನ್ನು ಕಂಡು, ಈಗ ಅದನ್ನೇ ಪುಸ್ತಕರೂಪದಲ್ಲಿ ತಂದಿದ್ದೇನೆ.

ಶ್ರೀ ಗುಂಡಪ್ಪನವರನ್ನೇ ಒಮ್ಮೆ ಕೇಳಿದೆ: ಇದೇ ನಾಟಕಗಳನ್ನು ಕಥನರೂಪದಲ್ಲಿ ಪೂರೈಸುವ ಯೋಚನೆ ಅವರಿಗೇನಾದರೂ ಉಂಟೇ, ಎಂದು. ಆದರೆ ಉಳಿದಿರುವ ಇತರ ಭಾಸ ನಾಟಕಗಳನ್ನು ಅನುವಾದ ಮಾಡುವುದು ಅದಕ್ಕೂ ಮೊದಲಿನ ಅಗತ್ಯವೆಂದು ಅವರು ತೊಡಗಿರುವರಾದ ಕಾರಣ, ಮಕ್ಕಳಿಗಾಗಿ ಈ ಕೆಲಸವನ್ನು ನಾನು ಕೈಕೊಂಡಿದ್ದೇನೆ. ಈ ಸಂದರ್ಭದಲ್ಲಿ ಅವರ ಅನುವಾದಗಳಿಂದ ಪಡೆದಿರುವ ಸಹಾಯವನ್ನು ಕೃತಜ್ಞತೆಯಿಂದ ಒಪ್ಪಿಕೊಳ್ಳುತ್ತೇನೆ.

ಈ "ಭಾಸನ ಭಾರತ"ದ ಕಥೆಯನ್ನು ಓದುವ ಮಕ್ಕಳು, ಭಾಸನ ಇನ್ನೊಂದು ನಾಟಕವಾದ 'ಪಂಚರಾತ್ರ' ಎಂಬುದರ ಕಥೆಯನ್ನು ತಿಳಿಸುವ **'ಪಂಚರಾತ್ರದ ಕಥೆ'**ಯನ್ನೂ ಓದಲೆಂದು ಹಾರೈಸುತ್ತೇನೆ.

೨೦—೩—೧೯೪೭ **ಜಿ. ಪಿ. ರಾಜರತ್ನಂ.**

# ವಿವರ


| | | | ಪುಟ |
|---|---|---|---|
| ೧. | ಮಧ್ಯಮ ವ್ಯಾಯೋಗದ ಕಥೆ | .... | ೧ |
| ೨. | ದೂತವಾಕ್ಯದ ಕಥೆ | .... | ೨೪ |
| ೩. | ದೂತ ಘಟೋತ್ಕಚದ ಕಥೆ | .... | ೪೪ |
| ೪. | ಕರ್ಣಭಾರದ ಕಥೆ | .... | ೬೨ |
| ೫. | ಊರುಭಂಗದ ಕಥೆ | .... | ೭೪ |


# ಚಿತ್ರಗಳು


| | | | |
|---|---|---|---|
| ೧. | ಭೀಮನೂ ಘಟೋತ್ಕಚನೂ ಮಲ್ಲಯುದ್ಧಕ್ಕೆ ಸಿದ್ಧವಾದರು | | ೧೮ |
| ೨. | ದುರ್ಯೋಧನನು ಕೃಷ್ಣನನ್ನು ಬಂಧಿಸಲು ಬಂದನು | ... | ೩೭ |
| ೩. | ಕೌರವನ ಸಭೆಯಲ್ಲಿ ದೂತ ಘಟೋತ್ಕಚ | ... | ೫೭ |
| ೪. | ಕರ್ಣನು ಕವಚಕುಂಡಲಗಳನ್ನು ಕೊಟ್ಟನು | ... | ೭೧ |
| ೫. | ದುರ್ಯೋಧನನು ಮಗನಿಗೆ ಬೋಧಿಸಿದನು | ... | ೮೭ |

# ಮಧ್ಯಮ ವ್ಯಾಯೋಗದ ಕಥೆ

§ ೧

ಹಿಂದೆ ಚಂದ್ರವಂಶದ ದುರ್ಯೋಧನನು ತನ್ನ ಸೋದರಮಾವನಾದ ಶಕುನಿಯ ಪ್ರೇರಣೆಯಿಂದ ದಾಯಾದಿಯಾದ ಧರ್ಮರಾಯನೊಡನೆ ಕಪಟದ್ಯೂತವನ್ನು ಆಡಿ, ಅವನ ರಾಜ್ಯಕೋಶಗಳನ್ನೂ ತಮ್ಮಂದಿರನ್ನೂ ಹೆಂಡತಿಯನ್ನೂ ಗೆದ್ದು, ಅವರಿಗೆ ಹನ್ನೆರಡು ವರುಷಕಾಲ ವನವಾಸವನ್ನೂ ಒಂದು ವರುಷಕಾಲ ಅಜ್ಞಾತವಾಸವನ್ನೂ ವಿಧಿಸಿದನು. ಅದರಂತೆ ಪಾಂಡವರು ತಮ್ಮ ಪತ್ನಿಯಾದ ದ್ರೌಪದಿಯೊಡನೆ ಕಾಡಿಗೆ ಬಂದು, ಅಲ್ಲಿ ವಾಸಮಾಡತೊಡಗಿದರು.

ಒಂದುಸಲ ಅದೇ ಕಾಡಿನಲ್ಲಿದ್ದ ಧೌಮ್ಯ ಮಹರ್ಷಿಗಳು ಶತಕುಂಭವೆಂಬ ಯಜ್ಞವನ್ನು ನಡಸುತ್ತಾರೆಂಬುದನ್ನು ಕೇಳಿ, ಧರ್ಮರಾಯನು ಆ ಯಜ್ಞವನ್ನು ನೋಡಬೇಕೆಂಬ ಅಭಿಲಾಷೆಯಿಂದ ದ್ರೌಪದಿಯೊಡನೆ ಅಲ್ಲಿಗೆ ಹೋದನು. ಅರ್ಜುನ, ನಕುಲ, ಸಹದೇವರುಗಳು ತಾವೂ ಅಣ್ಣನ ಹಿಂದೆ ಹೋದರು. ಭೀಮನನ್ನು ಮಾತ್ರ ಆಶ್ರಮದ ರಕ್ಷಣೆಗಾಗಿ ಅಲ್ಲಿಯೇ ನಿಲ್ಲಿಸಿದರು. ಅವನಾದರೂ ಮುಂದೆ ವನವಾಸ ಅಜ್ಞಾತವಾಸಗಳು ಮುಗಿದಮೇಲೆ ನಡಸಬೇಕಾದ ಕೌರವರ ಯಜ್ಞವನ್ನು ಪೂರೈಸಲು ಬೇಕಾಗುವ ಶಕ್ತಿಯನ್ನು ಸಂಗ್ರಹಿಸುವುದಕ್ಕಾಗಿ ವ್ಯಾಯಾಮ ಮಾಡುತ್ತ ಅಲ್ಲಿಯೇ ನಿಂತನು.

ಹೀಗೆ ಪಾಂಡವರು ತಮ್ಮ ಆಶ್ರಮವನ್ನು ಬಿಟ್ಟು ದೂರದ ಧೌಮ್ಯಾಶ್ರಮಕ್ಕೆ ಹೋಗಿದ್ದ ಕಾಲದಲ್ಲಿ, ಕೇಶವದಾಸನೆಂಬ ಬ್ರಾಹ್ಮಣನು ತನ್ನ ಹೆಂಡತಿಯನ್ನೂ ಮೂವರು ಮಕ್ಕಳನ್ನೂ ಕರೆದುಕೊಂಡು ಆ ಪಾಂಡವಾಶ್ರಮದ ಮಾರ್ಗವಾಗಿ ಹೋಗುತ್ತಿದ್ದನು. ಆತನು

ಯುಧಿಷ್ಠಿರನು ದ್ಯೂತವಾಡುವುದಕ್ಕೆ ಮೊದಲು ಆಳುತ್ತಿದ್ದ ಕುರು ಜಾಂಗಲ ದೇಶದ ಯೂಪಗ್ರಾಮದ ನಿವಾಸಿ; ಮಾಠರಸಗೋತ್ರದ ಕಲ್ಪಶಾಖೆಯ ಅಧ್ವರ್ಯುವಾದ ಬ್ರಾಹ್ಮಣ. ಆ ದಿವಸ ಆತನು ಉತ್ತರ ದಿಕ್ಕಿನ ಉದ್ಯಾಮಕ ಗ್ರಾಮದಲ್ಲಿ ವಾಸಮಾಡುತ್ತಿದ್ದ ಕೌಶಿಕಸಗೋತ್ರದ ಯಜ್ಞಬಂಧುವೆಂಬ ತನ್ನ ಸೋದರಮಾವನ ಮಗನ ಉಪನಯನವನ್ನು ನೋಡುವುದಕ್ಕಾಗಿ ಹೆಂಡತಿ ಮಕ್ಕಳೊಡನೆ ಹೊರಟಿದ್ದನು. ಮಾರ್ಗದಲ್ಲಿ ಜಲಕ್ಲಿನ್ನರೆಂಬ ಮುನಿಗಳು ಅವನನ್ನು ಕುರಿತು "ಈ ಅರಣ್ಯದಲ್ಲಿ ರಾಕ್ಷಸರಿದ್ದಾರೆ. ಆದುದರಿಂದ ಜೋಪಾನವಾಗಿ ದಾರಿ ನೋಡಿಕೊಂಡು ಹೋಗಿ" ಎಂದು ಎಚ್ಚರಿಸಿ ಕಳುಹಿಸಿದ್ದರು.

ಅದೇ ಅರಣ್ಯದಲ್ಲಿ ಹಿಡಿಂಬಾದೇವಿ ವಾಸವಾಗಿದ್ದಳು. ಹಿಂದೆ ಪಾಂಡವರು ಅರಗಿನಮನೆಯಲ್ಲಿ ಉರಿದುಹೋಗದೆ ಉಳಿದುಕೊಂಡು ಅರಣ್ಯವನ್ನು ಹೊಕ್ಕಾಗ ಈಕೆ ತನ್ನ ಅಣ್ಣನಾದ ಹಿಡಿಂಬನ ಮಾತಿನ ಪ್ರಕಾರ ಪಾಂಡವರನ್ನು ಕೊಂದು ತಿನ್ನಲು ಬಂದು, ಭೀಮನ ರೂಪಿಗೆ ಮನಸ್ಸು ಸೋತು, ಕಡೆಗೆ ಅವನನ್ನೇ ಮದುವೆಯಾಗಿ ಘಟೋತ್ಕಚನೆಂಬ ಮಗನನ್ನು ಪಡೆದಳು. ಅನಂತರ ಪಾಂಡವಾದಿಗಳು ಹಿಡಿಂಬೆಯನ್ನು ಹಿಡಿಂಬವನದಲ್ಲೇ ಬಿಟ್ಟು, ಮುಂದೆ ಏಕಚಕ್ರ ನಗರಕ್ಕೆ ಹೋಗಿ ದ್ರೌಪದಿಯನ್ನು ಮತ್ಸ್ಯಯಂತ್ರ ಪರೀಕ್ಷೆಯಲ್ಲಿ ಸಂಪಾದಿಸಿಕೊಂಡು ಹಸ್ತಿನಾಪುರಕ್ಕೆ ಹಿಂದಿರುಗಿ, ತಂದೆಯ ರಾಜ್ಯದಲ್ಲಿ ಸುಖವಾಗಿದ್ದರು. ಇದಾದ ಸ್ವಲ್ಪಕಾಲದಲ್ಲಿಯೇ ಅವರು ಕಪಟದ್ಯೂತದಲ್ಲಿ ಸರ್ವಸ್ವವನ್ನೂ ಕಳೆದುಕೊಂಡು ಪುನಃ ಕಾಡುಪಾಲಾದದ್ದು.

ಹೀಗೆ ಅನೇಕಕಾಲ ಕಳೆದಮೇಲೆ ಮತ್ತೆ ಕಾಡಿಗೆ ಬಂದ ಭೀಮಸೇನನನ್ನು ಕಾಣಬೇಕೆಂದು ಹಿಡಿಂಬೆಗೆ ಆಸೆಯಾಯಿತು. ಆದರೆ ಹೆಣ್ಣಾದ ತಾನೇ ಗಂಡನ್ನು ಅರಸಿಕೊಂಡು ಹೋಗಲು

ಲಜ್ಜೆಪಟ್ಟು, ಹಿಡಿಂಬೆಯು ಆ ದಿವಸ ಭೀಮನು ಹೊರತಾಗಿ ಉಳಿದ ಪಾಂಡವರು ಆಶ್ರಮದಲ್ಲಿ ಇಲ್ಲದುದನ್ನೂ ಮುದಿ ಬ್ರಾಹ್ಮಣನೊಬ್ಬನು ಹೆಂಡತಿ ಮಕ್ಕಳೊಡನೆ ಆ ಮಾರ್ಗವಾಗಿ ಪ್ರಯಾಣಮಾಡುತ್ತಿದ್ದು ದನ್ನೂ ತಿಳಿದು, ಭೀಮನನ್ನು ಕರೆಸುವುದಕ್ಕೆ ಒಂದು ಉಪಾಯ ವನ್ನು ಚಿಂತಿಸಿದಳು. ತನ್ನ ಮಗನಾದ ಘಟೋತ್ಕಚನನ್ನು ಕರೆದು, "ಮಗು, ನನ್ನ ಉಪವಾಸ ಮುಗಿದಮೇಲೆ ಪಾರಣೆಗೋಸ್ಕರ ಆಹಾರ ಬೇಕಾಗಿದೆ. ಆದಕಾರಣ ಈ ಅರಣ್ಯದಲ್ಲಿ ಯಾವನಾದರೂ ಮನುಷ್ಯ ನನ್ನು ಹುಡುಕಿ ಹಿಡಿದುಕೊಂಡು ಬಾ" ಎಂದು ಆಜ್ಞೆಮಾಡಿದಳು. ತಾಯಿಯ ಮಾತನ್ನು ಶಿರಸಾವಹಿಸಿ, ಘಟೋತ್ಕಚನು ಮನುಷ್ಯ ನನ್ನು ಹುಡುಕುತ್ತಾ ಆ ಅರಣ್ಯದಲ್ಲಿ ಸಂಚರಿಸುತ್ತಿದ್ದನು.

§ ೨

ಹೀಗೆ ಸಂಚರಿಸುತ್ತಿದ್ದ ಘಟೋತ್ಕಚನ ಕಣ್ಣಿಗೆ ಕೇಶವ ದಾಸನೂ ಅವನ ಹೆಂಡತಿ ಮಕ್ಕಳೂ ಕಾಣಿಸಿಕೊಂಡ ಕೂಡಲೇ ಆ ರಾಕ್ಷಸನು ಅವರ ಬೆನ್ನಟ್ಟಿ ಬಂದನು. ಕೆಂಪು ಬಣ್ಣದ ಕೂದಲನ್ನು ಕೆದರಿಕೊಂಡು, ಹುಬ್ಬುಗಂಟಿಕ್ಕಿ, ದೊಡ್ಡ ಕೆಂಗಣ್ಣುಗಳನ್ನು ಬಿರ ಬಿರನೆ ತಿರುಗಿಸುತ್ತ ಪ್ರಳಯಕಾಲದ ಸಂಹಾರರುದ್ರನ ಹಾಗೆ ಬಂದನು. ಮಳೆಗಾಲದ ಕರಿಯ ಮೋಡದ ಹಾಗಿದ್ದ ಅವನ ದೇಹ ದಲ್ಲಿ ಕಂಠಸೂತ್ರ ಮಿಂಚಿನ ಹಾಗೆ ಮಿನುಗುತ್ತಿತ್ತು. ಆ ಬೆಳೆದು ಉಬ್ಬಿ ಹರಡಿದ ಎದೆ, ಸೊಂಡಿಲಿಗೆ ಸಮನಾದ ಆ ತೋಳು, ಆನೆಯ ಕೊಂಬಿನಂತಹ ಕೋರೆ, ನೇಗಿಲಿನ ಆಕಾರದ ನಾಸಿಕ, ಆ ಕೆಂಬಣ್ಣದ ಕೂದಲು, ಉಟ್ಟ ಪಟ್ಟೆ ಪೀತಾಂಬರ ಎಲ್ಲವನ್ನೂ ನೋಡಿದರೆ ತ್ರಿಪುರಸಂಹಾರ ಕಾಲದಲ್ಲಿ ರುದ್ರನಾದ ಶಂಕರನ ರೂಪವನ್ನು ನೋಡಿ ದಂತೆ ಭಯವುಂಟಾಗುತ್ತಿತ್ತು. ಕತ್ತಲೆಯ ಮೊತ್ತವನ್ನು ಕಟ್ಟಿಟ್ಟ ಹಾಗೆ ನೀಲಮೇಘದ ವರ್ಣದಿಂದ ರಂಜಿಸುತ್ತಿದ್ದ ಅವನ ಮೈ

ಹೋಮಕುಂಡದಲ್ಲಿ ಅಗ್ನಿ ಆಹುತಿಯನ್ನು ಕೊಂಡು ಉರಿಯುವ ಹಾಗೆ ಹೊಳೆಯುತ್ತಿತ್ತು. ಆ ಕಪ್ಪುಬಣ್ಣದ ಮುಖದಲ್ಲಿ ಮೇಲೆದ್ದ ಬೆಳ್ಳನೆಯ ಕೋರೆ ಹೊಸ ಮೋಡವು ಮುಸುಕಿ ಮರೆಮಾಡತೊಡಗಿರುವ ಚಂದ್ರರೇಖೆಯಂತೆ ಪ್ರಕಾಶಿಸುತ್ತಿತ್ತು.

ಇಂತಹ ಭೀಕರಾಕಾರನಾದ ಆ ಘಟೋತ್ಕಚನನ್ನು ಕೇಶವದಾಸನು ಕಂಡು, ಹೆಂಡತಿ ಮಕ್ಕಳಿಗಾಗಿ ಬಹಳ ಕಳವಳಗೊಂಡನು. ಹುಲಿಯು ಹಿಂದೆ ಬರುವುದನ್ನು ಕಂಡ ಹಿರಿಯ ಗೂಳಿ ಹೆದರಿ ನಡುಗುವ ಕರುಗಳನ್ನೂ ಹಸುವನ್ನೂ ಜೊತೆಗೆ ಕರೆಮಕೊಂಡು ಹೋಗುವಂತೆ ಕೇಶವದಾಸನು ಘಟೋತ್ಕಚನ ಕೈಯಿಂದ ಪಾರಾಗಲು ಮುಂದೆ ಮುಂದೆ ಹೋದನು. ಆದರೆ ಪರ್ವತಗಳನ್ನು ಪೀಡಿಸಿದ ವಜ್ರಾಯುಧವಂತೆ, ಹಕ್ಕಿಗಳನ್ನು ಬೆನ್ನಟ್ಟುವ ಗಿಡುಗನಂತೆ, ಜಿಂಕೆಗಳಮೇಲೆ ಎರಗುವ ಸಿಂಹದಂತೆ, ರಾಕ್ಷಸರೂಪಿನ ಮೃತ್ಯುವಿನಂತೆ ಹಿಂಬಾಲಿಸಿ ಬರುತ್ತಿದ್ದ ಆ ಘಟೋತ್ಕಚನಿಂದ ತಪ್ಪಿಸಿಕೊಳ್ಳುವುದು ಅವರಿಗೆ ಸಾಧ್ಯವಾಗಲಿಲ್ಲ.

ಆಗ, ಆ ವೇಳೆಗಾಗಲೇ ದಣಿದು ಬಳಲಿಹೋಗಿದ್ದ ಕೇಶವದಾಸನನ್ನೂ ಅವನ ಹೆಂಡತಿ ಮಕ್ಕಳನ್ನೂ ಘಟೋತ್ಕಚನು ತಡೆದು, “ನಿಲ್ಲು, ನಿಲ್ಲು, ಬ್ರಾಹ್ಮಣ. ಹೆಂಡತಿಯೊಡನೆ ಹೋಗುತ್ತಿರುವ ಹಾವು ಬೆನ್ನಟ್ಟಿಬರುವ ಗರುಡನ ರೆಕ್ಕೆಯ ತುದಿಯ ಗಾಳಿಗೇ ಹೆದರಿ ದಿಕ್ಕುಕಾಣದೆ ಓಡುತ್ತದೆ. ಅದು ಹಾಗೆ ಓಡಿದಷ್ಟೂ, ಗರುಡನಿಗೆ ಹಾರಿ ಹಾರಿ ರೋಷ ಹೆಚ್ಚಿ ಹಬ್ಬುತ್ತದೆ. ಅದರ ಹಾಗೆಯೇ ನನ್ನನ್ನು ಕಂಡು ಹೆದರಿ, ಧೈರ್ಯಗೆಟ್ಟು, ಏಕೆ ಹೀಗೆ ಓಡುವೆ? ಭಯಪಟ್ಟು ಹೆದರಿ ನಡುಗುತ್ತಿರುವ ಹೆಂಡತಿ ಮಕ್ಕಳನ್ನು ಕಾಪಾಡುವುದಕ್ಕೆ ಶಕ್ತಿಯಿಲ್ಲದ ನೀನು ಏಕೆ ಹೀಗೆ ಓಡುತ್ತಿರುವೆ?” ಎಂದನು.

ಅವನ ಮಾತನ್ನು ಕೇಳಿ ವೃದ್ಧ ಬ್ರಾಹ್ಮಣನಿಗೆ ಸ್ವಲ್ಪ ಧೈರ್ಯ ಬಂದಿತು. ಆಗ ಅವನು "ಈ ರಾಕ್ಷಸನು ದುಡುಕುವವನಲ್ಲ. ನಿದಾನಿಸಿ ವಿಚಾರಮಾಡಿ ಮಾತನಾಡುತ್ತಿದ್ದಾನೆ. ಆದಕಾರಣ ಹೆದರಬೇಡಿ" ಎಂದು ಹೇಳಿ, ಹೆಂಡತಿಯನ್ನೂ ಮಕ್ಕಳನ್ನೂ ಸಮಾಧಾನಪಡಿಸಿದನು.

ಘಟೋತ್ಕಚನಿಗಾದರೂ ಆ ಬ್ರಾಹ್ಮಣನನ್ನು ಪೀಡಿಸುವುದು ಮನಸ್ಸಿಗೆ ಅಷ್ಟು ಇಷ್ಟವಾಗಿರಲಿಲ್ಲ. ಸದಾಕಾಲದಲ್ಲೂ ಸರ್ವದೇಶದಲ್ಲೂ ಭೂಸುರೋತ್ತಮರು ಪೂಜಾರ್ಹರೆಂದು ಅವನಿಗೆ ಗೊತ್ತು. ಆದರೆ "ಯಾವನಾದರೂ ಮನುಷ್ಯನನ್ನು ಹಿಡಿದು ತಾ" ಎಂಬ ತಾಯಿಯ ಆಜ್ಞೆಯನ್ನು ಪಾಲಿಸುವುದಕ್ಕಾಗಿ ತಾನು ಇಂತಹ ಅಕಾರ್ಯವನ್ನು ಮಾಡುತ್ತಿರುವೆನೆಂದು ಘಟೋತ್ಕಚನು ತಾನೂ ಮನಸ್ಸಿನಲ್ಲೇ ನೊಂದನು.

ಇತ್ತ, ಮುಂದೆ ಏನುಮಾಡಬೇಕೋ ತಿಳಿಯದೆ ಎಲ್ಲರೂ ದಿಕ್ಕುಗೆಟ್ಟು ನಿಂತಿರುವಾಗ "ಸಹಾಯಕ್ಕೆ ಯಾರನ್ನಾದರೂ ಕೂಗಿಕೊಳ್ಳೋಣವೆ?" ಎಂದು ಕೇಶವದಾಸನ ಹೆಂಡತಿಗೆ ತೋಚಿತು. ಆದರೆ "ಸುತ್ತಲೂ ದಿಕ್ಕುದಾರಿಗಳಿಗೆ ಅಡ್ಡವಾಗಿ ಬೆಟ್ಟಗಳು ಕೋಟೆ ಕಟ್ಟಿರುವ ಈ ಕಗ್ಗತ್ತಲೆಯ ಕಾಡಿನಲ್ಲಿ ಯಾರು ಇದ್ದಾರು? ಇಲ್ಲಿ ತುಂಬಿರುವ ಮೃಗಪಕ್ಷಿಗಳು ನಮಗೆ ಏನು ರಕ್ಷಣೆ ಕೊಟ್ಟಾವು? ಇಂತಹ ಕಡೆ ವನವಾಸಿಗಳು ಹೊರತು ಬೇರೆ ಯಾರು ಇದ್ದಾರು?" ಎಂದು ಮೊದಲನೆಯ ಮಗ ಹೇಳಿದನು.

'ವನವಾಸಿ'ಗಳೆಂಬ ಶಬ್ದವನ್ನು ಕೇಳಿದ ಕೂಡಲೆ ಕೇಶವದಾಸನಿಗೆ ವನವಾಸಕ್ಕಾಗಿಯೇ ಕಾಡಿಗೆ ಬಂದ ಪಾಂಡವರ ಜ್ಞಾಪಕವಾಯಿತು. "ಪಾಂಡವರಿಗೆ ಯುದ್ಧವೆಂದರೆ ಇಷ್ಟ. ಶರಣರನ್ನು ಪ್ರೀತಿಸಿ, ದೀನರಲ್ಲಿ ದಯೆಯಿಟ್ಟು, ಅವರನ್ನು ಕಾಪಾಡುವುದಕ್ಕಾಗಿ ಅವರು ತಮ್ಮ ಸಾಹಸವನ್ನು ವಿನಿಯೋಗಿಸುವರು. ಭಯಂಕರವಾದ

ಆಕಾರದಿಂದ ಬಂದು ಕ್ರೂರಕೃತ್ಯಗಳನ್ನು ಮಾಡುವ ಇಂತಹ ದುಷ್ಟರಿಗೆ ಯಾವ ಶಿಕ್ಷೆ ಯೋಗ್ಯವೋ ಅದನ್ನು ತಿಳಿದು ವಿಧಿಸಲು ಅವರು ಸಮರ್ಥರು" ಎಂದು ಆಗ ಅವನಿಗೆ ಧೈರ್ಯ ಬಂತು. ಆದರೆ ಪಾಂಡವರು ಆ ಕಾಲದಲ್ಲಿ ಅಲ್ಲಿ ಇಲ್ಲದುದನ್ನೂ, ಭೀಮನು ಒಬ್ಬನು ಇದ್ದರೂ ಅವನು ವ್ಯಾಯಾಮಕ್ಕಾಗಿ ದೂರ ಪ್ರದೇಶಕ್ಕೆ ಹೋಗಿರು ತ್ತಾನೆಂಬುದನ್ನೂ ಮೊದಲ ಮಗನು ತಿಳಿಸಿದಾಗ ಮುದುಕನಿಗೆ ಎದ್ದ ಆಸೆ ಬಿದ್ದುಹೋಯಿತು.

ಆಗ, ಮುಂದೇನು ಮಾಡಬೇಕೋ ತಿಳಿಯದೆ ಆ ಮುದುಕನು "ನಮ್ಮ ಗತಿಯೇನು ?" ಎಂದು ಘಟೋತ್ಕಚನನ್ನೇ ಕೇಳಿದಾಗ ಅವನು "ನಮ್ಮ ತಾಯಿಯ ಆಜ್ಞೆಯಂತೆ ನಾನು ಯಾರಾದರೊಬ್ಬ ರನ್ನು ಹಿಡಿದುಕೊಂಡು ಹೋಗಬೇಕು. ಆದ್ದರಿಂದ, ನಿನಗೂ ನಿನ್ನ ಹೆಂಡತಿಗೂ ಉಳಿದುಕೊಳ್ಳುವ ಆಸೆಯಿದ್ದರೆ, ಇರುವ ಮೂವರು ಮಕ್ಕಳಲ್ಲಿ ಇಬ್ಬರನ್ನು ಉಳಿಸಿಕೊಳ್ಳುವ ಇಷ್ಟವಿದ್ದರೆ, ನೀನೇ ಇದರ ಗುಣದೋಷಗಳನ್ನು ತೂಗಿ ನೋಡಿ, ಒಬ್ಬನನ್ನು ಕೊಟ್ಟು ಕಳುಹು" ಎಂದನು.

ಆ ಮಾತು ಕೇಳಿ ಕೇಶವದಾಸನಿಗೂ ಸಹನೆ ತಪ್ಪಿತು. "ಎಲಾ ನೀಚ! ಶಾಸ್ತ್ರಗಳನ್ನು ಬಲ್ಲ ನಾನು, ವಯಸ್ಸು ಆಗಿ ಮುದಿ ಯಾದ ನಾನು ಇಂಥ ಗುಣಾಢ್ಯರಾದ ಮಕ್ಕಳಲ್ಲಿ ಒಬ್ಬನನ್ನು ಮನುಷ್ಯಮಾಂಸವನ್ನು ತಿನ್ನುವ ರಾಕ್ಷಸನಿಗೆ ಒಪ್ಪಿಸಿದರೆ ನನಗೆ ಸುಖ ಹೇಗೆ ಸಿಕ್ಕೀತು" ಎಂದನು.

ಅದಕ್ಕೆ ಘಟೋತ್ಕಚನು ವಿನಯದಿಂದಲೇ "ಅಯ್ಯಾ ಬ್ರಾಹ್ಮಣ, ಬೇಡಿಕೊಂಡಾಗ ಒಬ್ಬ ಮಗನನ್ನು ನೀನಾಗಿಯೇ ಕೊಡದೆಹೋದರೆ ನೀನೂ ನಿನ್ನ ಹೆಂಡತಿ ಮಕ್ಕಳೂ ಇಷ್ಟರಲ್ಲೇ ನಾಶವಾಗುವುದು ಖಂಡಿತ" ಎಂದನು.

ಆಗ "ಹೇಗಿದ್ದರೂ ಒಂದು ಮನುಷ್ಯದೇಹವನ್ನು ಇವನಿಗೆ ಒಪ್ಪಿಸಿದ ಹೊರತು ಉಳಿದವರು ಪಾರಾಗುವಂತಿಲ್ಲ" ಎಂದು ಕೇಶವ ದಾಸನು "ಈ ನನ್ನ ಮುದಿಯಾದ ದೇಹ ಕರ್ತವ್ಯಗಳನ್ನೆಲ್ಲಾ ಮಾಡಿ ಮುಗಿಸಿದೆ. ಇನ್ನು ಹೆಚ್ಚು ದಿನ ಇದ್ದು ಏನಾಗಬೇಕು? ನನ್ನ ಮಕ್ಕಳನ್ನು ಉಳಿಸುವುದಕ್ಕಾಗಿ ಈ ರಾಕ್ಷಸನೆಂಬ ಅಗ್ನಿಗೆ ನನ್ನ ಶರೀರ ವನ್ನೇ ಹೋಮವಾಗಿ ಅರ್ಪಿಸುತ್ತೇನೆ" ಎಂದು ನಿಶ್ಚೈಸಿ ನುಡಿದನು.

ಅದಕ್ಕೆ ಅವನ ಹೆಂಡತಿ "ಆರ್ಯ, ಅದು ಸರಿಯಲ್ಲ. ಪತಿ ವ್ರತೆಗೆ ಪತಿಯೇ ಸರ್ವಸ್ವ. ಈ ನನ್ನ ಪತಿಯನ್ನೂ ನನ್ನ ವಂಶದ ಮಕ್ಕಳನ್ನೂ ಕಾಪಾಡುವುದಕ್ಕಾಗಿ ನಾನು ಈ ರಾಕ್ಷಸನಿಗೆ ನನ್ನ ಶರೀರವನ್ನು ತ್ಯಾಗಮಾಡುತ್ತೇನೆ" ಎಂದಳು.

ಅವರಿಬ್ಬರ ಮಾತನ್ನು ಕೇಳಿ ಘಟೋತ್ಕಚನು "ನಿಮ್ಮಿಬ್ಬ ರನ್ನೂ ನಾನೊಲ್ಲೆ. ನಮ್ಮ ತಾಯಿ ಹೆಂಗಸನ್ನು ತಿನ್ನುವುದಿಲ್ಲ. ನೀನು ಮುದುಕ, ನಿನ್ನ ಮೈಯಲ್ಲಿ ಮಾಂಸವಿಲ್ಲ. ಮಕ್ಕಳು ಮೂವ ರಲ್ಲಿ ಯಾರನ್ನಾದರೂ ಬೇಗ ಕೊಟ್ಟು ಕಳುಹು" ಎಂದನು.

ಆಗ, ತಾಯಿತಂದೆಯರ ಪ್ರಾಣಗಳನ್ನು ಉಳಿಸಲು ತಾನು ರಾಕ್ಷಸನೊಡನೆ ಹೋಗುವೆನೆಂದು ಮೊದಲನೆಯ ಮಗನು ಮುಂದೆ ಬಂದನು. ಆದರೆ, ವಂಶಕ್ಕೆ ಹಿರಿಯನಾದವನು ಪಿತೃಗಳಿಗೆ ಪ್ರಿಯ ನಾದ ಕಾರಣದಿಂದ, ಅವನ ಬದಲು ತಾನು ಹೋಗುವೆನೆಂದು ಎರಡನೆಯವನು ಮುಂದೆ ಬಂದನು. ಅದಕ್ಕೆ ಮೂರನೆಯವನು "ಹಿರಿಯಣ್ಣನಾದವನು ತಂದೆಗೆ ಸಮಾನನೆಂದು ಜ್ಞಾನಿಗಳು ಹೇಳು ತ್ತಾರೆ. ಆದ್ದರಿಂದ ಹಿರಿಯುವರ ಪ್ರಾಣಗಳನ್ನು ರಕ್ಷಿಸಲು ನಾನು ರಾಕ್ಷಸನಿಗೆ ಯೋಗ್ಯನು" ಎಂದನು.

ಹೀಗೆ ಅವರು ಮೂವರೂ ಘಟೋತ್ಕಚನೊಡನೆ ಹೋಗಲು ನಾನುತಾನೆಂದು ಉತ್ಸಾಹಪಡುತ್ತಿರಲು, "ತಾಯಿತಂದೆಗೆ ಆಪತ್ತು

ಬಂದಾಗ ಅವರ ನೆರವಿಗೆ ನಿಲ್ಲಬೇಕಾದುದು ಹಿರಿಯ ಮಗನ ಧರ್ಮ. ಆದಕಾರಣ ನೀವು ಇಬ್ಬರೂ ನನ್ನ ಕರ್ತವ್ಯಕ್ಕೆ ಅಡ್ಡಿ ಬರಬಾರದು" ಎಂದು ಹಿರಿಯವನು ಹೇಳಿದನು.

ಘಟೋತ್ಕಚನು ಅವರ ಅಪೂರ್ವವಾದ ತ್ಯಾಗಬುದ್ಧಿಯನ್ನು ಕಂಡು ಆಶ್ಚರ್ಯದಿಂದ ಮೂಕನಾದನು.

ಅಷ್ಟರಲ್ಲಿ ಕೇಶವದಾಸನು "ನನಗೆ ಹಿರಿಯ ಮಗ ಎಲ್ಲರಿಗಿಂತ ಹೆಚ್ಚು ಇಷ್ಟ. ಅವನನ್ನು ನಾನು ಕಳುಹಿಸಲಾರೆ" ಎಂದೂ, ಕೇಶವದಾಸನ ಹೆಂಡತಿ "ನನಗೆ ಕಿರಿಯ ಮಗ ಎಲ್ಲರಿಗಿಂತ ಹೆಚ್ಚು ಇಷ್ಟ. ಅವನನ್ನು ನಾನು ಕಳುಹಿಸಲಾರೆ" ಎಂದೂ ತಮತಮಗೆ ಬೇಕಾದ ಇಬ್ಬರನ್ನು ಆರಿಸಿಕೊಂಡರು.

ಆಗ ಉಳಿದ ಮಧ್ಯದವನನ್ನು ಕುರಿತು ಘಟೋತ್ಕಚನು "ತಾಯಿಗೂ ಬೇಡವಾದವನು, ತಂದೆಗೂ ಬೇಡವಾದವನು, ನೀನು ನನಗೆ ಬೇಕಾದವನು. ಬಾ" ಎಂದು ಕರೆಯಲು, "ಬಾಂಧವರು ಬದುಕಿಕೊಳ್ಳುವ ಹಾಗೆ ನನ್ನ ಜೀವವನ್ನು ಕೊಟ್ಟು, ಇಂದು ನಾನು ಧನ್ಯನಾದೆ. ಈ ರೀತಿಯ ಸಾವು ಎಲ್ಲರಿಗೂ ಸುಲಭವಾಗಿ ಸಿಕ್ಕುವುದಿಲ್ಲ" ಎಂದು ಅವನು ಸಂತೋಷದಿಂದ ಘಟೋತ್ಕಚನ ಜೊತೆಯಲ್ಲಿ ಹೋಗಲು ಒಪ್ಪಿದನು. ಆ ಬ್ರಾಹ್ಮಣ ವಟುವಿನ ಸ್ವಜನವಾತ್ಸಲ್ಯವು ಘಟೋತ್ಕಚನಿಗೆ ಬಹಳ ಮೆಚ್ಚಿಕೆಯಾಯಿತು.

ಅನಂತರ ಆ ಮಧ್ಯದವನು ತಂದೆಗೂ ತಾಯಿಗೂ ಅಣ್ಣನಿಗೂ ನಮಸ್ಕಾರ ಮಾಡಿದನು. ತಂದೆಯಾದರೋ ಮಗನನ್ನು ಇನ್ನು ಮುಂದೆ ಕಾಣುವುದಿಲ್ಲವೆಂದುಕೊಂಡು ಆತನಿಗೆ ಮರಣಾನಂತರ ಬ್ರಹ್ಮಲೋಕ ಸಿದ್ಧಿಸಲಿ ಎಂದು ಹರಸಿದನು. ತಾಯಿ ಮಗ ಹೇಗಾದರೂ ಬದುಕಲಿ ಎಂದು ಆಶಿಸಿ, "ದೀರ್ಘಾಯುವಾಗು" ಎಂದು ಆಶೀರ್ವದಿಸಿದಳು. ಹಿರಿಯ ಮಗನು ತಮ್ಮನನ್ನು ಬಿಗಿದಪ್ಪಿ

"ಕೀರ್ತಿವಂತನಾಗು" ಎಂದು ಬಯಸಿದನು. ಕಿರಿಯವನು ಅಣ್ಣನನ್ನು ಬೀಳ್ಕೊಡುವ ಮೊದಲು ಅವನಿಗೆ ನಮಸ್ಕರಿಸಿದನು, ಮಧ್ಯದವನು ತಮ್ಮನಿಗೆ ಶುಭವನ್ನು ಕೋರಿದನು.

ಮಧ್ಯದವನು ಹೀಗೆ ತನ್ನವರನ್ನೆಲ್ಲಾ ಬೀಳ್ಕೊಂಡು, ಹೊರಡುವ ಮೊದಲು ಘಟೋತ್ಕಚನನ್ನು ಕುರಿತು "ಅಯ್ಯಾ, ನಾನು ಹೇಗೂ ಪರಲೋಕಕ್ಕೆ ಹೊರಡಲು ಸಿದ್ಧನಾಗಿದ್ದೇನೆ. ಅದಕ್ಕೆ ಮೊದಲು ಇಲ್ಲಿ ಎಲ್ಲಿಯಾದರೂ ಇರುವ ಕೊಳದಲ್ಲಿ ಇಳಿದು ಬಾಯಾರಿಕೆಯನ್ನು ಕಳೆದುಕೊಂಡು ಬರುತ್ತೇನೆ. ಅಪ್ಪಣೆ ಕೊಡು'' ಎಂದು ಬೇಡಿದನು. ಅವನ ದೃಢವಾದ ನಿಶ್ಚಯಕ್ಕೆ ಮಾರುಹೋಗಿದ್ದ ಘಟೋತ್ಕಚನು ಅವನನ್ನು ಹೋಗಗೊಟ್ಟನು. ಕಳುಹುವಾಗ "ನಮ್ಮ ತಾಯಿಯ ಆಹಾರಕಾಲ ಮೀರುವುದಕ್ಕೆ ಮುಂಚೆ ಬಾ" ಎಂದು ಅವನನ್ನು ಎಚ್ಚರಿಸಿದನು.

ಇತ್ತ ಕೇಶವದಾಸನು, ಮೂರು ಶಿಖರಗಳಿಂದ ಸುಂದರವಾದ ಪರ್ವತ ಹೇಗೋ ಹಾಗೆ ಮೂರು ಮಕ್ಕಳಿಂದ ಮೇಲೆ ಬಂದಿದ್ದ ತನ್ನ ವಂಶವು ಮಧ್ಯದ ಮಗನನ್ನು ಕಳೆದುಕೊಂಡಿತಲ್ಲಾ ಎಂದು ಸಂತಾಪಪಟ್ಟು, ಮಗನ ತಾರುಣ್ಯವನ್ನೂ ವರ್ಚಸ್ಸನ್ನೂ ಸೊಬಗನ್ನೂ ಬುದ್ಧಿಯನ್ನೂ ಗುಣವನ್ನೂ ಮೇಲಿಂದ ಮೇಲೆ ಜ್ಞಾಪಿಸಿಕೊಂಡು, "ಹಾ, ಹಾ ! ಹೂಬಿಟ್ಟ ಮರವು ಮದದಾನೆಯ ಕೊಂಬಿನ ಏಟಿಗೆ ಸಿಕ್ಕಿ ಮುರಿದು ಬೀಳುವಂತೆ ಈ ರಾಕ್ಷಸನ ಕೈಗೆ ಸಿಕ್ಕಿ ನಾಶವಾದೆಯಾ, ಮಗನೇ !'' ಎಂದು ಗೋಳಾಡಿದನು.

## § ೩

ಅಷ್ಟರಲ್ಲಿ ಘಟೋತ್ಕಚನು ತಾಯ ಆಹಾರಕಾಲ ಮೀರಿ ಹೋಗುವುದೆಂದೂ ನೀರು ಕುಡಿಯಲು ಹೋದವನು ಬರುವುದು

ತಡವಾಗುತ್ತಿದೆಯೆಂದೂ ವ್ಯಾಕುಲಗೊಂಡನು. "ಮಗನನ್ನು ಬೇಗ ಬರುವಂತೆ ಕರೆ" ಎಂದು ತಂದೆಗೆ ಹೇಳಿದರೆ, ಅವನು "ರಾಕ್ಷಸರು ಕೂಡ ಇಂಥ ಮಾತನಾಡಲಾರರು. ನಿನ್ನ ಕೈಯಲ್ಲಿ ಸಿಕ್ಕಿ ಸಾಯು ವುದಕ್ಕೆ ನನ್ನ ಮಗನನ್ನು ನಾನು ಕೂಗಲೆ?" ಎಂದುಬಿಟ್ಟನು. ಆದರೂ ಘಟೋತ್ಕಚನು ಶಾಂತನಾಗಿಯೇ ಅವನ ಕೋಪವನ್ನು ಶಮನಗೊಳಿಸುತ್ತ "ಕ್ಷಮಿಸಬೇಕು, ವಿಚಾರಮಾಡದೆ ಮಾತನಾಡಿದೆ. ನೀವು ಕರೆಯುವುದು ಬೇಡ, ಅವನ ಹೆಸರನ್ನಾದರೂ ಹೇಳಿ. ನಾನೇ ಕರೆಯುತ್ತೇನೆ" ಎಂದ. ಕೇಶವದಾಸನಿಗೆ ಅವನ ಹೆಸರು ಹೇಳುವು ದಕ್ಕೂ ಮನಸ್ಸು ಒಪ್ಪಲಿಲ್ಲ. ಘಟೋತ್ಕಚನು ಹಿರಿಯ ಮಗನನ್ನು ಪ್ರಶ್ನಿಸಿದನು. ಅವನು "ಹಿರಿಯನಾಗಿದ್ದರೆ ತಂದೆ ಉಳಿಸಿಕೊಳ್ಳು ತ್ತಿದ್ದನು. ಕಿರಿಯನಾಗಿದ್ದರೆ ತಾಯಿ ಉಳಿಸಿಕೊಳ್ಳುತ್ತಿದ್ದಳು. ಅದೃಷ್ಟ ಚೆನ್ನಾಗಿಲ್ಲದೆ ಅವನು ಮಧ್ಯದವನಾದ" ಎಂದುಕೊಂಡು, "ಅವನು ನಿರ್ಭಾಗ್ಯನಾದ ಮಧ್ಯಮ" ಎಂದ. ಘಟೋತ್ಕಚನಾದರೂ "ಇವನಿಗೆ ಮಧ್ಯಮನೆಂಬ ಹೆಸರು ಚೆನ್ನಾಗಿಯೇ ಒಪ್ಪುತ್ತದೆ. ಒಳ್ಳೆಯದು. ಅವನನ್ನು ನಾನೇ ಕೂಗುತ್ತೇನೆ" ಎಂದು "ಮಧ್ಯಮಾ! ಮಧ್ಯಮಾ! ಹೊತ್ತಾಯಿತು, ಬೇಗ ಬಾ!" ಎಂದು ಕೂಗಿದನು.

ಆ ಘಟೋತ್ಕಚನ ಕೂಗು ಆ ಕಾಡಿನಲ್ಲಿ ದಟ್ಟವಾಗಿ ಬೆಳೆ ದಿದ್ದ ಮರಗಳನ್ನು ದಾಟಿ, ಅಲ್ಲಿದ್ದ ಹಕ್ಕಿಗಳ ಕಲಕಲವನ್ನು ಮೆಟ್ಟಿ, ಅದೇ ಕಾಡಿನಲ್ಲಿ ವ್ಯಾಯಾಮ ಮಾಡುತ್ತಿದ್ದ ಭೀಮಸೇನನ ಕಿವಿಗೆ ಬಿದ್ದು, ಅವನ ಮೈ ಜುಮ್ಮೆಂದಿತು. ಆ ಧ್ವನಿಯನ್ನು ಕೇಳಿ ಭೀಮನು "ಇದೇನಿದು? ಈ ಧ್ವನಿ ನನ್ನ ತಮ್ಮನಾದ ಧನಂಜಯನ ಧ್ವನಿ ಇದ್ದ ಹಾಗೆ ಇದೆಯಲ್ಲ!" ಎಂದುಕೊಂಡನು.

ಘಟೋತ್ಕಚನು ಎಲ್ಲಿ ತಾಯಿಯ ಪಾರಣೆಯಕಾಲ ಮೀರಿ ಹೋಗುವುದೋ ಎಂಬ ಕಾತರದಿಂದ, ತಡಮಾಡುತ್ತಿರುವ ಆ

ಬ್ರಾಹ್ಮಣ ವಟುವನ್ನು ಬರಮಾಡುವುದಕ್ಕಾಗಿ ಪುನಃ "ಮಧ್ಯಮಾ! ಮಧ್ಯಮಾ!" ಎಂದು ಕೂಗಿದನು.

ಆಗ ಭೀಮನು "'ಮಧ್ಯಮಾ! ಮಧ್ಯಮಾ!' ಎಂದು ನನ್ನನ್ನು ಹೆಸರು ಹಿಡಿದು ಕರೆಯುವವರು ಯಾರು? ಇದರಿಂದ ನನ್ನ ವ್ಯಾಯಾಮಕ್ಕೆ ಅಡ್ಡಿಯಾದರೂ ಸರಿಯೆ, ಇದು ಯಾರೆಂದು ನೋಡೋಣ" ಎಂದು ಮುಂದೆ ಬಂದು ಘಟೋತ್ಕಚನನ್ನು ನೋಡಿದನು.

ಘಟೋತ್ಕಚನಾದರೋ ಮದದಾನೆಯಂತೆ, ಕೊಬ್ಬಿದ ಗೂಳಿಯಂತೆ ಆಚೆ ಈಚೆ ಹೆಜ್ಜೆ ಹಾಕುತ್ತಿದ್ದಾನೆ! ಅವನ ಸಿಂಹದಂತಿರುವ ಮುಖದಲ್ಲಿ ಸಿಂಹದ ಕೋರೆಗಳು, ಜೇನಿನಂತೆ ಹೊಳೆಯುವ ಕಣ್ಣು, ಕಂದುಬಣ್ಣದ ಹುಬ್ಬು, ಗಿಡಗನ ಮೂಗು, ಮದದಾನೆಯ ದವಡೆ, ಆ ಕೆದರುಕೂದಲು, ಮುಂದಕ್ಕೆ ಉಬ್ಬಿರುವ ವಿಶಾಲವಾದ ಎದೆ, ವಜ್ರದಂತೆ ಕಠಿಣವಾದ ನಡು, ಮಾಂಸಪುಷ್ಟವಾದ ಆ ನಿಡುತೋಳು ಇವುಗಳನ್ನು ನೋಡಿ ಭೀಮನು "ಇವನು ಯಾರೋ ರಾಕ್ಷಸಿಯ ಮಗನಿರಬೇಕು. ಇವನ ತಂದೆ ನಿಜವಾಗಿಯೂ ಯಾವನೋ ಲೋಕವೀರನೇ ಇರಬೇಕು" ಎಂದು ಅವನ ಆಕಾರವನ್ನು ನೋಡಿ ಮೆಚ್ಚಿಕೊಳ್ಳುತ್ತಿದ್ದನು.

ಇತ್ತ ಘಟೋತ್ಕಚನು "ಎರಡು ಬಾರಿ ಕೂಗಿದರೂ ಬ್ರಾಹ್ಮಣ ವಟು ಇನ್ನೂ ಬರಲಿಲ್ಲವಲ್ಲ, ತಾಯಿಯ ಊಟಕ್ಕೆ ತಡವಾಗುವುದಲ್ಲ" ಎಂದು ಪುನಃ ಮೂರನೆಯ ಬಾರಿ "ಮಧ್ಯಮಾ! ಮಧ್ಯಮಾ!" ಎಂದು ಕೂಗಿದನು.

"ಇದೋ ಬಂದೆ" ಎಂದು ಭೀಮನು ಘಟೋತ್ಕಚನ ಎದುರಿಗೆ ಬಂದು ನಿಂತನು.

ಘಟೋತ್ಕಚನು ಭೀಮನ ಮನೋಹರವಾದ ಆಕೃತಿಯನ್ನು ನೋಡಿದನು. ಸಿಂಹದಂತಹ ಆಕಾರ, ಚಿನ್ನದ ತಾಳೆಯ ಮರಗ

ಳಂತಹ ಎರಡು ತೋಳು ; ಕೃಶವಾದ, ಬಿಗಿಯಾದ ನಡು ; ನಡುವಿನಿಂದ ಮೇಲಕ್ಕೆ ಹರಡಿರುವ ವಿಶಾಲವಾದ ವಕ್ಷಸ್ಥಲವನ್ನು ನೋಡಿದರೆ ಗರುಡನ ರೆಕ್ಕೆಗಳನ್ನು ಮುಚ್ಚಿ ಪಕ್ಕಗಳನ್ನು ಕೈಯಿಂದ ಸವರಿದ ಹಾಗಿದೆ. "ಇವನಾರು ? ಅರಳಿದ ತಾವರೆಯಂತೆ ವಿಶಾಲವಾದ ಕಣ್ಣುಳ್ಳ ವಿಷ್ಣುವಿರಬಹುದೆ ? ಈತನನ್ನು ನೋಡಿದರೆ, ಏಕೋ ಬಂಧುವನ್ನು ನೋಡಿದಂತೆ ಸಂತೋಷವಾಗುತ್ತದೆ" ಎಂದು ಘಟೋತ್ಕಚನು ಭೀಮನ ಆಕಾರವನ್ನು ತಾನೂ ನೋಡಿ ಮೆಚ್ಚಿಕೊಂಡನು.

ಆದರೂ ಘಟೋತ್ಕಚನು ತಾಯಿಯ ಆಜ್ಞೆಯನ್ನು ಪಾಲಿಸಬೇಕೆಂಬುದನ್ನು ಮರೆಯಲಿಲ್ಲ. ಪುನಃ ಮತ್ತೊಂದುಸಲ "ಮಧ್ಯಮಾ! ಮಧ್ಯಮಾ! ಹೊತ್ತಾಯಿತು, ಬೇಗ ಬಾ" ಎಂದು ಕೂಗಿದನು.

"ನಾನು ಇಲ್ಲೇ ಇರುವೆನಲ್ಲ" ಎಂದು ಭೀಮನೆಂದನು.

"ಏನು ? ನೀನೂ ಮಧ್ಯಮನೇ ?" ಎಂದು ಘಟೋತ್ಕಚನು ಆಶ್ಚರ್ಯದಿಂದ ಕೇಳಿದನು.

ಅದಕ್ಕೆ ಭೀಮಸೇನನು "ಕೇಳಯ್ಯ, ಮಧ್ಯಮನೆಂಬವನು ನಾನೊಬ್ಬನೇ, ಬೇರೆ ಯಾರೂ ಅಲ್ಲ. ವಧಿಸಲು ಅಸಾಧ್ಯರಾದವರಲ್ಲಿ ನಾನು ಮಧ್ಯಮನು, ಧೀರರಲ್ಲಿ ನಾನು ಮಧ್ಯಮನು, ಭೂಮಿಯಲ್ಲಿಯೂ ಮಧ್ಯಮನು ನಾನೇ, ಸೋದರರ ಗುಂಪಿನಲ್ಲಿಯೂ ನಾನು ಮಧ್ಯಮನು" ಎಂದು ತನ್ನ ಪರಿಚಯವನ್ನು ತಿಳಿಸಿ, ಪುನಃ ಮುಂದುವರಿದು, "ಪಂಚಭೂತಗಳಲ್ಲಿ ನಾನು ಮಧ್ಯಮನು, ರಾಜರುಗಳ ನಡುವೆ ನಾನು ಮಧ್ಯಮನು, ಜನ್ಮದಲ್ಲಿ ಮಧ್ಯಮನು, ಲೋಕದಲ್ಲಿ ಮಧ್ಯಮನು. ಹೀಗೆ ಸರ್ವಕಾರ್ಯಗಳಲ್ಲೂ ನಾನೇ ಮಧ್ಯಮನು" ಎಂದನು.

ಆದರೆ ಇನ್ನೊಬ್ಬ ಮಧ್ಯಮನಿಗಾಗಿ ತವಕಪಡುತ್ತಿದ್ದ ಘಟೋತ್ಕಚನಿಗೆಭೀಮನ ಮಾತಿನಲ್ಲಿ ಗಮನವಿರಲಿಲ್ಲ. ಕೇಶವದಾಸನಿಗೆ

ಮಾತ್ರ ಭೀಮನ ಪರಿಚಯದ ಗುಟ್ಟು ಅರ್ಥವಾಯಿತು. ನಾನೇ ಮಧ್ಯಮನೆಂಬ ಮಾತಿನಿಂದ ಇವನು ಪಾಂಡುವಿನ ಮೊದಲ ಮೂವರು ಮಕ್ಕಳಲ್ಲಿ ಮಧ್ಯದವನಾಗಿರಬೇಕು. ಇವನು ಬಂದುದರಿಂದ ನಾವು ಈ ಮೃತ್ಯುವಿನ ಬಾಯಿಂದ ಉದ್ಧಾರವಾಗಿ ಬದುಕಿದೆವು" ಎಂದು ಅವನು ಧೈರ್ಯ ತಂದುಕೊಂಡನು.

ಅಷ್ಟು ಹೊತ್ತಿಗೆ ಕೇಶವದಾಸನ ಮಗನಾದ ಮಧ್ಯಮನು ಹತ್ತಿರದಲ್ಲಿದ್ದ ಕಮಲಸರೋವರದಲ್ಲಿ ಆಚಮನಮಾಡಿ, ತಾವರೆಯ ಎಲೆಯಲ್ಲಿ ಕೊಳದ ತಿಳಿನೀರನ್ನು ಎತ್ತಿಕೊಂಡು, ಪರಲೋಕದಲ್ಲಿ ತನಗೆ ದೊರಕಲಾರದ ತರ್ಪಣವನ್ನು ತನಗೆ ತಾನೇ ಕೊಟ್ಟುಕೊಂಡು, ಘಟೋತ್ಕಚನೊಡನೆ ಹೋಗುವುದಕ್ಕೆ ಸಿದ್ಧವಾಗಿ ಬಂದನು. ಘಟೋತ್ಕಚನು ಅವನನ್ನು ಕಂಡು, ಸಮಾಧಾನಗೊಂಡು, ಅವನನ್ನು ಕರೆದೊಯ್ಯಲು ತೊಡಗಿದನು.

§ ೪

ಆಗ ವೃದ್ಧ ಕೇಶವದಾಸನು ಭೀಮನ ಮರೆಹೊಕ್ಕು, ತನ್ನ ಕುಲವನ್ನು ರಕ್ಷಿಸಬೇಕೆಂದು ಬೇಡಿಕೊಳ್ಳಲು, ಭೀಮನು ಆತನಿಗೆ ವಂದಿಸಿ, ಆತನ ಆಶೀರ್ವಾದವನ್ನು ಪಡೆದ ಬಳಿಕ ಆತನ ಭಯಕ್ಕೆ ಕಾರಣವೇನೆಂದು ಕೇಳಿ ತಿಳಿದುಕೊಂಡನು. ಅನಂತರ, ಬ್ರಾಹ್ಮಣರ ದಾರಿಗೆ ಅಡ್ಡ ಬಂದು ಅವರನ್ನು ಪೀಡಿಸುತ್ತಿರುವ ರಾಕ್ಷಸನನ್ನು ತಾನು ನಿಗ್ರಹಿಸುವೆನೆಂದು ಆತನಿಗೆ ಅಭಯವನ್ನು ಕೊಟ್ಟು, ಘಟೋತ್ಕಚನನ್ನು ಕರೆದು ನಿಲ್ಲಿಸಿ, ಅವನನ್ನು ನುಡಿಸಿದನು.

"ಅಯ್ಯಾ, ಈ ಬ್ರಾಹ್ಮಣನನ್ನೇಕೆ ಪೀಡಿಸುವೆ? ಮಕ್ಕಳು ನಕ್ಷತ್ರಗಳಂತೆ ಇದ್ದಾರೆ. ಬ್ರಾಹ್ಮಣಿ ತಂಪಾದ ಬೆಳ್ದಿಂಗಳಂತೆ ಇದ್ದಾಳೆ. ಇವರೊಡನೆ ಚಂದ್ರನ ಹಾಗಿರುವ ಈ ಬ್ರಾಹ್ಮಣನನ್ನು ನೀನು ರಾಹುವಿನ ಹಾಗೆ ಪೀಡಿಸಬಹುದೆ?" ಎಂದನು.

ತಾಯ ಬಳಿಗೆ ಮನುಷ್ಯನನ್ನು ಒಯ್ಯುವ ತ್ವರೆಯಲ್ಲಿದ್ದ ಘಟೋತ್ಕಚನು "ಹೌದು, ರಾಹುವೇ ನಾನು" ಎಂದು ಧೃಷ್ಟತನದಿಂದ ನುಡಿದು, ಮಧ್ಯಮನನ್ನು ಬಿಡಲೊಪ್ಪಲಿಲ್ಲ. "ಈ ಬ್ರಾಹ್ಮಣ ನಿರಪರಾಧಿ, ಸಂಯಮಿ. ಇಂಥವನನ್ನು ಪೀಡಿಸಬೇಡ" ಎಂದು ಭೀಮನು ಎಷ್ಟೇ ನಯದಿಂದ ನುಡಿಸಿದರೂ ಆ ರಾಕ್ಷಸನು ತನ್ನ ಹಠವನ್ನು ಬಿಡಲಿಲ್ಲ.

ಅವನ ಆ ಮೊಂಡುತನ ಕೂಡ ಭೀಮನಿಗೆ ಪ್ರಿಯವಾಗಿ ಕಂಡಿತು. "ಆಹಾ! ಇವನು ಯಾರ ಮಗನೊ? ಇವನಲ್ಲಿ ನನ್ನ ಸಹೋದರರ ಗುಣಗಳೆಲ್ಲ ಕಂಡುಬರುತ್ತವೆ. ಈ ಬಾಲಕನ ಧೃಷ್ಟತನವನ್ನು ನೋಡಿದರೆ, ನಮ್ಮ ಅರ್ಜುನನ ಮಗನಾದ ಅಭಿಮನ್ಯುವಿನ ಜ್ಞಾಪಕವಾಗುತ್ತದೆ" ಎಂದುಕೊಂಡು, ಆ ಬ್ರಾಹ್ಮಣವಟುವನ್ನು ಬಿಟ್ಟುಬಿಡುವಂತೆ ಪುನಃ ಹೇಳಿದನು.

ಆದರೆ ಘಟೋತ್ಕಚನು, ತಾಯಿಯ ಆಜ್ಞೆಯ ಪ್ರಕಾರವಾಗಿ ಮನುಷ್ಯನೊಬ್ಬನನ್ನು ಹಿಡಿದವನು, ತಾಯಿಯ ಆಜ್ಞೆಯಿಲ್ಲದೆ ಅವನನ್ನು ಬಿಡಲು ಒಪ್ಪಲಿಲ್ಲ. "ನಮ್ಮ ತಂದೆಯೇ ಬಂದು, ಬಿಡು ಎಂದು ಹೇಳಿದರೂ ಬಿಡುವುದಿಲ್ಲ" ಎಂದನು.

ಆ ಮಾತು ಭೀಮನ ಮನಸ್ಸಿಗೆ ಒಪ್ಪಿಗೆಯಾಯಿತು. "ಹೌದು, ತಾಯಿ ಎಲ್ಲ ದೇವರಿಗಿಂತ ಹಿರಿಯ ದೇವತೆ. ಇವನು ರಾಕ್ಷಸನಾದರೂ ಗುರುಶುಶ್ರೂಷೆಯಲ್ಲಿ ಎಷ್ಟು ಆಸಕ್ತಿ!" ಎಂದು ಮೆಚ್ಚಿಕೊಂಡು, ಅವನ ತಾಯಿಯ ಹೆಸರನ್ನು ಬೆಸಗೊಂಡನು.

ಅದಕ್ಕೆ ಘಟೋತ್ಕಚನು "ನನ್ನ ತಾಯಿ ಹಿಡಿಂಬೆಯೆಂಬ ರಾಕ್ಷಸಿ. ಆಕೆಯು ಕುರುಕುಲಪ್ರದೀಪನೆನಿಸಿದ ಮಹಾತ್ಮನಾದ ಪಾಂಡುಪುತ್ರನನ್ನು ವರಿಸಿ, ಭಾಗ್ಯವತಿಯಾದಳು. ಆಕಾಶವು ಪೂರ್ಣ

ಚಂದ್ರನನ್ನು ಪಡೆದಂತೆ ನನ್ನ ತಾಯಿ ನನ್ನ ತಂದೆಯನ್ನು ಸೇರಿದಳು" ಎಂದು ಅಭಿಮಾನದಿಂದ ಹೇಳಿದನು.

ಆಗ ಭೀಮನು "ಓಹೋ! ಇವನು ಹಿಡಿಂಬೆಯ ಮಗನೋ! ಅವಕ್ಕೇ ಇವನಿಗೆ ಈ ಗರ್ವ! ರೂಪದಲ್ಲೂ ಸತ್ತ್ವದಲ್ಲೂ ಬಲದಲ್ಲೂ ಇವನು ತಂದೆಯಂತಿದ್ದರೂ ಅದೇಕೋ ಪ್ರಜೆಗಳಲ್ಲಿ ಇವನಿಗೆ ಕರುಣೆಯಿಲ್ಲವಲ್ಲ !" ಎಂದುಕೊಂಡು, ಆ ಬ್ರಾಹ್ಮಣವಟುವನ್ನು ಬಿಟ್ಟುಕೊಡುವಂತೆ ಪುನಃ ಹೇಳಿದನು. ಆದರೂ ಘಟೋತ್ಕಚನು ತನ್ನ ಹಿಂದಿನ ಹಠವನ್ನೇ ಹಿಡಿಯಲು, ಆ ವಟುವಿಗೆ ಬದಲಾಗಿ ತಾನೇ ಅವನೊಡನೆ ಹೋಗುವುದಾಗಿ ಭೀಮನು ಮುಂದೆ ಬಂದನು. ತನಗೆ ಬದಲಾಗಿ ಈ ಅಪರಿಚಿತನು ರಾಕ್ಷಸನೊಡನೆ ಹೋಗುವುದನ್ನು ಆ ಎರಡನೆಯ ಮಗ ತಾನು ಒಪ್ಪಲಿಲ್ಲ. "ನನ್ನ ಬಂಧುಗಳ ಜೀವವನ್ನು ಉಳಿಸಲು ನಾನು ಮೊದಲೇ ನನ್ನ ಜೀವವನ್ನು ಮೀಸಲು ಕೊಟ್ಟಿದ್ದೇನೆ. ಯುವಕನೂ ರೂಪವಂತನೂ ಗುಣಶಾಲಿಯೂ ಆದ ನೀನು ನನಗಾಗಿ ಸಾಯುವುದು ಬೇಡ" ಎಂದು ಭೀಮನನ್ನು ತಡೆದನು. ಅದಕ್ಕೆ ಭೀಮನು "ಇದು ಸರಿಯಲ್ಲ. ಕ್ಷತ್ರಿಯನಾದ ನಾನು ಬ್ರಾಹ್ಮಣರಾದ ನಿಮ್ಮ ಜೀವವನ್ನು ಉಳಿಸುವುದಕ್ಕಾಗಿ ಪ್ರಯತ್ನಿಸಬೇಕಾದುದು ನನ್ನ ಧರ್ಮ" ಎಂದು ಅವನನ್ನು ಸಮಾಧಾನಗೊಳಿಸಿದನು.

ಈ ವ್ಯಥಾ ವಾಗ್ವಾದದಿಂದ ತಡವಾಗುತ್ತಿದ್ದುದನ್ನು ಘಟೋತ್ಕಚನು ಕಂಡು, "ಕ್ಷತ್ರಿಯನೆಂದು ಗರ್ವಪಡುತ್ತಿರುವ ಇವನನ್ನೇ ಕೊಂಡು ತೆಗೆದುಕೊಂಡು ಹೋಗುತ್ತೇನೆ" ಎಂದು ನಿಶ್ಚಯಿಸಿ, "ಎಲೈ! ಇವನನ್ನು ಉಳಿಸುವುದಾದರೆ ನೀನೇ ನನ್ನ ಹಿಂದೆ ಬಾ" ಎಂದು ಭೀಮನನ್ನು ಕರೆದನು.

ತನಗೆ ಮಗನ ಗುರುತಾಗಿದ್ದರೂ ಮಗನಿಗೆ ಮಾತ್ರ ತನ್ನ ಗುರುತು ತಿಳಿಯದಿದ್ದುದನ್ನು ಕಂಡು, ಭೀಮನಿಗೆ ಅವನನ್ನು ಸ್ವಲ್ಪ

ವಿನೋದ ಮಾಡಬೇಕೆನ್ನಿಸಿತು. ಆದಕಾರಣ "ನೀನು ವೀರನಾದ ರೇನು, ಬಲಶಾಲಿಯಾದರೇನು? ನಾನು ಯಾರನ್ನೂ ಹಿಂಬಾಲಿಸು ವವನಲ್ಲ. ನಿನಗೆ ಅಷ್ಟು ಶಕ್ತಿಯಿದ್ದರೆ, ಬಲಪ್ರಯೋಗದಿಂದ ನನ್ನನ್ನು ಎಳೆದುಕೊಂಡು ಹೋಗು" ಎಂದನು.

ಘಟೋತ್ಕಚನು ಅವನನ್ನು ಹೆದರಿಸಬೇಕೆಂದು "ನಾನು ಯಾರು, ಗೊತ್ತೊ?" ಎಂದು ಗರ್ಜಿಸಿದನು. ಭೀಮನು ನಗುತ್ತ "ಓಹೋ, ನೀನು ನನ್ನ ಮಗನಲ್ಲವೆ!" ಎಂದನು. ಘಟೋತ್ಕಚನು ಕೆರಳಿ, "ಏನೆಂದೆ? ನಿನ್ನ ಮಗನೆ?" ಎಂದೆನ್ನಲು, ಭೀಮನು "ಅಷ್ಟು ಕೋಪ ಏಕಯ್ಯ? ತಾಳಿಕೊ, ತಾಳಿಕೊ. ಕ್ಷತ್ರಿಯರಾದ ನಾವು ಎಲ್ಲ ಪ್ರಜೆಗಳನ್ನೂ ಮಕ್ಕಳೆಂದೇ ಕರೆಯುತ್ತೇವೆ. ಆದ್ದರಿಂದ ಹಾಗೆ ಹೇಳಿದೆ" ಎಂದು ಸಮಾಧಾನಹೇಳಿದನು. ಭೀಮನು ಹೆದರಿ ಕೊಂಡನೆಂದು ಘಟೋತ್ಕಚನು ತಿಳಿದುಕೊಂಡು ಅವನನ್ನು ಹಂಗಿಸಿ ದನು. ಅದಕ್ಕೆ ಭೀಮನು "ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತೇನೆ. ಭಯವೆಂದರೆ ಏನೆಂಬುದನ್ನು ಇದುವರೆಗೆ ನಾನು ಕಂಡಿಲ್ಲ. ಆ ಭಯವೆಂಬುದು ಹೇಗಿದೆಯೆಂದು ಈಗ ನಿನ್ನಿಂದ ಕಲಿಯಬೇಕೆಂದಿ ದ್ದೇನೆ. ಹೇಳಪ್ಪ, ಕೇಳೋಣ. ಅದರ ಗುಣದೋಷಗಳನ್ನು ತಿಳಿದ ಮೇಲೆ ಏನು ಮಾಡಬೇಕೋ ನೋಡೋಣ" ಎಂದು ಅವನನ್ನು ಅಣಕಿಸಿದನು.

ಘಟೋತ್ಕಚನಿಗೆ ಮಹಾರೋಷ ಬಂದಿತು. "ಇದೋ, ಭಯ ವನ್ನು ಉಪದೇಶಮಾಡುತ್ತೇನೆ. ಆಯುಧವನ್ನು ಹಿಡಿಮಕೊ" ಎಂದು ಯುದ್ಧಕ್ಕೆ ಕರೆದನು. "ಆಯುಧವನ್ನು ಹೊಸದಾಗಿ ಹಿಡಿಯ ಬೇಕಾಗಿಲ್ಲ. ಸದಾ ಹಿಡಿದೇ ಇದ್ದೇನೆ" ಎಂದು ಭೀಮನು ಹೇಳಿ, ತಾನು ಆಡಿದುದು ಘಟೋತ್ಕಚನಿಗೆ ಅರ್ಥವಾಗದೆ ಹೋದುದನ್ನು ಕಂಡು, "ಚಿನ್ನದ ಕಂಬದಂತಿರುವ ಈ ತೋಳು ನೋಡು. ಶತ್ರು

ಗಳನ್ನು ಅಡಗಿಸುವುದರಲ್ಲಿಯೇ ಸದಾ ಆಸಕ್ತವಾಗಿರುವ ಈ ಬಲದ ತೋಳೇ ನನಗೆ ತಕ್ಕ ಆಯುಧ" ಎಂದನು. ಅದಕ್ಕೆ ಘಟೋತ್ಕಚನು "ಈ ಮಾತನ್ನು ನನ್ನ ತಂದೆಯಾದ ಭೀಮಸೇನನು ಹೇಳಿದರೆ, ಅದು ಅವನಿಗೆ ಒಪ್ಪುತ್ತದೆ" ಎಂದನು.

ಆಗ ಭೀಮನು ಮಗನ ಮಾತುಗಳನ್ನು ಕೇಳಿ ಒಳಗೊಳಗೆಯೇ ನಗುತ್ತ, "ಅದು ಯಾರಯ್ಯ, ಆ ಭೀಮ? ಯಾರ ಹಾಗಿದ್ದಾನೆ ಅವನು? ಬ್ರಹ್ಮನ ಹಾಗೊ? ಶಿವನ ಹಾಗೊ? ಕೃಷ್ಣನ ಹಾಗೊ? ಇಂದ್ರನ ಹಾಗೊ? ಅಥವಾ ಯಮನ ಹಾಗೊ?" ಎಂದು ಏನೂ ತಿಳಿಯದವನ ಹಾಗೆ ಕೇಳಿದನು. ಘಟೋತ್ಕಚನು ತಂದೆಯ ಮೇಲಿನ ಅಭಿಮಾನದಿಂದ "ನಮ್ಮ ತಂದೆ ಈ ಎಲ್ಲರಿಗೂ ಸಮನಾದವನು" ಎಂದನು. ಭೀಮನು ಅವನನ್ನು ಇನ್ನೂ ರೇಗಿಸಬೇಕೆಂದು "ಅದು ಸುಳ್ಳು" ಎಂದನು.

ಘಟೋತ್ಕಚನ ಕೋಪ ಮಿತಿಮೀರಿತು. "ಎಲಾ! ನನ್ನ ಮಾತನ್ನು ಸುಳ್ಳೆನ್ನುವೆಯ? ನನ್ನ ತಂದೆಯನ್ನು ನಿಂದಿಸುವೆಯ?" ಎಂದು, ಒಂದು ದಪ್ಪ ಮರವನ್ನು ಕಿತ್ತು, ಅದರಿಂದ ಭೀಮನನ್ನು ಹೊಡೆದನು. ಭೀಮನಿಗೇನೂ ಹಾನಿಯಾಗಲಿಲ್ಲ. "ಮತ್ತೇನು ಮಾಡಲಿ?" ಎಂದುಕೊಂಡು ಘಟೋತ್ಕಚನು ಒಂದು ಬೆಟ್ಟದ ಕೋಡುಗಲ್ಲನ್ನು ಕಿತ್ತು, "ಈ ಬಂಡೆ ನಿನ್ನ ಜೀವವನ್ನು ಹಿಂಡಿಬಿಡುತ್ತದೆ" ಎಂದು ಅದನ್ನು ಅವನ ಮೇಲೆ ಎಸೆದನು. ಭೀಮನು ಅದನ್ನೂ ತಪ್ಪಿಸಿಕೊಂಡು, "ಕಾಡಾನೆ ಎಷ್ಟು ರೇಗಿದರೂ ಹುಲಿಯನ್ನು ಹೆದರಿಸಲಾರದಯ್ಯಾ!" ಎಂದನು.

ಹೀಗೆ ಏನು ಮಾಡಿದರೂ ಅವನನ್ನು ಕೊಲ್ಲಲು ಸಾಧ್ಯವಾಗದಿರಲು, ಕಡೆಗೆ "ಭೀಮಸೇನನ ಮಗನೂ ವಾಯುವಿನ ಮೊಮ್ಮಗನೂ ಆದ ನಾನು ಮಲ್ಲಯುದ್ಧದಲ್ಲಿ ಅಸಮಾನನಾದವನು. ಇದೋ,



ಭೀಮನೂ ಘಟೋತ್ಕಚನೂ ಮಲ್ಲಯುದ್ಧಕ್ಕೆ ಸಿದ್ಧವಾದರು

ಸಿದ್ಧನಾಗು. ನಿನ್ನನ್ನು ಹಿಡಿದು ಸೋಲಿಸುತ್ತೇನೆ" ಎಂದು ಘಟೋತ್ಕಚನು ಭೀಮನೆದುರಿಗೆ ಸಿದ್ಧನಾಗಿ ನಿಂತನು.

ಆಗ ತಂದೆಮಕ್ಕಳು ಇಬ್ಬರೂ ಮಲ್ಲಯುದ್ಧವಾಡಿದರು. ಗಟ್ಟಿಯಾದ ಹಗ್ಗಗಳಿಂದ ಆನೆಯನ್ನು ಕಟ್ಟುವಂತೆ ಘಟೋತ್ಕಚನು ತನ್ನ ತೋಳುಗಳಿಂದ ಭೀಮನನ್ನು ಬಂಧಿಸಿ, "ಅದು ಹೇಗೆ ಬಿಡಿಸಿಕೊಳ್ಳುವೆಯೋ ನೋಡೋಣ" ಎಂದನು. ಮಗನ ಬಾಹುಬಲವನ್ನು ಅಳೆದು, ಭೀಮನಿಗೆ ಹಿಡಿಸಲಾರದಷ್ಟು ಸಂತೋಷವಾಯಿತು. ದುರ್ಯೋಧನನ ಶತ್ರುಪಕ್ಷ ಬೆಳೆಯುತ್ತಿದೆಯೆಂದು ಅವನು ಹಿಗ್ಗಿದನು. "ಇದೋ, ಹೀಗೆ ಬಿಡಿಸಿಕೊಳ್ಳುತ್ತೇನೆ, ನೋಡು. ನೀನು ಎಷ್ಟೇ ಎಚ್ಚರದಿಂದಿದ್ದರೂ ಬಿಡಿಸಿಕೊಳ್ಳುತ್ತೇನೆ, ನೋಡು" ಎಂದು ಹೇಳುತ್ತಿದ್ದ ಹಾಗೆಯೇ ಭೀಮನು ಮಗನ ಬಾಹುಬಂಧದಿಂದ ಬಿಡಿಸಿಕೊಂಡು, "ನಾನೇ ಅತ್ಯಂತ ಬಲಶಾಲಿ ಎಂಬ ಹೆಮ್ಮೆಯನ್ನು ಮರೆತುಬಿಡು. ನಿನ್ನ ಸಾಮರ್ಥ್ಯವನ್ನು ನಾನು ಈಗ ಕಂಡಿದ್ದೇನೆ. ಮಲ್ಲಯುದ್ಧದಲ್ಲಿ ನನಗೆ ಯಾವಾಗಲೂ ಆಯಾಸವಾಗುವುದಿಲ್ಲ ಎಂದನು.

ಇಂತಹ ಎದುರಾಳಿಯನ್ನು ಹೇಗೆ ಕಟ್ಟಿಕೊಂಡೊಯ್ಯಬೇಕೋ ಘಟೋತ್ಕಚನಿಗೆ ತೋರದಾಯಿತು. ಆದರೆ ಉತ್ತರಕ್ಷಣದಲ್ಲೇ ತನಗೆ ತನ್ನ ತಾಯಿ ತಿಳಿಸಿಕೊಟ್ಟಿದ್ದ ಮಾಯಾಪಾಶದ ಜ್ಞಾಪಕವಾಯಿತು. ಒಡನೆಯೇ ಪಕ್ಕದಲ್ಲಿದ್ದ ಪರ್ವತವನ್ನು ಪ್ರಾರ್ಥಿಸಿ ನೀರನ್ನು ಪಡೆದು, ಆಚಮನಮಾಡಿ ಶುದ್ಧನಾಗಿ, ಮಾಯಾಪಾಶವನ್ನು ಭೀಮನ ಮೇಲೆ ಪ್ರಯೋಗಿಸಿದನು. ಆ ಮಾಯಾಪಾಶದ ಕಟ್ಟಿಗೆ ಸಿಕ್ಕಿಬಿದ್ದ ಭೀಮನು ಅದನ್ನು ಬಿಡಿಸಿಕೊಳ್ಳುವುದಕ್ಕಾಗಿ ಮಹೇಶ್ವರನ ಪ್ರಸಾದದಿಂದ ತಾನು ಪಡೆದ ಮಾಯಾಪಾಶಮೋಕ್ಷದ ಮಂತ್ರವನ್ನು ಜ್ಞಾಪಿಸಿಕೊಂಡನು. ಒಡನೆಯೆ ವೃದ್ಧ

ಕೇಶವದಾಸನ ಕಮಂಡಲದ ನೀರನ್ನು ತರಿಸಿಕೊಂಡು, ಆಚಮನ ಮಾಡಿ ಶುದ್ಧನಾಗಿ, ಮಂತ್ರವನ್ನು ಜಪಿಸಿ, ಮಾಯಾಪಾಶದಿಂದ ಮುಕ್ತನಾದನು.

ಮುಂದೇನು ಮಾಡಬೇಕೋ ಘಟೋತ್ಕಚನಿಗೆ ತೋರದಾಯಿತು. ಕಡೆಗೆ "ಅಯ್ಯಾ, ಬ್ರಾಹ್ಮಣವಟುವನ್ನು ಬಿಡುವುದಾದರೆ ನಾನು ಬರುವೆನೆಂದು ಒಪ್ಪಿಕೊಂಡಿದ್ದೆಯಲ್ಲ. ಆ ಒಪ್ಪಂದವನ್ನು ನೆನೆದು, ಬಾ" ಎಂದು ವಿನಯದಿಂದ ಕರೆದನು. "ಹಾಗಾದರೆ ಆಗ ಬಹುದು" ಎಂದು ಭೀಮನು ಅವನ ಜೊತೆಯಲ್ಲಿ ಹೊರಟನು. ಜಡಿ ಮಳೆಯು ಸುರಿಯುವಾಗ ಮೈಮೇಲೆ ಬಿದ್ದ ಹನಿಗಳನ್ನು ಒದರುತ್ತ ಗೂಳಿ ಮುಂದೆ ನುಗ್ಗುವ ಹಾಗೆ ಭೀಮನು ಆ ಉಗ್ರರೂಪದ, ಉಗ್ರ ವೀರ್ಯದ ರಾಕ್ಷಸನನ್ನು ದಮನಮಾಡಿ, ಅವನ ಸಂಗಡ ಹೋದನು.

§ ೫

ಅವರಿಬ್ಬರೂ ಬಹುಬೇಗನೆ ಹಿಡಿಂಬಾದೇವಿಯಿದ್ದ ಸ್ಥಳಕ್ಕೆ ಬಂದರು. ಘಟೋತ್ಕಚನು ಅವನನ್ನು ಅಲ್ಲೇ ನಿಲ್ಲಿಸಿ, ತಾನು ತಾಯಿಯ ಹತ್ತಿರ ಹೋಗಿ, ಅವಳಿಗೆ ಅಭಿವಂದಿಸಿ, ಅವಳ ಪಾರಣೆಗಾಗಿ ತಾನು ಮನುಷ್ಯನನ್ನು ಹಿಡಿದು ತಂದಿರುವ ವಾರ್ತೆಯನ್ನು ತಿಳಿಸಿದನು. ಹಿಡಿಂಬೆ ಮಗನನ್ನು ಹರಸಿ, ಅದೆಂಥ ಮನುಷ್ಯನನ್ನು ತಂದಿರುವನೋ ಎಂದು ಕುತೂಹಲದಿಂದ ಕೇಳಿದಳು. ಘಟೋತ್ಕಚನು "ಮಾತಿನಲ್ಲಿ ಮನುಷ್ಯನೇ ಹೊರತು, ಅವನ ವೀರ್ಯವನ್ನು ನೋಡಿದರೆ ಮನುಷ್ಯನೆನ್ನುವ ಹಾಗಿಲ್ಲ" ಎಂದನು. "ಹಾಗಾದರೆ, ಅವನು ಬ್ರಾಹ್ಮಣನೆ?" "ಬ್ರಾಹ್ಮಣನಲ್ಲ." "ಮುದುಕನೆ?" "ಮುದುಕನಲ್ಲ." "ಹುಡುಗನೆ?" "ಹುಡುಗನೂ ಅಲ್ಲ."

"ಹಾಗಾದರೆ, ಅದೆಂತಹವನನ್ನು ಹಿಡಿದುಕೊಂಡು ಬಂದಿರುವೆಯೋ ನೋಡೋಣ" ಎಂದು ಹಿಡಿಂಬೆ ಈಚೆ ಬಂದೊಡನೆಯೇ

ಭೀಮನನ್ನು ಕಂಡು, "ಈ ಮನುಷ್ಯನನ್ನೇ ನೀನು ಹಿಡಿದು ತಂದದ್ದು? ಈತನು ಮನುಷ್ಯನಲ್ಲವೋ! ಈತನು ದೇವತೆ" ಎಂದು ಘಟೋತ್ಕಚ ನನ್ನು ಗದರಿದಳು. ಘಟೋತ್ಕಚನು ಬೆಪ್ಪಾಗಿ, "ದೇವತೆಯೇ? ಯಾರಿಗೆ ದೇವತೆ?" ಎಂದನು. "ನನಗೂ ನಿನಗೂ" ಎಂದಳು ಹಿಡಿಂಬೆ. "ಸಾಕ್ಷಿಯೇನು?" ಎಂದ ಘಟೋತ್ಕಚ. "ಇದೇ ಸಾಕ್ಷಿ" ಎಂದು ಹಿಡಿಂಬೆಯು "ಆರ್ಯಪುತ್ರನಿಗೆ ಜಯವಾಗಲಿ" ಎಂದು ಭೀಮನನ್ನು ನುಡಿಸಿದಳು.

ಭೀಮನು ಆ ನುಡಿಯನ್ನು ಕೇಳಿ, ಕಣ್ಣೆತ್ತಿ ಹಿಡಿಂಬೆಯನ್ನು ಕಂಡು, "ಯಾರು? ದೇವಿ ಹಿಡಿಂಬೆಯೆ? ದೇವಿ, ಹಿಂದೆ ನಾವು ರಾಜ್ಯವನ್ನು ಕಳೆದುಕೊಂಡು ಕಾಡಿನಲ್ಲಿ ಕೋಟಲೆಪಡುತ್ತಿದ್ದಾಗ ನೀನು ನಮ್ಮ ಸಂತಾಪವನ್ನು ಹೋಗಲಾಡಿಸಿದೆ" ಎಂದು ಅವಳ ಉಪಕಾರವನ್ನು ಸ್ಮರಿಸಿ, "ಹಿಡಿಂಬೇ, ಇದೇನಿದು?" ಎಂದು ಅವಳು ಮನುಷ್ಯಮಾಂಸವನ್ನು ತರಿಸಿಕೊಂಡ ಕಾರಣವನ್ನು ಕುರಿತು ಕೇಳಿದನು. ಹಿಡಿಂಬೆ ಲಜ್ಜೆಯಿಂದ 'ಅದು, ಹೀಗೆ' ಎಂದು ಅವನ ಕಿವಿಯಲ್ಲಿ ಏನೋ ಪಿಸುಗುಟ್ಟಿದಳು. "ಓಹೋ! ಹಾಗೋ! ರಾಕ್ಷಸರ ಮನೆಯಲ್ಲಿ ಹುಟ್ಟಿದುದು ಅಷ್ಟೇ ಹೊರತು ನಡತೆಯಲ್ಲಿ ನೀನು ರಾಕ್ಷಸಿಯಲ್ಲ" ಎಂದು ಭೀಮನು ಹಿಡಿಂಬೆಯನ್ನು ಪ್ರಶಂಸಿಸಿದನು.

ಅನಂತರ ಹಿಡಿಂಬೆಯು ನಡೆದುದು ಏನೊಂದೂ ಅರ್ಥವಾಗದೆ ಕಿಂಕರ್ತವ್ಯಮೂಢನಾಗಿ ನಿಂತಿದ್ದ ಘಟೋತ್ಕಚನನ್ನು ಕರೆದು "ಹುಚ್ಚ, ತಂದೆಗೆ ವಂದಿಸು" ಎಂದಳು. ಘಟೋತ್ಕಚನು ಭೀಮನ ಕಾಲಿಗೆರಗಿ, "ತಂದೆಯೇ, ಧೃತರಾಷ್ಟ್ರನ ಮಕ್ಕಳೆಂಬ ಕಾಡಿಗೆ ಕಾಡುಗಿಚ್ಚಾದ ನಾನು, ಘಟೋತ್ಕಚನು, ವಂದಿಸುತ್ತೇನೆ" ಎಂದು ಅಭಿವಂದಿಸಿ, ತಿಳಿಯದೆ ಮಾಡಿದ ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಬೇಡಿದನು. ಭೀಮನು ಮಗನನ್ನು ಎತ್ತಿ ತಬ್ಬಿಕೊಂಡು,

"ಮಗನೆ, ನೀನು ತಿಳಿಯದೆ ಅವಿನಯದಿಂದ ಅಪಚಾರಮಾಡಿದ್ದು ಕೂಡ ನಮಗೆ ಇಷ್ಟವೇ. ಧಾರ್ತರಾಷ್ಟ್ರರ ವನಕ್ಕೆ ಕಾಡುಕಿಚ್ಚಾಗಿರುವ ನಿನ್ನಂತಹ ಮಕ್ಕಳನ್ನೇ ನಿನ್ನ ತಂದೆಯರಾದ ಪಾಂಡವರು ಸದಾ ಬಯಸುವುದು" ಎಂದು ಅವನನ್ನು ಮೆಚ್ಚಿ, "ಅಸಮಾನವಾದ ಬಲಪರಾಕ್ರಮಗಳುಳ್ಳವನಾಗು" ಎಂದು ಆಶೀರ್ವಾದ ಮಾಡಿದನು.

ಈ ನಡುವೆ ಕೇಶವದಾಸನು ತಾನೂ ತನ್ನ ಹೆಂಡತಿ ಮಕ್ಕಳೊಡನೆ ಭೀಮಘಟೋತ್ಕಚರ ಹಿಂದೆಯೇ ಬಂದಿದ್ದನು. ಈ ಮೊದಲೇ ಅವನಿಗೆ ಮಧ್ಯಮನೆಂದು ಬಂದವನು ಪಾಂಡವಮಧ್ಯಮನಾದ ಭೀಮನೇ ಇರಬೇಕು ಎನ್ನಿಸಿತ್ತು. ಆದರೆ ಆ ರಾಕ್ಷಸನು ಯಾರೆಂಬುದು ತಿಳಿದಿರಲಿಲ್ಲ. ಈಗ ಅವರ ಪರಸ್ಪರ ಸಮಾಗಮವನ್ನು ಕಂಡ ಬಳಿಕ, "ಹಾಗಾದರೆ ಇವನೇ ಭೀಮನ ಮಗನಾದ ಘಟೋತ್ಕಚನೇನು!" ಎಂದು ನಿರ್ಭೀತಿಯಿಂದ ಪತ್ನೀಪುತ್ರರೊಡನೆ ಮುಂದೆ ಬಂದನು.

ಘಟೋತ್ಕಚನು ತಂದೆಯ ಅಪ್ಪಣೆಯ ಮೇರೆಗೆ ಕೇಶವದಾಸನಿಗೆ ಅಭಿವಂದಿಸಿದನು. ಕೇಶವದಾಸನು "ತಂದೆಯಂತೆಯೇ ಗುಣಶಾಲಿಯೂ ಕೀರ್ತಿವಂತನೂ ಆಗು" ಎಂದು ಆಶೀರ್ವದಿಸಿದನು.

ಅನಂತರ ಕೇಶವದಾಸನು ಭೀಮನನ್ನು ಕುರಿತು, "ನೀನು ಈ ದಿನ ನಿನ್ನ ಮಗನನ್ನು ತಡೆದು ನಮ್ಮ ಕುಲವನ್ನು ಉಳಿಸಿದೆ, ನಿನ್ನ ಕುಲವನ್ನೂ ಉಳಿಸಿಕೊಂಡೆ" ಎಂದು ಹೇಳಿ, ಮುಂದೆ ಹೊರಡಲು ಅಪ್ಪಣೆ ಕೇಳಿದನು. ಭೀಮನು ಕೂಡ "ತಮ್ಮ ಅನುಗ್ರಹದಿಂದ ನಾನು ಈ ದಿನ ನನ್ನ ಪತ್ನೀಪುತ್ರರನ್ನು ಕೂಡಿದೆನು. ಹತ್ತಿರದಲ್ಲಿಯೇ ನಮ್ಮ ಆಶ್ರಮವಿದೆ, ಅಲ್ಲಿ ವಿಶ್ರಮಿಸಿಕೊಂಡು ಹೋಗಬಹುದು" ಎಂದನು. ಅದಕ್ಕೆ ಕೇಶವದಾಸನು "ಈ ದಿನ ನಮಗೆ ಪ್ರಾಣದಾನ ಮಾಡಿದುದಕ್ಕಿಂತ ದೊಡ್ಡ ಆತಿಥ್ಯ ಬೇರೇನು

ಬೇಕು! ಆದ್ದರಿಂದ ನಾವಿನ್ನು ಹೊರಡುತ್ತೇವೆ" ಎಂದೆನ್ನಲು, "ಪೂಜ್ಯರು ಹೆಂಡತಿ ಮಕ್ಕಳೊಡನೆ ಹೊರಡಬಹುದು. ಮತ್ತೆ ಹಿಂದಿರುಗಿ ಹೋಗುವಾಗ ಹೀಗೇ ಬಂದು ದರ್ಶನಕೊಡಬೇಕು" ಎಂದು ಭೀಮನು ಅವನನ್ನು ಪ್ರಾರ್ಥಿಸಿ ಒಪ್ಪಿಸಿದನು.

ಅನಂತರ ಭೀಮನೂ ಹಿಡಿಂಬೆ ಘಟೋತ್ಕಚರೂ ಕೇಶವದಾಸನನ್ನೂ ಅವನ ಕುಟುಂಬವನ್ನೂ ಆಶ್ರಮದ ಬಾಗಿಲವರೆಗೂ ಕಳುಹಿಸಿಕೊಟ್ಟು, ಹಿಂದಿರುಗಿ ಬಂದರು.

# ದೂತವಾಕ್ಯದ ಕಥೆ

## § ೧

ಪಾಂಡವರು ಹನ್ನೆರಡು ವರುಷಕಾಲ ವನವಾಸ ಮಾಡಿದುದಾಯಿತು. ಅನಂತರ ಆಗಬೇಕಾಗಿದ್ದ ಒಂದು ವರುಷದ ಅಜ್ಞಾತವಾಸವೂ ಮುಗಿಯಿತು. ಆದರೆ ಅವರು ಹಿಂದಿರುಗಿದ ಮೇಲೆ ಅವರಿಗೆ ನ್ಯಾಯವಾಗಿ ಕೊಡಬೇಕಾಗಿದ್ದ ಅರ್ಧರಾಜ್ಯವನ್ನು ಕೊಡಲು ದುರ್ಯೋಧನನು ಇಷ್ಟಪಡಲಿಲ್ಲ. ಯುದ್ಧಮಾಡಿಯೇ ತೀರುವೆನೆಂದು ಛಲಹಿಡಿದನು. ಯುದ್ಧದ ಉತ್ಸವವನ್ನು ನೆನೆದು ಅವನ ಹೃದಯ ಸಂತೋಷದಿಂದ ಉಬ್ಬಿ, ಪಾಂಡವರ ಮೇಲಿನ ರೋಷವನ್ನು ಮರೆತು ನಲಿಯುತ್ತಿತ್ತು. ಪಾಂಡವರ ಪಾಳಯಕ್ಕೆ ನುಗ್ಗಿ, ಮದದಾನೆಗಳ ದಂತಗಳನ್ನು ಕಿತ್ತು ಕಳೆಯಬೇಕೆಂಬ ಬಲವಾದ ಇಚ್ಛೆಯುಳ್ಳವನಾಗಿ ತನ್ನ ಸೈನ್ಯದ ನಾಯಕತನವನ್ನು ಯಾರಿಗೆ ಒಪ್ಪಿಸಬೇಕೆಂದು ನಿಷ್ಕರ್ಷಿಸಲೋಸುಗ ಮಂತ್ರಶಾಲೆಯಲ್ಲಿ ತನ್ನವರನ್ನು ಸಭೆಗೆ ಬರಹೇಳಿದನು. ದುರ್ಯೋಧನನ ಆಜ್ಞೆಯಂತೆ ದ್ರೋಣ ಭೀಷ್ಮರೂ ಕರ್ಣ ಶಕುನಿಗಳೂ ವೈಕರ್ಣ ವರ್ಷದೇವ ಮುಂತಾದ ಇನ್ನಿತರ ರಾಜರುಗಳೂ ಬಂದು ಅವನನ್ನು ನಿರೀಕ್ಷಿಸುತ್ತ ಮಂತ್ರಶಾಲೆಯ ಹೊರಗೆ ನಿಂತಿದ್ದರು.

ಸಕಾಲದಲ್ಲಿ ದುರ್ಯೋಧನನು ಮಂತ್ರಶಾಲೆಗೆ ತನ್ನ ತಮ್ಮಂದಿರೊಡನೆ ಬಂದನು. ಶ್ಯಾಮವರ್ಣದ ಆ ಯುವಕ ದುರ್ಯೋಧನನು ಉತ್ತಮವಾದ ಸುಗಂಧಗಳನ್ನು ಲೇಪನಮಾಡಿಕೊಂಡು, ಬಿಳಿಯ ಬಟ್ಟೆಗಳನ್ನು ಉಟ್ಟು ಹೊದೆದು, ಛತ್ರಚಾಮರಗಳ ನಡುವೆ ಮೆರೆದು ಬಂದನು. ಅವನ ದೇಹದ ಸುತ್ತಲೂ ರಂಜಿಸುತ್ತಿದ್ದ ಅಲಂಕಾರಗಳ ರತ್ನಪ್ರಭೆಯನ್ನು ನೋಡಿದರೆ ನಕ್ಷತ್ರಗಳ

ನಡುವೆ ಹೊಳೆಯುವ ಹುಣ್ಣಿಮೆಯ ಚಂದ್ರನನ್ನು ನೋಡಿ ದಂತಾಗುತ್ತಿತ್ತು.

ಹೀಗೆ ಮಂತ್ರಶಾಲೆಗೆ ಬಂದ ದುರ್ಯೋಧನನು ಮೊದಲು ದ್ರೋಣಾಚಾರ್ಯರಿಗೆ ವಂದಿಸಿ, ಅನಂತರ ಪಿತಾಮಹನಾದ ಭೀಷ್ಮನಿಗೆ ನಮಸ್ಕರಿಸಿ, ಆ ಬಳಿಕ ಮಾವನಾದ ಶಕುನಿಗೆ ಮಣಿದು, ವೈಕರ್ಣ ವರ್ಷದೇವ ಮೊದಲಾದ ಇತರ ಆರ್ಯರನ್ನು ಸ್ವಾಗತಿಸಿ, ಪ್ರಿಯ ಸ್ನೇಹಿತನಾದ ಕರ್ಣನನ್ನು ಸಂಗಡ ಕರೆದುಕೊಂಡು ಮಂತ್ರಶಾಲೆ ಯೊಳಕ್ಕೆ ಪ್ರವೇಶಿಸಿದನು. ಅಲ್ಲಿ ಆಚಾರ್ಯನಿಗೆ ಕೂರ್ಮಾಸನವನ್ನೂ ಅಜ್ಜನಿಗೆ ಸಿಂಹಾಸನವನ್ನೂ ಮಾವನಿಗೆ ಚರ್ಮಾಸನವನ್ನೂ ವೈಕರ್ಣ ವರ್ಷದೇವ ಮೊದಲಾದ ಇತರರಿಗೆ ಯಥೋಚಿತವಾದ ಆಸನ ಗಳನ್ನೂ ನೀಡಿ, ಅವರನ್ನು ಕುಳ್ಳಿರಿಸಿದನು.

ಹೀಗೆ ಅವರನ್ನೆಲ್ಲಾ ಕುಳ್ಳಿರಿಸಿದ ಅನಂತರವೇ ಸೇವಾಧರ್ಮದ ರೀತಿಯನ್ನು ಬಲ್ಲ ಆ ದುರ್ಯೋಧನನು ತಾನೂ ಕುಳಿತು, ಪ್ರಿಯ ಸ್ನೇಹಿತನಾದ ಕರ್ಣನನ್ನು ಕರೆದು ಕುಳ್ಳಿರಿಸಿಕೊಂಡು, "ವೈಕರ್ಣ ವರ್ಷದೇವ ಮೊದಲಾದ ಆರ್ಯರೇ, ಪಾಂಡವರೊಡನೆ ನಡಸಬೇ ಕಾದ ಈ ಯುದ್ಧದಲ್ಲಿ ನನ್ನ ಹನ್ನೊಂದು ಅಕ್ಷೋಹಿಣೀ ಸಂಖ್ಯೆಯ ಸೈನ್ಯಕ್ಕೆ ಯಾರನ್ನು ಸೇನಾಪತಿಯಾಗಿ ನೇಮಿಸೋಣ?" ಎಂದು ಸಲಹೆ ಕೇಳಿದನು. ಅದಕ್ಕೆ ಅವರೆಲ್ಲರೂ "ಪೂಜ್ಯನಾದ ಗಾಂಧಾರ ರಾಜನೇ ಹೇಳಲಿ" ಎಂದರು. "ಪೂಜ್ಯನಾದ ಗಾಂಗೇಯನಿರುವಾಗ ಸೇನಾಪತಿಯ ಪಟ್ಟಕ್ಕೆ ಅರ್ಹರಾದವರು ಬೇರೆ ಯಾರು ಇದ್ದಾರೆ" ಎಂದು ಆ ಶಕುನಿ ಹೇಳಿದನು.

ಮಾವನ ಮಾತು ದುರ್ಯೋಧನನಿಗೆ ಒಪ್ಪಿಗೆಯಾಯಿತು. "ಸೈನಿಕರ ವೀರಘೋಷಗಳ ಜೊತೆಗೆ ಭೇರೀನಾದಗಳೂ ಶಂಖ ಧ್ವನಿಗಳೂ ಸೇರಿ, ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿದ ಮಹಾ

ಸಮುದ್ರದ ಘೋಷಕ್ಕೆ ಸಮನಾಗುವ ಸಂಭ್ರಮಧ್ವಾನದ ನಡುವೆ ಗಾಂಗೇಯನಿಗೆ ಸೇನಾಧಿಪತ್ಯಾಭಿಷೇಕ ನಡೆಯಲಿ. ಅಂದು ಅವನ ನೆತ್ತಿಯಿಂದ ಕೆಳಗುರುಳುವ ನೀರಹನಿಗಳ ಜೊತೆಯಲ್ಲೇ ನಮ್ಮ ವೈರಿರಾಜರ ಹೃದಯಗಳೂ ಮುರಿದು ಕೆಳಗುರುಳಲಿ" ಎಂದನು.

§ ೨

ಆ ಹೊತ್ತಿಗೆ ಬಾದರಾಯಣನೆಂಬ ಕಂಚುಕಿಯು ಪ್ರವೇಶಿಸಿ, ಪಾಂಡವರ ಶಿಬಿರದಿಂದ ದೂತಕಾರ್ಯಕ್ಕಾಗಿ ಪುರುಷೋತ್ತಮನಾದ ನಾರಾಯಣನು ದಯಮಾಡಿಸಿದ್ದಾನೆ" ಎಂದು ತಿಳಿಸಿದನು.

ನೆರೆದ ರಾಜರ ನಡುವೆ ತನ್ನ ಆಶ್ರಿತನಾದ ಭೃತ್ಯನೊಬ್ಬನು ಕೃಷ್ಣನನ್ನು ಪುರುಷೋತ್ತಮನೆಂದು ಕರೆದುದನ್ನು ಕೇಳಿ ಕೌರವನು ಕಿಡಿಕಿಡಿಯಾದನು. "ಕಂಸನ ಸೇವಕನಾದವನು ನಿನಗೆ ಪುರುಷೋತ್ತಮನೋ? ಹೊಟ್ಟೆಗೆ ಹಗ್ಗ ಕಟ್ಟಿಸಿಕೊಂಡ ಆ ದಾಮೋದರನು ನಿನಗೆ ಪುರುಷೋತ್ತಮನೋ? ಯಾರ ರಾಜ್ಯ ಕೀರ್ತಿ ಭೋಗಗಳನ್ನೆಲ್ಲಾ ಆ ಜರಾಸಂಧನು ಕಸಿದುಕೊಂಡನೋ ಅವನು ನಿನಗೆ ಪುರುಷೋತ್ತಮನೋ?" ಎಂದು ಗದರಿಸಲು, ಆ ಕಂಚುಕಿ "ಉಚಿತವಾದ ನಡೆವಳಿಕೆಯನ್ನು ಗಾಬರಿಯಲ್ಲಿ ಮರೆತೆ"ನೆಂದು ಕೌರವನ ಕಾಲಿಗೆ ಬಿದ್ದು, ಕ್ಷಮಿಸಬೇಕೆಂದು ಬೇಡಿದನು. ದುರ್ಯೋಧನನು ಅವನನ್ನು ಮನ್ನಿಸಿ, "ಬಂದವನು ದೂತನಾದ ಕೇಶವನು" ಎಂದು ಆ ಕಂಚುಕಿಯ ಬಾಯಲ್ಲಿ ಹೇಳಿಸಿ, ಅನಂತರ ನೆರೆದ ರಾಜರನ್ನು ಕುರಿತು "ಎಲೈ ರಾಜರೆ, ದೂತನಾಗಿ ಬಂದಿರುವ ಈ ಕೇಶವನಿಗೆ ಏನು ಮಾಡಬೇಕು?" ಎಂದನು.

"ಆತನಿಗೆ ಅರ್ಘ್ಯವನ್ನು ಕೊಟ್ಟು ಪೂಜೆಮಾಡಬೇಕು" ಎಂದು ಎಲ್ಲರೂ ಹೇಳಿದರು.

ದುರ್ಯೋಧನನಿಗೆ ಅವರ ಸಲಹೆ ರುಚಿಸಲಿಲ್ಲ. ಕೃಷ್ಣನನ್ನು ಹಿಡಿದು ಕಟ್ಟುವುದೇ ಹಿತವೆಂದು ಕಂಡಿತು. "ಆ ವಾಸುಭದ್ರನನ್ನು ಬಂಧಿಸಿದರೆ ಪಾಂಡವರ ಕಣ್ಣುಗಳನ್ನು ಕಿತ್ತಹಾಗಾಗುತ್ತದೆ. ಪಾಂಡವರು ಗತಿಗೆಟ್ಟು ದಿಕ್ಕುತೋಚದೆ ದುಃಖಪಡುತ್ತಿದ್ದರೆ, ದಾಯಾದಿಗಳ ಕಾಟವು ತಪ್ಪಿ, ರಾಜ್ಯವೆಲ್ಲವೂ ನನ್ನದಾಗುವುದು" ಎಂದು ಆ ರಾಜರನ್ನು ಕುರಿತು "ಎಲೈ ರಾಜರೇ, ಆ ಕೇಶವನು ಇಲ್ಲಿ ಬಂದಾಗ ಯಾರು ಎದ್ದು ನಿಂತು ಅವನಿಗೆ ಮರ್ಯಾದೆ ಮಾಡುವರೋ ಅವರಿಗೆ ಹನ್ನೆರಡು ಭಾರ ಚಿನ್ನವನ್ನು ದಂಡಹಾಕುತ್ತೇನೆ" ಎಂದು ವಿಧಿಸಿದನು.

ಅನಂತರ "ನಾನು ಏಳದೆ ಕುಳಿತಿರುವುದಕ್ಕೆ ಏನು ಉಪಾಯ ಮಾಡಲಿ ?" ಎಂದು ಚಿಂತಿಸಿ, ಬಾದರಾಯಣನನ್ನು ಕರೆದು, "ದ್ರೌಪದಿಯ ಕೇಶಾಂಬರಾಕರ್ಷಣದ ಆ ಚಿತ್ರವನ್ನು ತೆಗೆದುಕೊಂಡು ಬಾ" ಎಂದು ಆಜ್ಞೆಮಾಡಿ, "ಆ ಚಿತ್ರವನ್ನೇ ನೋಡುತ್ತ, ಕೇಶವನು ಬಂದರೆ ಗಮನಿಸದೆ ಕುಳಿತೇ ಇರುವೆನು" ಎಂದುಕೊಂಡನು.

ಬಾದರಾಯಣನು ಬೇಗನೆ ಹೋಗಿ ಆ ಚಿತ್ರಪಟವನ್ನು ತಂದು ಕೊಟ್ಟನು. ದುರ್ಯೋಧನನು ಅದನ್ನು ಎದುರಿಗೆ ಹರವಿಕೊಂಡು ಅದರಲ್ಲಿಯೇ ದೃಷ್ಟಿಯಿಟ್ಟು ಕುಳಿತನು.

ಆ ಚಿತ್ರದಲ್ಲಿ ದುಶ್ಶಾಸನನು ದ್ರೌಪದಿಯನ್ನು ಮುಡಿಹಿಡಿದು ನಿಲ್ಲಿಸಿದ್ದಾನೆ. ದ್ರೌಪದಿ ಕಳವಳದಿಂದ ಕಣ್ಣು ತೆರೆದು ರಾಹುವಿನ ಬಾಯಲ್ಲಿ ಬಿದ್ದ ಚಂದ್ರಲೇಖೆಯಂತಿದ್ದಾಳೆ. ತುಂಬು ಸಭೆಯಲ್ಲಿ ದ್ರೌಪದಿಗೆ ಆದ ಅಪಮಾನವನ್ನು ಕಂಡು, ಒಂದುಕಡೆ ಭೀಮನು ಕೋಪದಿಂದ ಕೆರಳಿ, ಕೌರವರನ್ನು ಧ್ವಂಸಮಾಡಿಬಿಡುವೆನೆಂದು ಸಭಾಮಂಟಪದ ಕಂಬವನ್ನು ತೂಗಿ ನೋಡುತ್ತಿದ್ದಾನೆ. ಜೂಜಾಡಿ ಸೋತು ಬುದ್ಧಿ ಕೆಟ್ಟಿದ್ದರೂ ಸತ್ಯದಯೆಧರ್ಮಗಳನ್ನು ಬಿಡದ ಧರ್ಮ

ರಾಯನು ಕಡೆಗಣ್ಣಿನ ನೋಟದಿಂದಲೇ ಆ ಭೀಮನ ಕೋಪವನ್ನು ಶಾಂತಗೊಳಿಸುತ್ತಿದ್ದಾನೆ. ಪಕ್ಕದಲ್ಲಿ ಅರ್ಜುನನಿಗಂತೂ ಕೋಪ ದಿಂದ ಕಣ್ಣು ಕೆರಳಿ, ತುಟಿಗಳು ನಡುಗುತ್ತಿವೆ; ಶತ್ರುಗಳನ್ನೆಲ್ಲ ತೃಣ ಸಮಾನವಾಗಿ ಕಂಡು, ಅಲ್ಲಿರುವವರೆಲ್ಲರನ್ನೂ ಒರಸಿ ತೂರಿಬಿಡುವಂತೆ ತನ್ನ ಗಾಂಡೀವದ ಹೆದೆಯನ್ನು ಮೆಲ್ಲಗೆ ಎಳೆಯುತ್ತಿದ್ದಾನೆ. ಯುಧಿಷ್ಠಿರನು ಅವನನ್ನೂ ತಡೆಯುತ್ತಿದ್ದಾನೆ. ನಕುಲಸಹದೇವರು ಕೂಡ ನಡುಪಟ್ಟಿಯನ್ನು ಎಳೆದು ಬಿಗಿದು, ಒರೆಗಳೆದ ಕತ್ತಿಯನ್ನು ಹಿಡಿದು, ಹಲ್ಲುಮುಡಿ ಕಚ್ಚಿದ್ದಾರೆ; ಮುಖ ಕೆಂಪಾಗಿದೆ; ಸಾಯುವುದಕ್ಕೆ ಕೂಡ ಲಕ್ಷಿಸದೆ, ಕಾಡಿನ ಮರಿಜಿಂಕೆಗಳು ಸಿಂಹವನ್ನು ತಡೆಯಲು ನೋಡು ವಂತೆ ದುಶ್ಶಾಸನನ ಕಡೆಗೆ ನುಗ್ಗಲು ತವಕಿಸುತ್ತಿದ್ದಾರೆ. ಧರ್ಮ ರಾಯನು ಅವರ ಹತ್ತಿರ ಬಂದು "ಬುದ್ಧಿಕೆಟ್ಟು ದ್ಯೂತವಾಡಿದ ತಪ್ಪು ನನ್ನದು. ಅವರ ಮೇಲಿನ ರೋಷವನ್ನು ಮರೆಯಿರಿ. ಬೇಕಾದರೆ ನಾನು ನಿಮ್ಮ ರೋಷಕ್ಕೆ ಪಾತ್ರನಾಗುವೆನು. ನಮಗೆ ಅವಮಾನ ಮಾಡುವ ಅಧಿಕಾರವನ್ನು ಅವರು ಜೂಜಿನಲ್ಲಿ ಗೆದ್ದುದರಿಂದ ಪಡೆದಿದ್ದಾರೆ. ಅದನ್ನು ಈಗ ಸಹಿಸದೆ ನಾವು ಕೆರಳಿದರೆ, ತಿಳಿದವರು ನಾಳೆ ನಮ್ಮನ್ನು ನಿಂದಿಸುವರು" ಎಂದು ಅವರನ್ನೂ ಸಮಾಧಾನಮಾಡುತ್ತಿದ್ದಾನೆ. ಇತ್ತ ಪಾಂಡವರು ಹೀಗಿರಲು, ಅತ್ತ ಗಾಂಧಾರರಾಜನು ದಾಳಗಳನ್ನು ಮೋಸದಿಂದ ಎಸೆಯುತ್ತ, ಗರ್ವದಿಂದ ಗಹಗಹಿಸಿ ನಗುತ್ತಿದ್ದಾನೆ. ತನ್ನ ಹೆಮ್ಮೆಯನ್ನು ತೋರಿ, ಶತ್ರುಗಳ ಸಂತೋಷವನ್ನು ಕುಗ್ಗಿಸುವ ಹಾಗೆ, ಪೀಠದಲ್ಲಿ ತನಗೆ ಇಷ್ಟಬಂದ ಹಾಗೆ ಕುಳಿತು, ಗೋಳಾಡುವ ದ್ರೌಪದಿಯನ್ನು ಕುಡಿನೋಟದಿಂದ ನೋಡುತ್ತ, ನೆಲದಲ್ಲಿ ಏನೋ ಬರೆಯುತ್ತಿದ್ದಾನೆ. ಅದೇ ಚಿತ್ರದಲ್ಲಿ ದ್ರೋಣನೂ ಭೀಷ್ಮನೂ ಇದ್ದಾರೆ; ಆದರೆ ಅವರಿಬ್ಬರೂ ದ್ರೌಪದಿಯನ್ನು ನೋಡಿ ನಾಚಿ ಕೊಂಡು ಮುಖಕ್ಕೆ ಮುಸುಕು ಹಾಕಿಕೊಂಡು ಕುಳಿತಿದ್ದಾರೆ.

ಇಂತಹ ಚಿತ್ರವನ್ನು ಮುಂದೆ ಹರಡಿಕೊಂಡು, ದುರ್ಯೋಧನನು "ಇದರ ಬಣ್ಣ ಎಷ್ಟು ಚೆನ್ನಾಗಿದೆ! ಇದರ ಭಾವ ಎಷ್ಟು ಎದ್ದು ಕಾಣುತ್ತದೆ! ಎಲ್ಲೆಲ್ಲಿ ಯಾವಯಾವುದು ಹೇಗೆಹೇಗೆ ಇರಬೇಕು ಅಲ್ಲಲ್ಲಿ ಅದೆಲ್ಲಾ ಸರಿಯಾಗಿ ಚಿತ್ರಿತವಾಗಿದೆ" ಎಂದು ಮೆಚ್ಚಿಕೊಳ್ಳುತ್ತ ಕಂಚುಕಿಯನ್ನು ಕರೆದು "ಗರುಡನೆಂಬ ಹಕ್ಕಿಯನ್ನು ಏರಿಕೊಂಡಿರುವ ಅಷ್ಟರಿಂದಲೇ ಗರ್ವಪಡುತ್ತಿರುವ ಆ ದೂತನನ್ನು ಕರೆದುಕೊಂಡು ಬಾ" ಎಂದು ಆಜ್ಞೆಮಾಡಿದನು. ಅನಂತರ, ದೂತನನ್ನು ಕಳುಹಿಸಿದ ಬಳಿಕ, ತನ್ನ ಪ್ರಿಯ ಸ್ನೇಹಿತನಾದ ಕರ್ಣನನ್ನು ಕುರಿತು "ಕರ್ಣ, ಕೃಷ್ಣಮತಿಯಾದ ಆ ಕೃಷ್ಣನು ಪಾಂಡವರ ಮಾತಿನಂತೆ ದೂತಕಾರ್ಯಕ್ಕಾಗಿ ಇಲ್ಲಿಗೆ ಸೇವಕನಂತೆ ಬಂದಿದ್ದಾನೆ. ಹೆಂಗರುಳಿನ ಯುಧಿಷ್ಠಿರನಾಡುವ ಮೃದುವಾದ ಮಾತುಗಳನ್ನು ಕೇಳುವೆಯಂತೆ. ನಿನ್ನ ಕರ್ಣಗಳನ್ನು ಸಿದ್ಧಪಡಿಸಿಕೊ, ಕರ್ಣ" ಎಂದು ವ್ಯಂಗ್ಯವಾಗಿ ನಕ್ಕನು.

§ ೩

ಆಗ ವಾಸುದೇವನು "ಯುದ್ಧ ಮಾಡಬೇಕೆಂಬ ದರ್ಪದಿಂದ ಕೊಬ್ಬಿರುವ ಈ ದುರ್ಯೋಧನನು ಯಾರು ಹೇಳಿದ ಮಾತನ್ನೂ ಕೇಳುವವನಲ್ಲ. ಇಂತಹವನ ಬಳಿ ದೂತಕಾರ್ಯಕ್ಕೆ ಹೋಗುವುದು ಅನುಚಿತವಾದರೂ ಧರ್ಮರಾಜನ ಮಾತನ್ನು ಮೀರಲಾರದೆ, ಧನಂಜಯನ ಅಕೃತ್ರಿಮವಾದ ಸ್ನೇಹಕ್ಕೆ ಕಟ್ಟುಬಿದ್ದು ಇದನ್ನು ನಿರ್ವಹಿಸುತ್ತಿದ್ದೇನೆ. ಆದರೆ ತಾನೆ ಏನು? ದ್ರೌಪದಿಯ ಮಾನಭಂಗದಿಂದ ಹುಟ್ಟಿದ ಬೆಂಕಿ, ಶತ್ರುಸೈನ್ಯದ ಆನೆಗಳ ಕುಂಭಗಳನ್ನು ಒಡೆದು ಕೆಡಹುವ ಮಹಾಗದೆಯನ್ನುಳ್ಳ ಆ ಭೀಮನ ಕೋಪದ ಬೆಂಕಿ, ಇವುಗಳ ಜೊತೆಗೆ ಅರ್ಜುನನ ಬಾಣಗಳ ಬಿರುಗಾಳಿ ಸೇರಿ ಈ ಕುರುವಂಶವೆಂಬ ಬಿದಿರಿನ ಮೆಳೆ ಸುಟ್ಟು ಬೂದಿಯಾಗುವುದು

ಖಂಡಿತ" ಎಂದುಕೊಳ್ಳುತ್ತ ಸುಯೋಧನನ ಶಿಬಿರದ ಹತ್ತಿರಕ್ಕೆ ಬಂದನು.

ಅಲ್ಲಿ ರಾಜರು ತಮತಮಗೆ ಇಷ್ಟವಾದ ರೀತಿಯಲ್ಲಿ ಕಟ್ಟಿಸಿಕೊಂಡ ಅರಮನೆಗಳು ಅಮರಾವತಿಯನ್ನು ಜ್ಞಾಪಿಸುತ್ತಿದ್ದವು. ವಿಶಾಲವಾದ ಶಸ್ತ್ರಶಾಲೆಗಳಲ್ಲಿ ಶಸ್ತ್ರಾಸ್ತ್ರಗಳನ್ನು ಶೇಖರಿಸಿದ್ದರು. ಲಾಯಗಳಲ್ಲಿ ಕುದುರೆಗಳೂ ಆನೆಗಳೂ ಕೆನೆಯುತ್ತ ಘೀಳಿಡುತ್ತ ಇದ್ದವು. "ಸ್ವಜನರಿಗೆ ಅವಮಾನ ಮಾಡುವುದರಿಂದ ಈ ಎಲ್ಲಾ ಮಹೈಶ್ವರ್ಯವೂ ಅನ್ಯಾಯವಾಗಿ ನಾಶವಾಗುವುದಲ್ಲ! ದುಷ್ಟತನವನ್ನೇ ಹಿಡಿದು, ಹಠದಿಂದ ಗುಣಗಳನ್ನು ದ್ವೇಷಿಸಿ, ಸ್ವಜನರಲ್ಲಿ ದಯೆಯಿಡದೆ ಈ ದುರ್ಯೋಧನನು ನನ್ನನ್ನು ಕಂಡರೂ ಯುಕ್ತವಾದುದನ್ನು ಆಚರಿಸದೆ ಕೆಡುವನಲ್ಲಾ!" ಎಂದುಕೊಳ್ಳುತ್ತಾ ಬರುತ್ತಿದ್ದ ವಾಸುದೇವನನ್ನು ಕಂಚುಕಿಯಾದ ಬಾದರಾಯಣನು "ಪದ್ಮನಾಭನು ಒಳಕ್ಕೆ ದಯಮಾಡಬಹುದು" ಎಂದು ಮಂತ್ರಶಾಲೆಗೆ ಕರೆದನು.

ಒಳಕ್ಕೆ ಪ್ರವೇಶಿಸಿದ ವಾಸುದೇವನನ್ನು ಕಂಡು ಕ್ಷತ್ರಿಯರೆಲ್ಲರೂ ಕುಳಿತುಕೊಂಡಿರಲಾರದೆ ಗಾಬರಿಪಟ್ಟು ಏಳಬೇಕೆಂದು ಕದಲಿದರು. ಕೃಷ್ಣನು "ಬೇಡ, ಗಾಬರಿ ಬೇಡ. ಧಾರಾಳವಾಗಿ ಕುಳ್ಳಿರಬಹುದು" ಎಂದು ಅವರನ್ನು ಸಮಾಧಾನಪಡಿಸಿದಾಗ, ಕೃಷ್ಣನು ಬಂದಾಗ ಕುಳಿತಿರದೆ ಎದ್ದು ನಿಂತರೆ ತಾನೇನು ದಂಡ ವಿಧಿಸುವೆನೆಂದು ಆಜ್ಞೆ ಮಾಡಿದ್ದನೋ ಅದನ್ನು ಸುಯೋಧನನು ಸಭಿಕರಿಗೆ ಜ್ಞಾಪಿಸಿದನು.

ಆಗ ವಾಸುದೇವನು ದುರ್ಯೋಧನನನ್ನು ಕುರಿತು "ಏನಯ್ಯಾ ಸುಯೋಧನ, ಕುಳಿತುಕೊಂಡೆ?" ಎಂದನು. ಒಡನೆಯೆ, ಅದೇನಾಯಿತೋ, ದುರ್ಯೋಧನನು ಕುಳಿತಿದ್ದಂತೆಯೇ ಆಸನದಿಂದ ಕೆಳಗೆ ಬಿದ್ದನು. "ಅಬ್ಬಾ! ಕುಳಿತೇ ಇರಬೇಕೆಂದು ಬುದ್ಧಿಯನ್ನು

ಸ್ತಿಮಿತವಾಗಿಟ್ಟುಕೊಂಡಿದ್ದರೂ ಈ ಕೇಶವನ ಮಹಿಮೆಯಿಂದ ನಾನೂ ಕೆಳಗೆ ಬಿದ್ದೆನಲ್ಲಾ! ಇವನು ಬಹಳ ಮಾಯಾವಿ!" ಎಂದು ಕೊಳ್ಳುತ್ತ ದುರ್ಯೋಧನನು ಎದ್ದು ಸ್ವಸ್ಥಾನದಲ್ಲಿ ಕುಳಿತು, "ಈ ಆಸನದಲ್ಲಿ ಕುಳಿತುಕೊ, ದೂತ" ಎಂದು ಕೃಷ್ಣನಿಗೆ ಕೈ ಬೀಸಿದನು.

ಆಗ ವಾಸುದೇವನು ಎದ್ದು ನಿಂತಿದ್ದ ದ್ರೋಣಾಚಾರ್ಯರನ್ನೂ ಗಾಂಗೇಯಪ್ರಮುಖರಾದ ರಾಜರನ್ನೂ ಕುಳ್ಳಿರಹೇಳಿ, ಅವರು ಕುಳಿತನಂತರ ತಾನು ಕುಳಿತುಕೊಳ್ಳುವಾಗ ದುರ್ಯೋಧನನ ಕೈಯಿಂದ ಕೆಳಗೆ ಬಿದ್ದಿದ್ದ ಆ ದ್ರೌಪದೀಮಾನಭಂಗದ ಚಿತ್ರವನ್ನು ಕೈಗೆತ್ತಿಕೊಂಡನು.

ದ್ರೌಪದಿಯ ಮುಡಿ ಹಿಡಿದೆಳೆದ ಪ್ರಸಂಗವನ್ನು ಚಿತ್ರದಲ್ಲಿ ಕಂಡು ಕೃಷ್ಣನಿಗೆ ಅಸಹ್ಯವಾಯಿತು. "ಛೆ! ಈ ಸುಯೋಧನನಿಗೆ ತಿಳಿವಳಿಗೆ ಸಾಲದು. ಸ್ವಜನರನ್ನು ಅವಮಾನಪಡಿಸಿದುದೇ ಮಹಾ ಪರಾಕ್ರಮವೆಂದು ತಿಳಿದಿದ್ದಾನೆ. ಇವನ ಹಾಗೆ ತನ್ನ ದೋಷವನ್ನು ನೆರೆದ ಸಭೆಯೆದುರಿನಲ್ಲಿ ಪ್ರದರ್ಶಿಸಿಕೊಳ್ಳುವವರು ಯಾರಿದ್ದಾರೆ" ಎಂದು ಆ ಚಿತ್ರಪಟವನ್ನು ತೆಗೆದೊಯ್ಯಲೆಂದು ಕೋರಿದನು.

ಅನಂತರ ದುರ್ಯೋಧನನು ಆ ಚಿತ್ರಪಟದ ಕಾರ್ಯ ಮುಗಿದು ದರಿಂದ ಅದನ್ನು ತೆಗೆದಿರಿಸುವಂತೆ ಬಾದರಾಯಣನಿಗೆ ಆಜ್ಞೆಮಾಡಿ, "ಏನಯ್ಯಾ ದೂತ? ಯಮಧರ್ಮನ ಮಗನಾದ ಯುಧಿಷ್ಠಿರನೂ, ವಾಯುವಿನ ಮಗನಾದ ಭೀಮನೂ, ದೇವೇಂದ್ರನ ಮಗನಾದ ನನ್ನ ತಮ್ಮ ಅರ್ಜುನನೂ, ಅಶ್ವಿನೀದೇವತೆಗಳ ಮಕ್ಕಳಾದ ಆ ಇಬ್ಬರು, ಇವರೆಲ್ಲರೂ ತಮ್ಮ ಪರಿವಾರದೊಡನೆ ಕುಶಲವಾಗಿದ್ದಾರೆಯೇ?" ಎಂದನು.

ಪಾಂಡವರ ಜನ್ಮವನ್ನು ಕುರಿತು ಆ ಸುಯೋಧನನು ಅಣಕಿಸಿ ಆಡಿದ ಮಾತನ್ನು ಅರ್ಥಮಾಡಿಕೊಂಡು, ಕೃಷ್ಣನು "ಜನ್ಮತಃ ಕಣ್ಣಿ

ದ್ದರೂ ಬಟ್ಟೆ ಕಟ್ಟಿಕೊಂಡು ಕುರುಡಾದ ಗಾಂಧಾರಿಯ ಮಗನ ಬಾಯಲ್ಲಿ ಇಂಥಮಾತು ಬರುವುದು ಉಚಿತ. ಹೌದು, ಅವರೆಲ್ಲರೂ ಕುಶಲವಾಗಿದ್ದಾರೆ. ಅದರಂತೆಯೇ ಆ ಪಾಂಡವರು ಕೂಡ ನಿನಗೂ ನಿನ್ನ ರಾಜ್ಯಕ್ಕೂ ಕ್ಷೇಮವನ್ನು ಕೋರಿ, 'ನಾವು ಬಹು ದುಃಖಪಟ್ಟಿದ್ದೇವೆ. ಆಡಿದಂತೆ ಹನ್ನೆರಡು ವರುಷಗಳ ವನವಾಸವನ್ನೂ ಒಂದು ವರುಷದ ಅಜ್ಞಾತವಾಸವನ್ನೂ ಮುಗಿಸಿದ್ದೇವೆ. ಈಗ, ದಾಯಾದಿಗಳಾದ ನಮಗೆ ಧರ್ಮಕ್ಕೆ ಅನುಸಾರವಾಗಿ ಬರಬೇಕಾದ ಪಾಲನ್ನು ಹಂಚಿಕೊಡಬೇಕು' ಎಂದು ವಿಜ್ಞಾಪಿಸುತ್ತಾರೆ" ಎಂದು ಯುಧಿಷ್ಠಿರಾದಿಗಳು ಕಳುಹಿಸಿದ ಸಂದೇಶವನ್ನು ತಿಳಿಸಿದನು.

ದುರ್ಯೋಧನನು ಅದನ್ನು ಕೇಳಿ ತಿರಸ್ಕಾರದಿಂದ ನಕ್ಕು, "ಏನು ? ದಾಯಾದಿಗಳಿಗೆ ಬರಬೇಕಾದ ಪಾಲೊ ? ಕೇಳು. ನಮ್ಮ ಚಿಕ್ಕಪ್ಪನಾದ ಪಾಂಡುರಾಜನು ಕಾಡಿನಲ್ಲಿ ಬೇಟೆಯಾಡುತ್ತಾ ಒಬ್ಬ ಮುನಿಯಲ್ಲಿ ಅಪರಾಧಮಾಡಿ, ಅವನ ಶಾಪಕ್ಕೆ ಪಾತ್ರನಾದನು. ಅಂದಿನಿಂದ ಅವನು ತನ್ನ ಪತ್ನಿಯರ ಸಂಗವನ್ನು ತೊರೆದನು. ಇಂತಹವನು ಯಮ, ವಾಯು, ಇಂದ್ರ, ಅಶ್ವಿನಿಗಳು ಇವರ ಮಕ್ಕಳಿಗೆ ಹೇಗೆ ತಂದೆಯಾದಾನು ?" ಎಂದನು.

"ಹಿಂದಿನ ಚರಿತ್ರೆಯನ್ನು ಇಷ್ಟು ಚೆನ್ನಾಗಿ ಬಲ್ಲ ನಿನಗೆ ನಾನು ಇನ್ನೊಂದು ಜ್ಞಾಪಿಸಿಕೊಡುತ್ತೇನೆ. ಹಿಂದೆ ವಿಚಿತ್ರವೀರ್ಯನು ವಿಷಯಲಂಪಟನಾಗಿ ಕ್ಷಯರೋಗದಿಂದ ಸತ್ತಾಗ ಅಂಬಿಕೆಯ ಗರ್ಭದಲ್ಲಿ ವ್ಯಾಸನಿಂದ ಧೃತರಾಷ್ಟ್ರ ಹುಟ್ಟಿದನಲ್ಲವೆ ? ಈ ನಿನ್ನ ತಂದೆಗೆ ಕುರುಗಳ ರಾಜ್ಯ ಹೇಗೆ ದೊರಕೀತು ?" ಎಂದು ಕೃಷ್ಣನು ಅವನ ಹಂಗಣೆಗೆ ತಕ್ಕ ಉತ್ತರ ಕೊಟ್ಟು, "ಸುಯೋಧನ, ಹೀಗೆ ವೃಥಾ ಪರಸ್ಪರ ವೈರವನ್ನು ಬೆಳೆಸುತ್ತ ಹೋದರೆ ಕುರುಕುಲವು ನಾಶವಾಗಿ ನಾಮಾವಶೇಷವಾಗುವುದು. ಆದ್ದರಿಂದ ಈ ರೋಷವನ್ನು

ಬಿಡು. ಪಾಂಡವರು ಪ್ರೀತಿಯಿಂದ ಹೇಳುವ ಹಾಗೆ ನಡೆ" ಎಂದು ಹಿತವಾದವನ್ನು ನುಡಿದನು.

ಆದರೆ ದುರ್ಯೋಧನನು ತನ್ನ ಛಲವನ್ನು ಬಿಡದೆ, "ಎಲೈ ದೂತ, ನಿನಗೆ ರಾಜ್ಯದ ವ್ಯವಹಾರ ತಿಳಿಯದು. ಶತ್ರುಗಳನ್ನು ಸೋಲಿಸಿ ಜಯವನ್ನು ಸಂಪಾದಿಸುವ ಅರಸುಗಳಿಗೂ ಅವರ ಮಕ್ಕಳಿಗೂ ರಾಜ್ಯಗಳು ದಕ್ಕುವುವೇ ಹೊರತು ಬೇಡುವ ದೀನರಿಗೆ ಅವು ದೊರಕವು. ಪಾಂಡವರಿಗೆ ರಾಜ್ಯವು ಬೇಕಾದರೆ ಪರಾಕ್ರಮವನ್ನು ತೋರಿಸಲಿ. ಅದು ಬೇಡವಾದರೆ ಶಾಂತಿಸಮಾಧಾನಗಳು ದೊರಕುವ ತಪೋವನಕ್ಕೆ ತೆರಳಲಿ" ಎಂದನು.

"ಹೀಗೆ ಸ್ವಜನರನ್ನು ಕುರಿತು ಇಷ್ಟು ಕಠಿನವಾಗಿ ಮಾತನ್ನು ಆಡಬಾರದು, ಸುಯೋಧನ. ಹಿಂದೆ ಮಾಡಿದ ಪುಣ್ಯದಿಂದ ರಾಜ್ಯಶ್ರೀ ಒಮ್ಮೆ ಬರುತ್ತದೆ. ಬಂಧುಮಿತ್ರರಿಗೆ ವಂಚನೆಮಾಡಿದರೆ, ಬಂದದ್ದು ಅಷ್ಟೂ ನಷ್ಟವಾಗುತ್ತದೆ."

"ಓಹೊ! ನಿನ್ನ ತಂದೆಯ ಭಾವನಾದ ಕಂಸನ ಮೇಲೆ ನಿನಗೆ ಈ ಕರುಣೆಯಿದ್ದಿತಲ್ಲವೆ! ಬಾಲ್ಯದಿಂದಲೂ ನಮಗೆ ಅಪರಾಧ ಮಾಡುತ್ತಿರುವ ಈ ಪಾಂಡವರ ಮೇಲೆ ನನಗೆ ಹೇಗೆ ದಯೆಬರಬೇಕು?"

"ಕಂಸನನ್ನು ಕೊಂದದ್ದು ನನ್ನ ದೋಷವಲ್ಲ, ಸುಯೋಧನ. ಅವನು ನನ್ನ ತಾಯಿಯ ಮಕ್ಕಳನ್ನು ಕೊಂದು, ಅವಳನ್ನು ತುಂಬ ಗೋಳಾಡಿಸಿದನು; ತನ್ನ ಮುದಿತಂದೆಯನ್ನೇ ಸೆರೆಯಲ್ಲಿಟ್ಟು ಪೀಡಿಸಿದನು. ಅದರಿಂದ ಅವನು ತನಗೆ ತಾನೇ ಸಾವನ್ನು ತಂದುಕೊಂಡನು.

"ಅಂತೂ ಕಂಸನನ್ನು ಸರ್ವವಿಧದಲ್ಲೂ ನೀನು ವಂಚಿಸಿದೆ. ಸಾಕು ನಿನ್ನ ಆತ್ಮಶ್ಲಾಘನೆ. ಇದೇನು ಮಹಾಪರಾಕ್ರಮ? ಅಳಿಯ

ನಾದ ಕಂಸನು ಸತ್ತನೆಂಬ ಶೋಕದಿಂದ ರೋಷಗೊಂಡು ಮಗಧ ರಾಜನಾದ ಜರಾಸಂಧನು ಅಟ್ಟಿಬಂದಾಗ ಹೆದರಿ ಓಡಿಹೋದೆಯಲ್ಲ ನೀನು ! ನಿನ್ನ ಪರಾಕ್ರಮವನ್ನು ನಾವು ಕಾಣೆವೆ ?"

"ಅದಕ್ಕೆ ಕಾರಣ ಬೇರೆ, ಸುಯೋಧನ. ರಾಜನೀತಿಯನ್ನು ತಿಳಿದು ನಡೆಯುವವರು ದೇಶ ಕಾಲ ಸ್ಥಿತಿಗಳಿಗೆ ಅನುಸಾರವಾಗಿ ಸಾಹಸಮಾಡುತ್ತಾರೆ. ಆದರೆ ಈಗ ನನ್ನನ್ನು ಕುರಿತು ಹಾಸ್ಯ ಮಾಡುವುದು ಸಾಕು. ನೀನು ನಡಸಬೇಕಾದುದನ್ನು ನೀನು ಮಾಡು. ಸೋದರರಾದ ಪಾಂಡವರೊಡನೆ ಸ್ನೇಹಬೆಳಸಿ, ದೋಷಗಳನ್ನು ಮರೆತುಬಿಡು. ಬಂಧುಗಳ ಸಂಬಂಧ ಇಹಪರ ಎರಡಕ್ಕೂ ಒಳ್ಳೆಯದು."

"ದೇವತೆಗಳ ಮಕ್ಕಳಾದ ಅವರಿಗೂ ಮನುಷ್ಯರ ಮಕ್ಕಳಾದ ನಮಗೂ ಬಾಂಧವ್ಯ ಎಲ್ಲಿಂದ ಬಂತು ? ಸಾಕು, ಈ ಮಾತು ನಿಲ್ಲಿಸು. ಸುಮ್ಮನೆ ಅರೆದದ್ದನ್ನೇ ಅರೆಯುವುದರಿಂದ ಏನು ಪ್ರಯೋಜನ ?"

ಹೀಗೆ ತಾನು ಎಷ್ಟು ಸಾಮೋಪಾಯವನ್ನು ಪ್ರಯೋಗಿಸಿದರೂ ದುರ್ಯೋಧನನು ತನ್ನ ಹಠವನ್ನು ಬಿಡದಿರಲು, ಕಠಿಣವಾದ ಮಾತುಗಳನ್ನಾಡಿ ಅವನ ಮನಸ್ಸನ್ನು ಕಲಕಿ ನೋಡುವೆನೆಂದು ಕೃಷ್ಣನು "ಅಯ್ಯಾ ಸುಯೋಧನ, ಅರ್ಜುನನ ಬಲಪರಾಕ್ರಮಗಳು ನಿನಗೆ ಗೊತ್ತಿಲ್ಲವೆ ?" ಎಂದನು.

ದುರ್ಯೋಧನನು ಏನೂ ಅರಿಯದವನಂತೆ "ಗೊತ್ತಿಲ್ಲವಲ್ಲಾ" ಎಂದೆನ್ನಲು, ಕೃಷ್ಣನು ಅರ್ಜುನನ ಸಾಹಸಕೃತ್ಯಗಳನ್ನು ವರ್ಣಿಸಿದನು. ಆ ಅರ್ಜುನನು ಕಿರಾತವೇಷದ ಪಶುಪತಿಯೊಡನೆ ಕಾದಾಡಿ ಅವನ ಮನಸ್ಸಂತೋಷಪಡಿಸಿದ್ದನ್ನೂ, ಖಾಂಡವ ವನವನ್ನು ಅಗ್ನಿ ದಹಿಸುವಾಗ ದೇವೇಂದ್ರನು ಕರೆದ ಮಳೆಯನ್ನು ತನ್ನ

ಬಾಣಗಳಿಂದ ತಡೆದುದನ್ನೂ, ಆ ದೇವೇಂದ್ರನಿಗೆ ಎದುರೆದ್ದ ನಿವಾತ ಕವಚರೆಂಬ ರಾಕ್ಷಸರನ್ನು ಅವನು ಲೀಲೆಯಿಂದ ಕೊಂದುದನ್ನೂ, ಅನಂತರ ಆ ವಿರಾಟನ ಮನೆಯಲ್ಲಿದ್ದಾಗ ಎದುರಾದ ಭೀಷ್ಮಾದಿಗಳನ್ನೆಲ್ಲ ಅವನೊಬ್ಬನೇ ಗೆದ್ದುದನ್ನೂ ತಿಳಿಸಿ; "ಆದರೆ ಇವುಗಳೆಲ್ಲ ನೀನು ಕಣ್ಣಾರೆ ಕಂಡುವಲ್ಲ. ನೀನು ಕಣ್ಣಾರೆ ಕಂಡ ಇನ್ನೊಂದು ಸಂಗತಿಯನ್ನು ಇವುಗಳ ಜೊತೆಗೆ ಜ್ಞಾಪಿಸಿಕೊ. ಅಂದು ನೀನು ಘೋಷಯಾತ್ರೆಗೆ ಹೋದಾಗ, ಆ ಚಿತ್ರಸೇನನು ನಿನ್ನನ್ನು ಗಗನಕ್ಕೆ ಸೆಳೆದೊಯ್ದಾಗ, ನಿನ್ನ ಗೋಳನ್ನು ಕೇಳಿ ಅರ್ಜುನನು ತಾನೇ ಬಂದು ನಿನ್ನನ್ನು ಬಿಡಿಸಲಿಲ್ಲವೆ? ನೋಡು, ಧೃತರಾಷ್ಟ್ರಪುತ್ರ, ನನ್ನ ಮಾತು ಕೇಳಿ ಅವರಿಗೆ ಅರ್ಧರಾಜ್ಯವನ್ನು ಕೊಡು. ಕೊಡದೆ ಹೋದರೆ, ಸಮುದ್ರಾಂತವಾದ ಈ ಭೂಮಿಯೆಲ್ಲವನ್ನೂ ಪಾಂಡವರೇ ಸೆಳೆದುಕೊಳ್ಳುವರು" ಎಂದನು.

"ಹಾಗಾದರೆ ಹಾಗೇ ಆಗಲಿ. ಸಾಕ್ಷಾತ್ ವಾಯುದೇವನೇ ಭೀಮನ ರೂಪದಲ್ಲಿ ಯುದ್ಧಕ್ಕೆ ನಿಂತರೂ ಸರಿಯೆ, ಇಂದ್ರನೇ ಅರ್ಜುನನ ವೇಷದಲ್ಲಿ ಬಂದರೂ ಸರಿಯೆ, ನಿನ್ನ ಹೆದರಿಕೆಯ ಮಾತುಗಳನ್ನು ಕೇಳಿ ಒಂದು ಹುಲ್ಲೆಸಳನ್ನೂ ಕೂಡ ನಾನು ಕೊಡುವವನಲ್ಲ. ನನ್ನ ತಂದೆಯು ಅನುಭವಿಸಿ ನನಗೆ ಬಂದಿರುವ, ನಾನು ಪೌರುಷದಿಂದ ಕಾಪಾಡಿಕೊಂಡಿರುವ ಈ ನನ್ನ ರಾಜ್ಯದಲ್ಲಿ ಒಂದು ಹುಲ್ಲುಕಡ್ಡಿಯನ್ನು ಕೂಡ ನಾನು ಕೊಡುವವನಲ್ಲ" ಎಂದು ದುರ್ಯೋಧನನು ಪುನಃ ತನ್ನ ಛಲವನ್ನೇ ಹಿಡಿದಾಡಿದನು.

ಅವನು ಆಡಿದ ಮಾತಿನ ಧೋರಣೆಯನ್ನು ನೋಡಿ ವಾಸುದೇವನ ಸೈರಣೆ ಸವೆಯಿತು. "ಕೆಟ್ಟ ಹೆಸರನ್ನು ಕೂಡಿಟ್ಟುಕೊಳ್ಳುವುದರಲ್ಲಿ ನಿನಗೆ ತುಂಬ ಪ್ರೀತಿಯಿದ್ದಂತಿದೆ. ನಿರ್ಮಲವಾಗಿದ್ದ ಕುರುವಂಶಕ್ಕೆ ನೀನು ಕಲಂಕಪ್ರಾಯನಾದೆ. ಹುಲ್ಲಿನಂತಹ ವಿಷಯ

ವನ್ನು ಪ್ರಸ್ತಾಪಿಸುವುದಕ್ಕೆ ಬರುವಂತಹ ನೀಚರೆಂದು ನಮ್ಮನ್ನು ತಿಳಿದೆಯೋ?" ಎಂದು ಕೃಷ್ಣನು ದುರ್ಯೋಧನನನ್ನು ತರ್ಜನೆ ಮಾಡಿದನು.

ದುರ್ಯೋಧನನು ಮತ್ತೆ ಕೃಷ್ಣನನ್ನು ಕುರಿತು "ದನ ಕಾಯುವ ನೀನು ಹುಲ್ಲಿನಂತಹ ವಿಷಯವಾಗಿ ಮಾತನಾಡುವಷ್ಟು ನೀಚನೇ ಹೌದು. ಸ್ತ್ರೀಹತ್ಯೆಯಂತಹ ಅಕಾರ್ಯ ಮಾಡಿದವನು, ಕತ್ತೆ ಗೂಳಿ ಜಟ್ಟಿಗಳನ್ನು ಕೊಂದವನು, ನಾಚಿಕೆಯಿಲ್ಲದೆ ನನ್ನಂತಹ ಸಾಧು ಗಳೊಡನೆ ಮಾತನಾಡಬಯಸುವೆಯ?" ಎಂದು ನಿಂದಿಸಿ, ಕೃಷ್ಣನ ಎಚ್ಚರಿಕೆಗಳನ್ನು ಗಮನಿಸದೆ, ಪುನಃ "ಛಿ! ನಿನ್ನೊಡನೆ ಮಾತು ಕೂಡ ಆಡಬಾರದು. ವಿಪ್ರರ ಕೈಯಿಂದ ಅಭಿಷೇಕಗೊಂಡು ಬಿಳಿಕೊಡೆಯ ನೆರಳಿನಲ್ಲಿರುವ ನಾನು, ನಮಸ್ಕರಿಸಿ ಬರುವ ರಾಜರೊಡನೆ ಸಂಭಾಷಿ ಸುವೆನೇ ಹೊರತು ನಿನ್ನಂಥವರ ಕೂಡ ಮಾತನಾಡೆನು" ಎಂದು ಅವನನ್ನು ತಿರಸ್ಕರಿಸಿ ಮೌನವಾಂತನು.

ಆಗ ವಾಸುದೇವನು ಬಂಧುಗಳ ಬಗೆಗೆ ಸ್ನೇಹವನ್ನು ಮರೆತು ಶಠನಾದ ಆ ದುರ್ಯೋಧನನನ್ನು ತಾನೂ ಮನವಾರೆ ನಿಂದಿಸಿ, "ನಿನ್ನಿಂದ ಈ ಕುರುವಂಶವು ಕ್ಷಿಪ್ರದಲ್ಲಿಯೇ ನಾಶವಾಗುತ್ತದೆ" ಎಂದು ಕಡೆಯ ಮಾತನ್ನು ನುಡಿದು, ಸಭಾಸ್ಥಾನವನ್ನು ಬಿಟ್ಟು ಹೋಗಲು ಎದ್ದನು.

ಆಗ, ದೂತನಾಗಿ ಬಂದ ಕೃಷ್ಣನನ್ನು ಹೋಗಗೊಡದೆ ಅವನನ್ನು ಬಂಧಿಸಬೇಕೆಂದು ಮೊದಲೇ ನಿಶ್ಚಯಿಸಿದ್ದ ದುರ್ಯೋಧನನು ತನ್ನ ತಮ್ಮಂದಿರಾದ ದುಶ್ಶಾಸನ, ದುರ್ಮರ್ಷಣ, ದುರ್ಮುಖ, ದುರ್ಬುದ್ಧಿ, ದುಷ್ಟೇಶ್ವರ ಮೊದಲಾದವರನ್ನು ಕರೆದು, "ಈ ಕೇಶವನು ದೂತರ ಮರ್ಯಾದೆಯನ್ನು ಮೀರಿರುವನಾದ್ದರಿಂದ ಇವನನ್ನು ಕಟ್ಟಿಬಿಡಿ" ಎಂದು ಆಜ್ಞೆಮಾಡಿದನು.



ದುರ್ಯೋಧನನು ಕೃಷ್ಣನನ್ನು ಬಂಧಿಸಲು ಬಂದನು.

ಅವನೇನು ಆಜ್ಞೆ ಮಾಡಿದರೂ ಕೃಷ್ಣನನ್ನು ಕಟ್ಟುವುದಕ್ಕೆ ಅವನ ತಮ್ಮಂದಿರು ಶಕ್ತರಾಗಲಿಲ್ಲ. ದುಶ್ಶಾಸನನಿಗೂ ಸಾಮರ್ಥ್ಯ ಸಾಲದೆ ಹೋಯಿತು. ದುರ್ಯೋಧನನ ಪ್ರಾರ್ಥನೆಯ ಮೇರೆಗೆ ಕೇಶವನನ್ನು ಬಂಧಿಸಲು ಮುಂದುವರಿದ ಶಕುನಿ ಕೂಡ ಹಿಮ್ಮೆಟ್ಟಿ ಬಿದ್ದನು. ಹೀಗೆ ಅವರು ಯಾರಿಗೂ ಸಾಧಿಸಲು ಬಾರದುದನ್ನು ತಾನು ಸಾಧಿಸುತ್ತೇನೆಂದು ದುರ್ಯೋಧನನು ಹಗ್ಗಗಳಿಂದ ಕೃಷ್ಣನನ್ನು ಕಟ್ಟುವುದಕ್ಕಾಗಿ ಅವನ ಹತ್ತಿರ ಹೋದನು.

ಆಗ, ದುರ್ಯೋಧನನ ದುಷ್ಟ ಉದ್ಯೋಗವನ್ನು ಕಂಡ ವಾಸುದೇವನು "ಈ ಸುಯೋಧನನ ಸಾಮರ್ಥ್ಯವನ್ನು ನೋಡುವೆ"ನೆಂದು ವಿಶ್ವರೂಪವನ್ನು ಧರಿಸಿದನು.

ಆದರೂ ದುರ್ಯೋಧನನು ಹೆದರದೆ, ಹಿಮ್ಮೆಟ್ಟದೆ, "ನೀನು ಯಾವ ಯಾವ ಮಾಯೆಗಳನ್ನು ತೋರಿದರೂ ಸರಿಯೆ, ಯಾವ ಅಮೋಘವಾದ ದೇವಾಸ್ತ್ರಗಳನ್ನು ಹಿಡಿದು ಪ್ರಹರಿಸಿದರೂ ಸರಿಯೆ, ಎತ್ತು ಕುದುರೆಗಳನ್ನು ಕೊಂದ ನಿನ್ನ ದರ್ಪ ನನ್ನ ಮುಂದೆ ನಡೆಯುವಂತಿಲ್ಲ. ಈ ರಾಜರ ಕಣ್ಣೆದುರಿಗೆ ಈಗಲೇ ನಿನ್ನನ್ನು ನಾನು ಕಟ್ಟಿ ಹಾಕುತ್ತೇನೆ" ಎಂದು ಕೃಷ್ಣನ ಕಡೆಗೆ ನುಗ್ಗಿದನು.

ಆಗ ಕೇಶವನು ನಿಂತಕಡೆ ಅಂತರ್ಧಾನವಾದನು ! ಇಲ್ಲದ ಕಡೆ ಪ್ರತ್ಯಕ್ಷನಾದನು ! ಒಮ್ಮೆ ಕುಳ್ಳಾಗಿ ಕಾಣಿಸಿದನು ! ಒಮ್ಮೆ ಎತ್ತರವಾಗಿ ಕಾಣಿಸಿದನು! ಮರುಗಳಿಗೆಯಲ್ಲಿ ಮಂತ್ರಶಾಲೆಯಲ್ಲೆಲ್ಲ ಕಡೆಯೂ ಅನೇಕ ಕೇಶವರಾಗಿ ಕಾಣಿಸಿಕೊಂಡನು !

ಕೃಷ್ಣನ ಮಾಯೆಯನ್ನು ಕಂಡು ದುರ್ಯೋಧನನು ದಿಗ್ಭ್ರಾಂತನಾಗಿ, ಕೂಡಲೆ ಮನಸ್ಸನ್ನು ಸ್ತಿಮಿತಕ್ಕೆ ತಂದುಕೊಂಡು, "ಎಲೈ ರಾಜರೇ, ನೀವು ಒಬ್ಬೊಬ್ಬರೂ ಒಬ್ಬೊಬ್ಬ ಕೇಶವನನ್ನು ಕಟ್ಟಿಬಿಡಿ" ಎಂದು ಆಜ್ಞೆ ಮಾಡಿದನು.

ರಾಜನಾಜ್ಞೆಯನ್ನು ನೆರವೇರಿಸಲು ಹೋದ ಆ ರಾಜರುಗಳು ತಾವೂ ಕೃಷ್ಣನ ಮಾಯೆಗೆ ಸಿಕ್ಕಿ, ತಮ್ಮನ್ನು ತಾವೇ ಹಗ್ಗಗಳಿಂದ ಬಿಗಿದುಕೊಂಡು ಬಿದ್ದರು.

ಆದರೂ ದುರ್ಯೋಧನನು ತನ್ನ ಹಠವನ್ನು ಬಿಡದೆ, "ಬಿಲ್ಲಿಗೆ ಬಾಣ ಹೂಡಿ ಹೊಡೆದು ನಿನ್ನ ದೇಹಕ್ಕೆ ರಕ್ತದ ಸ್ನಾನ ಮಾಡಿಸುತ್ತೇನೆ. ಹೀಗೆ ಗಾಯಗೊಂಡು ಶಿಬಿರಕ್ಕೆ ಕರೆತಂದ ನಿನ್ನನ್ನು ಪಾಂಡವರು ಕಣ್ಣೀರಿಟ್ಟು ನಿಟ್ಟುಸಿರುಬಿಟ್ಟು ನೋಡಲಿ" ಎಂದು ಮೊರೆಯುತ್ತ ಬಿಲ್ಲುಬಾಣಗಳನ್ನು ತರುವುದಕ್ಕಾಗಿ ಎದ್ದು ಹೊರಟನು.

§ ೪

ಆಗ ವಾಸುದೇವನು "ಪಾಂಡವರು ಮಾಡಬೇಕಾದುದನ್ನು ನಾನೇ ಮಾಡಿಬಿಡುವೆ"ನೆಂದು ತನ್ನ ಚಕ್ರವಾದ ಸುದರ್ಶನವನ್ನು ಸ್ಮರಿಸಿ ಕರೆದನು.

ಆ ಕೃಪಾಪೂರ್ಣವಾದ ಕರೆಯನ್ನು ಕೇಳಿ ಸುದರ್ಶನವು ಮೋಡಗಳ ಪರಿವಾರದೊಡನೆ ಓಡಿಬಂದು, "ಕಮಲಾಯತಾಕ್ಷನಿಗೆ ಯಾರ ಮೇಲೆ ಕೋಪವೋ? ಈಗ ನಾನು ಯಾರ ತಲೆಯ ಮೇಲೆ ಎರಗಬೇಕೋ?" ಎಂದುಕೊಳ್ಳುತ್ತ, ಹಸ್ತಿನಪುರದ ಬಾಗಿಲಿನಲ್ಲಿ ದೂತನಂತೆ ನಿಂತಿರುವ ಭಗವಂತನನ್ನು ಕಂಡಿತು. "ಸರ್ವಸಂಪತ್ತುಗಳನ್ನುಳ್ಳ ಈ ಭಗವಂತನ ಆದಿಯನ್ನು ಯಾರೂ ತಿಳಿಯರು. ಸದಾ ಲೋಕರಕ್ಷಣೆಯಲ್ಲಿಯೇ ನಿರತನಾಗಿರುವ ಈತನ ಇರವನ್ನು ಯಾರೂ ಅರಿಯರು. ಈತನು ತಾನು ಏಕಾಕಿಯಾದರೂ ಅನೇಕ ರೂಪಗಳನ್ನು ಧರಿಸಿ ಶತ್ರುಸಂಹಾರದಲ್ಲಿ ತೊಡಗಿರುವನು" ಎಂದು ಸ್ತುತಿಸುತ್ತ, ಆ ಚಕ್ರವು ಭಗವತಿಯಾದ ಆಕಾಶಗಂಗೆಯನ್ನು ಪ್ರಾರ್ಥಿಸಿ ನೀರು ಪಡೆದು ಆಚಮನವನ್ನು ಮಾಡಿ, ಭಗವಂತನ ಹತ್ತಿರ ಬಂದು ಜಯಘೋಷಮಾಡಿ ನಮಸ್ಕರಿಸಿತು.

ವಾಸುದೇವನು ಆ ಸುದರ್ಶನವನ್ನು ಅಪ್ರತಿಮ ಪರಾಕ್ರಮಿಯಾಗೆಂದು ಆಶೀರ್ವದಿಸಿ, "ಸಕಾಲಕ್ಕೆ ಒದಗಿ ಬಂದೆ" ಎಂದನು. ಸುದರ್ಶನವು ಭಗವಂತನ ಆಜ್ಞೆಯನ್ನೇ ಎದುರು ನೋಡುತ್ತ "ಮೇರುಮಂದರಗಳ ಮಾಲೆಯನ್ನು ಗಿರಗಿರನೆ ತಿರುಗಿಸಲೋ? ಅಥವಾ ಸಮುದ್ರವನ್ನೆಲ್ಲ ಕಲಕಿಬಿಡಲೊ? ಇಲ್ಲವೆ, ನಕ್ಷತ್ರಗಳನ್ನೆಲ್ಲ ಭೂಮಿಗೆ ಉದುರಿಸಿಬಿಡಲೊ? ಏನು ಮಾಡಲಿ? ಭಗವಂತನ ದಯೆಯಿಂದ ನನಗೆ ಯಾವುದೂ ಅಸಾಧ್ಯವಲ್ಲ" ಎಂದಿತು.

ಆಗ ವಾಸುದೇವನು ಆ ಸುದರ್ಶನದ ಉತ್ಸಾಹವನ್ನು ಕಂಡು, "ಸುಯೋಧನನು ಲವಣಸಮುದ್ರದಲ್ಲಿ ಮುಳುಗಿದರೂ ಸರಿ, ಗಿರಿಗುಹೆಗಳಲ್ಲಿ ಅಡಗಿದರೂ ಸರಿ, ಗ್ರಹಗಳು ತಿರುಗುವ ಆಕಾಶಮಾರ್ಗವನ್ನು ಏರಿದರೂ ಸರಿ, ಈ ಚಕ್ರದಿಂದ ಅವನು ಪಾರಾಗುವಂತಿಲ್ಲ. ನನ್ನ ಬಾಹುಬಲದಿಂದ ಮಿತಿಮೀರಿದ ವೇಗವನ್ನು ಹೊಂದಿ ಹೋಗಿ ಎರಗುವ ಈ ಚಕ್ರವು ಅವನ ಪಾಲಿಗೆ ಕಾಲನ ಚಕ್ರವಾಗುವುದು" ಎಂದು ಸುದರ್ಶನವನ್ನು ತನ್ನ ಬಳಿಗೆ ಕರೆದನು.

ಭಗವಂತನ ಆಜ್ಞೆಯನ್ನು ಪಾಲಿಸಲು ಮುಂದೆ ನುಗ್ಗಿದ ಸುದರ್ಶನವು ಉತ್ತರಕ್ಷಣದಲ್ಲಿಯೇ ವಿಚಾರಮಾಡಿ ಸಮಾಧಾನಗೊಂಡು, "ಭಗವಂತನಾದ ನಾರಾಯಣನು ಪ್ರಸನ್ನನಾಗಬೇಕು. ಭೂಭಾರವನ್ನು ಇಳಿಸುವುದಕ್ಕಾಗಿಯೇ ಅವತಾರ ಮಾಡಿರುವ ನೀನು ಈ ಸುಯೋಧನನನ್ನು ಈಗಲೇ ಕೊಂದರೆ, ಬಂದ ಶ್ರಮವೆಲ್ಲ ವ್ಯರ್ಥವಲ್ಲವೆ?" ಎಂದು ವಿಜ್ಞಾಪನೆ ಮಾಡಿತು.

ವಾಸುದೇವನಾದರೂ ಆ ಸುದರ್ಶನದ ವಿಚಾರಪೂರ್ಣವಾದ ವಾದವನ್ನು ಒಪ್ಪಿ, "ಹೌದು, ಸುದರ್ಶನ. ದುರ್ಯೋಧನನ ಮೇಲಿನ ರೋಷದಿಂದ ದೂತನಾದವನ ಮರ್ಯಾದೆಯನ್ನು ನಾನು ಮರೆತೆ" ಎಂದು ಆ ಚಕ್ರವನ್ನು ಸ್ವಸ್ಥಾನಕ್ಕೆ ಹೋಗಹೇಳಿದನು.

ಸುದರ್ಶನ ಚಕ್ರವು ಹೀಗೆ ಭಗವಂತನ ಆಜ್ಞೆಯ ಪ್ರಕಾರ ಹಿಂದಿರುಗುವಾಗ ಆ ಸಭೆಯಲ್ಲಿದ್ದವರನ್ನು ಕುರಿತು "ಮೂರು ಲೋಕಗಳನ್ನೂ ತನ್ನ ಮೂರು ಹೆಜ್ಜೆಗಳಿಂದ ಮುಚ್ಚಿದ ನಾರಾಯಣನಾದ ಈ ಕೃಷ್ಣಸ್ವಾಮಿಯನ್ನು ಗೋಪಾಲಕನೆಂದು ತಿರಸ್ಕರಿಸದೆ, ಈತನಿಗೆ ಶರಣಾಗತರಾಗಿರಿ" ಎಂದು ಎಚ್ಚರಿಸಿ ಹೊರಟಿತು.

ಅಷ್ಟರೊಳಗಾಗಿ ಭಗವಂತನ ರೋಷವನ್ನು ತಿಳಿದು ಭಗವಂತನ ದಿವ್ಯಾಯುಧಗಳೆಲ್ಲವೂ ಸುದರ್ಶನದ ಹಿಂದೆಯೇ ಒಂದೊಂದಾಗಿ ಹೊರಟುಬಂದು, ಹಿಂದಿರುಗಿದ ಸುದರ್ಶನಕ್ಕೆ ಎದುರಾದುವು. ಅವುಗಳಲ್ಲಿ ಒಂದೊಂದೂ ಶತ್ರುಸೈನ್ಯಗಳನ್ನು ಸುಡುವಂಥ ಸಾಮರ್ಥ್ಯವುಳ್ಳವು.

ಮೊದಲು ಬಂದ ಆ ಶಾರ್ಙ್ಗವೆಂಬ ಚಾಪವು ಮೃದುವಾಗಿ ತೆಳುವಾಗಿ ಲಲಿತವಾಗಿ ಹೆಣ್ಣಂತೆ ಬಳಕುತ್ತಿದ್ದರೂ ಶ್ರೀ ವಿಷ್ಣು ಕೈಯಲ್ಲಿ ಹಿಡಿದಾಗ ಶತ್ರುಸಂಘಕ್ಕೆ ಯಮಪ್ರಾಯವಾದುದು. ಅದರ ಹೆದೆಯನ್ನು ಮಿಡಿದರೆ ಹೊರಡುವ ಮೊಳಗು ಪ್ರಳಯಕಾಲದ ಮೋಡದ ಗುಡುಗಿನಂತಹದು. ಬೆನ್ನಿನಲ್ಲಿ ಚಿನ್ನದ ಕೆತ್ತನೆಯುಳ್ಳ ಆ ಚಾಪವು ಶ್ರೀಕೃಷ್ಣನ ಬಳಿಯಲ್ಲಿ ನಿಂತರೆ ಹೊಸಮೋಡದ ಅಂಚಿನಲ್ಲಿ ನಿಂತ ಮಿಂಚುಬಳ್ಳಿಯಂತೆ ಕಾಣುತ್ತಿತ್ತು.

ಅದರ ಹಿಂದೆ ಬಂದ ಕೌಮೋದಕೀ ಗದೆಯಾದರೋ ರಾಕ್ಷಸರ ಗಟ್ಟಿಯಾದ ಎದೆಗಳನ್ನು ಕುಟ್ಟಿ ಪುಡಿಮಾಡುವ ಸಾಮರ್ಥ್ಯವುಳ್ಳದ್ದು. ಚಿನ್ನದ ಮಣಿಗಳಿಂದಲಂಕೃತವಾಗಿ, ಚಿತ್ರತರವಾದ ಮಾಲೆಗಳನ್ನು ಧರಿಸಿ, ರಾಕ್ಷಸರನ್ನು ಧ್ವಂಸಮಾಡುವ ಹಿರಿಯಾಸೆಯಿಂದ ಪರ್ವತಕೂಟದಂಥ ಆ ಗದೆಯು ರಭಸದಿಂದ ಬಂದಿತು. ಅದು ಬಂದ ವೇಗಕ್ಕೆ ಮೇಘಮಾಲೆಗಳು ಅದನ್ನು ಹಿಂಬಾಲಿಸಿ ಬಂದವು.

ಬಳಿಕ ಬಂದ ಪಾಂಚಜನ್ಯವು ಬೆಳುದಿಂಗಳಂತೆ ಶುಭ್ರವಾಗಿ, ಗಂಭೀರವಾದ ಘೋಷದಿಂದ ಗರ್ಜಿಸುವ ಭಗವಂತನ ಶಂಖ. ಪೂರ್ಣಚಂದ್ರನಂತೆಯೂ ಕುಂದಗಳನ್ನೂ ಕುಮುದಗಳನ್ನೂ ಪೋಣಿಸಿದ ಹಾರದಂತೆಯೂ ಬಿಳಿದಾಗಿರುವ ಆ ಶಂಖಕ್ಕೆ ನಾರಾಯಣನು ತನ್ನ ಮುಖವೆಂಬ ತಾವರೆಯನ್ನೊತ್ತಿ ಊದಿದರೆ, ಪ್ರಳಯ ಸಾಗರದ ಘೋಷಕ್ಕೆ ಸಮನಾದ ಆ ಧ್ವನಿಯನ್ನು ಕೇಳಿ ರಾಕ್ಷಸ ಸ್ತ್ರೀಯರ ಗರ್ಭಗಳು ಪತನಹೊಂದುವುವು.

ಅನಂತರ ಬಂದ ನಂದಕವೆಂಬ ಖಡ್ಗವು ಸೂರ್ಯಮಂಡಲವನ್ನೂ ಮೀರಿಸಿದ ತೇಜಸ್ಸುಳ್ಳದ್ದು. ಹೆಣ್ಣಂತೆ ತೆಳ್ಳಗಿದ್ದು ಬಳುಕುತ್ತಿದ್ದರೂ ಯುದ್ಧಭೂಮಿಯಲ್ಲಿ ಮಹಾರಾಕ್ಷಸರನ್ನು ಕೂಡ ಭಯಗೊಳಿಸುವ ಆ ಖಡ್ಗವು ಗಗನದಲ್ಲಿ ವೇಗವಾಗಿ ಬರುತ್ತಿದ್ದರೆ ಉರಿಯುವ ಉಲ್ಕೆಯ ಹಾಗೆ ತೋರುತ್ತಿತ್ತು.

ಹೀಗೆ ಬಂದ ಆ ನಾಲ್ಕು ದಿವ್ಯಾಯುಧಗಳನ್ನೂ ಸಮಾಧಾನಗೊಳಿಸಿ, ಅವುಗಳನ್ನು ಹಿಂದಿರುಗಿಸಿ, ಸುದರ್ಶನವು ತಾನೂ ಹೋಗಬೇಕೆಂದಿರುವಷ್ಟರಲ್ಲಿ ಗಾಳಿ ಬಲು ಬಿರುಸಾಗಿ ಬೀಸತೊಡಗಿತು! ಬಿಸಿಲಿನ ಬೇಗೆ ಅತಿ ತೀಕ್ಷ್ಣವಾಯಿತು! ಬೆಟ್ಟಗಳು ಅದುರಿದುವು! ಸಮುದ್ರಗಳು ಅಲ್ಲೋಲಕಲ್ಲೋಲವಾದುವು! ಮರಗಳು ಮುರಿದುಬಿದ್ದವು! ಮೋಡಗಳು ದಿಕ್ಕಾಪಾಲಾಗಿ ಓಡಿದವು! ವಾಸುಕಿಯೇ ಮೊದಲಾದ ನಾಗರಾಜರು ತಲೆ ಮರೆಸಿಕೊಂಡರು!

"ಈ ಉತ್ಪಾತಗಳೇನು!" ಎಂದುಕೊಳ್ಳುತ್ತಿರುವಷ್ಟರಲ್ಲಿ ಭಗವಂತನ ವಾಹನವಾದ ಗರುಡನು ಬಂದನು. ಹಿಂದೆ ದೇವಾಸುರರು ಪರಿಶ್ರಮದಿಂದ ಪಡೆದ ಅಮೃತವನ್ನು ಇಂದ್ರನ ರಕ್ಷಣೆಯಿಂದ ಸಾಧಿಸಿ ತಂದು, ತಾಯ ಬಂಧನವನ್ನು ಬಿಡಿಸಿದ ಆ ಕಶ್ಯಪ

ಪ್ರಿಯಪುತ್ರನಾದ ಗರುಡನು ಆಗ 'ನಿನಗೆ ನಾನು ವಾಹನವಾಗುವೆ ನೆಂದು ಮುರಾರಿಗೆ ವರಕೊಟ್ಟಂತಹವನು.

ಅಂತಹ ಗರುಡನನ್ನೂ ಸುದರ್ಶನವು ಸಮಾಧಾನಗೊಳಿಸಿ, ಅವನು ಹಿಂದಿರುಗಿದನಂತರ ತಾನೂ ತನ್ನ ನಿವಾಸವಾದ ಮೇರು ಗುಹೆಗೆ ಹೊರಟುಹೋಯಿತು.

§ ೫

ಇತ್ತ, ವಾಸುದೇವನು ತನ್ನ ದಿವ್ಯಾಯುಧಗಳೆಲ್ಲವೂ ಹೊರಟು ಹೋದ ಮೇಲೆ ತಾನೂ ಪಾಂಡವರ ಶಿಬಿರಕ್ಕೆ ಹೋಗುವೆನೆಂದು ಹೊರಡಲು ; ಅತ್ತ, ತನ್ನ ಮಗನು ಶಾರ್ಙಪಾಣಿಯಲ್ಲಿ ತಪ್ಪಿ ನಡೆದುದನ್ನು ಕೇಳಿದ ಧೃತರಾಷ್ಟ್ರನು "ಭಗವಂತನಾದ ನಾರಾಯಣ ನೆಲ್ಲಿ? ಪಾಂಡವರಿಗೆ ಹಿತವನ್ನು ಕೋರುವ ಭಗವಂತನೆಲ್ಲಿ? ವಿಪ್ರರಿಗೆ ಪ್ರಿಯನಾದ ಭಗವಂತನೆಲ್ಲಿ ? ದೇವಕೀನಂದನನಾದ ಆ ಭಗವಂತ ನೆಲ್ಲಿ ?" ಎಂದು ಹುಡುಕುತ್ತಾ ಬಂದು, ಶ್ರೀ ಕೃಷ್ಣನ ಪಾದಗಳಲ್ಲಿ ತನ್ನ ತಲೆಯನ್ನಿಟ್ಟನು.

ಹಿರಿಯರಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಔಚಿತ್ಯವನ್ನು ಬಲ್ಲ ಆ ವಾಸುದೇವನು "ಅಯ್ಯೋ, ಪೂಜ್ಯನು ಬಿದ್ದುಬಿಟ್ಟನಲ್ಲಾ!" ಎಂದು, ತನ್ನ ಕಾಲಿಗೆರಗಿದ ಧೃತರಾಷ್ಟ್ರನನ್ನು ಕೈಹಿಡಿದು ಎಬ್ಬಿಸಿ, ಅವನು ತನಗೆ ಭಕ್ತಿಯಿಂದ ನೀಡಿದ ಅರ್ಘ್ಯವನ್ನೂ ಪಾದ್ಯವನ್ನೂ ಸ್ವೀಕರಿಸಿದನು.

ಭಗವಂತನ ಆ ಪ್ರಸನ್ನತೆಯನ್ನು ಕಂಡು ಧೃತರಾಷ್ಟ್ರನು ಕೃತಾರ್ಥನಾದನು.

ಅನಂತರ ನಾರಾಯಣನು ಪಾಂಡವರ ಪಾಳಯಕ್ಕೆಹೋದನು.

# ದೂತ ಘಟೋತ್ಕಚದ ಕಥೆ

## § ೧

ಶ್ರೀ ಕೃಷ್ಣನು ಪಾಂಡವರ ದೂತನಾಗಿ ದುರ್ಯೋಧನನ ಆಸ್ಥಾನಕ್ಕೆ ಬರುವುದಕ್ಕೆ ಮುಂಚೆಯೇ ಕುರುರಾಜನು ಯುದ್ಧವನ್ನೇ ಬಯಸಿ, ಮಾವನ ಸೂಚನೆಯಂತೆ ಪಿತಾಮಹನಿಗೆ ಸೇನಾಧಿಪತ್ಯವನ್ನು ಕೊಡುವುದೆಂದು ನಿಶ್ಚಯಿಸಿದ್ದನು. ಕೃಷ್ಣನ ದೌತ್ಯ ವಿಫಲವಾಗಿ ಸಂಧಿಯ ಮಾತು ಮುರಿದು ಬಿದ್ದಮೇಲೆ ಗಂಗಾತ್ಮಜನ ನೇತೃತ್ವದಲ್ಲಿ ಮಹಾಭಾರತ ಯುದ್ಧ ಮೊದಲಾಯಿತು. ಹತ್ತು ದಿನಗಳು ಒಂದೇ ಸಮನೆ ಕಾದಾಡಿದ ಬಳಿಕ ಭೀಷ್ಮನು ಪಾಂಡವರಿಂದ ವಧಿಸಲ್ಪಟ್ಟಾಗ, ಆ ಭೀಷ್ಮವಧೆಯಿಂದಾದ ಕ್ರೋಧವೇ ಕಾರಣವಾಗಿ ಧೃತರಾಷ್ಟ್ರನ ಮಕ್ಕಳು ಪಾಂಡವರ ಕಡೆಯ ಅಭಿಮನ್ಯು ಕುಮಾರನನ್ನು ಕೊಂದುಹಾಕಿದರು.

ಜನಾರ್ದನನು ಧನಂಜಯನಿಗೆ ಸಹಾಯನಾಗಿ ಅವನನ್ನು ಸಂಶಪ್ತಕರ ಸೈನ್ಯದ ಮೇಲೆ ನಡೆಸಿಕೊಂಡು ಹೋದ ಸಮಯದಲ್ಲಿ ಬಾಲಕನಾದ ಅಭಿಮನ್ಯುವು ಯುದ್ಧದ ದೋಷವನ್ನರಿಯದೆ ಹೊರಗೆ ಬಂದಾಗ, ಹುಲಿಯು ಮರೆಯಾಗಿರುವಾಗ ಗುಹೆಗೆ ನುಗ್ಗಿ ಮರಿಗಳನ್ನು ಹಿಂಸಿಸುವ ಹಾಗೆ, ಅನೇಕ ರಾಜರು ಗುಂಪಾಗಿ ಬಂದು ಅವನನ್ನು ಮುತ್ತಿದರು. ಅಭಿಮನ್ಯು ಬಾಲಕನಾದರೂ ಹಸ್ತ್ಯಶ್ವ ರಥ ಪದಾತಿಗಳನ್ನು ಸದೆದು, ಆ ರಾಜರುಗಳ ಅಸಂಖ್ಯವಾದ ಬಲವನ್ನು ಕಲಕಿಬಿಟ್ಟನು; ಬೇರೊಬ್ಬ ಅರ್ಜುನನೋ ಎಂಬಂತೆ ಯುದ್ಧ ಕರ್ಮವನ್ನು ಮೆರೆದನು. ಆಗ ಅವನ ಹಾವಳಿಯನ್ನು ತಾಳಲಾರದೆ ರಾಜರುಗಳೆಲ್ಲ ಅವನನ್ನು ಮುತ್ತಿದ್ದ ಸಮಯದಲ್ಲಿ, ಧೃತರಾಷ್ಟ್ರನ ಅಳಿಯನಾದ ಜಯದ್ರಥನು ಅವನನ್ನು ಕೊಂದನು.

ಹೀಗೆ ಅಭಿಮನ್ಯು ವಧೆಯಾದ ಬಳಿಕ, ಅರ್ಜುನನು ಎಲ್ಲಿ ಬಂದು ಏನು ಮಾಡುವನೋ ಎಂದು ಅವನು ಹೋದ ದಿಕ್ಕನ್ನೇ ಹೆಜ್ಜೆಹೆಜ್ಜೆಗೂ ಭಯದಿಂದ ನೋಡುತ್ತ ಆ ರಾಜರುಗಳೆಲ್ಲರೂ ಆ ಸುಭದ್ರಾಸುತನ ಬಾಣಗಳ ಗಾಯದಿಂದ ಮೈಮರೆತು ತಮ್ಮ ಪಾಳಯಗಳಿಗೆ ಹೋದರು.

ಅತ್ತ, ಪಾಂಡವರಾದರೋ ಆ ಅಭಿಮನ್ಯುವಿನ ದೇಹವನ್ನು ತಮ್ಮ ಪಾಳಯಕ್ಕೆ ತಂದು, ಅರ್ಜುನನು ಬಂದು ನೋಡಲಿ ಎಂದು ಆ ದೇಹವನ್ನು ಚಿತೆಯ ಮೇಲಿಡದೆ ಕಾದು ಕುಳಿತು, ಅವನ ವಧೆಗೆ ಕಾರಣರಾದ ರಾಜರುಗಳ ಹೆಸರುಗಳನ್ನು ಜ್ಞಾಪಿಸಿಕೊಳ್ಳುತ್ತಿದ್ದರು.

§ ೨

ಬಾಲನಾದ ಅಭಿಮನ್ಯುವಿನ ವಧೆಯ ವಾರ್ತೆಯನ್ನು ದೂತನು ತಂದು ಧೃತರಾಷ್ಟ್ರ ಮಹಾರಾಜನಿಗೆ ವಿಜ್ಞಾಪಿಸಿದನು. ನೂರು ಜನ ಮಕ್ಕಳನ್ನು ಪಡೆದು, ಶ್ಲಾಘ್ಯರಾದ ಬಾಂಧವರನ್ನು ಹೊಂದಿ, ವಿಶೇಷವಾದ ಜ್ಞಾನದಿಂದ ಬೆಳೆದ ವಿನಯಾಚಾರಗಳೆಂಬ ದೀರ್ಘದೃಷ್ಟಿಗಳನ್ನುಳ್ಳ ಆತನು ಆಗ “ಈ ಬಾಲವಧೆಯು ಪಾಪದ ಕಲೆಯಿಂದ ನಮ್ಮ ವಂಶಕ್ಷಯವಾಯಿತು. ಪ್ರಿಯವಲ್ಲದ ಈ ವಾರ್ತೆಯನ್ನು ಪ್ರಿಯವೆಂಬಂತೆ ಧೈರ್ಯವಾಗಿ ಘೋಷಿಸಿ, ನನ್ನ ಕಿವಿಗಳನ್ನು ಕೆಡಿಸಿದವನು ಯಾರು?” ಎಂದು ತಪಿಸಿಹೋದನು. ಉತ್ತಮರಾದ ಪುರುಷರನ್ನೂ ಉಳಿಸದೆ ಮಕ್ಕಳುಮರಿಗಳನ್ನೂ ನಾಶಗೊಳಿಸಿದ ಆ ದಾಯಾದಿಗಳ ಕಲಹಕ್ಕೆ ಗಾಂಧಾರಿಯೂ ಮರುಗಿದಳು. “ಈ ಅಭಿಮನ್ಯುವಿನ ಮರಣದಿಂದ ಕೃಷ್ಣ ಪಾರ್ಥರಿಬ್ಬರೂ ಕ್ರೋಧಗೊಂಡು, ಅವನು ಮುಂದೆ ಚಾವಟಿಯನ್ನೂ ಇವನು ಹಿಂದೆ ಧನುಸ್ಸನ್ನೂ ಹಿಡಿದು ಬಂದರೆ, ಅವರ ಶತ್ರುಗಳು ಮಾತ್ರವೇ ಅಲ್ಲದೆ

ಲೋಕವೇ ನಾಶವಾಗುವುದು" ಎಂದು ಅಂಧನೃಪನು ಗಾಂಧಾರಿಗೆಂದನು. ಅವರ ಮಗಳಾದ ದುಶ್ಶಲೆ ಕೂಡ, ಅಭಿಮನ್ಯುವಿನ ವಧೆಗೆ ತನ್ನ ಪತಿಯಾದ ಜಯದ್ರಥನೇ ಕಾರಣನೆಂಬುದು ಗೊತ್ತಿಲ್ಲದೆ, "ಅಭಿಮನ್ಯುವನ್ನು ಕೊಂದು ಅವನ ಪತ್ನಿಯಾದ ಉತ್ತರೆಗೆ ವೈಧವ್ಯವನ್ನುಂಟುಮಾಡಿದವನು ತನ್ನ ಹೆಂಡತಿಯರಿಗೂ ಅಂದೇ ವೈಧವ್ಯವನ್ನು ತಂದುಕೊಂಡನು. ಕೃಷ್ಣಪಾರ್ಥರು ಆ ಹತಕನನ್ನು ಸಂಹರಿಸುವುದು ಖಂಡಿತ" ಎಂದಳು.

ಅನಂತರ ಆ ಮೂವರೂ ಜಯತ್ರಾತನೆಂಬ ಭಟನ ಮುಖದಿಂದ ಅಭಿಮನ್ಯುವಿನ ಮರಣದ ವೃತ್ತಾಂತವನ್ನು ಕೇಳಿ ತಿಳಿದರು. ನಿಜಸ್ಥಿತಿಯನ್ನು ಅರಿತಾಗ ಮಂದಭಾಗಿನಿಯಾದ ದುಶ್ಶಲೆ "ನಾನೂ ಉತ್ತರೆಯ ಬಳಿಗೆ ಹೋಗಿ, ಈ ಸಮಯಕ್ಕೆ ಅವಳು ತಾಳುವ ವಿಧವೆಯ ವೇಷವನ್ನು ನಾನೂ ತಾಳುತ್ತೇನೆ" ಎಂದು ತಾಯಿತಂದೆಯರ ಅಪ್ಪಣೆಯನ್ನು ಬೇಡಿದಳು.

ತಾಯಿಯಾದ ಗಾಂಧಾರಿ "ಅಮಂಗಳವನ್ನು ನುಡಿಯಬೇಡ. ನಿನ್ನ ಪತಿಯಿನ್ನೂ ಬದುಕಿರುವನಲ್ಲ!" ಎಂದು ಮಗಳಿಗೆ ಸಮಾಧಾನ ಹೇಳಿದರೂ ಮಗಳು ಹೇಳಿದ ಮಾತು ಸತ್ಯವೆಂದು ಧೃತರಾಷ್ಟ್ರನಿಗೆ ಗೊತ್ತು. "ಯಾವನಿಗೆ ಜೀವನವು ಬೇಡವಾಯ್ತೋ ಅವನು ಅಭಿಮನ್ಯುವನ್ನು ಕೊಂದು ಪಾಂಡವರೆಂಬ ಪಂಚಾಗ್ನಿಗಳಿಗೆ ತಾನು ಉರುವಲಾದನು. ಜಯದ್ರಥನು ತಾನಾಗಿ ಗಾಂಡೀವಿಯ ಬಾಣಗಳಿಗೆ ಗುರಿಯಾದನು. ದುಶ್ಶಲೆಯ ಮಾಂಗಲ್ಯಭಾಗ್ಯವು ಅವನಿಗೆ ರುಚಿಸದಾಯಿತು. ಅಭಿಮನ್ಯುವಾದರೋ ಶ್ರೀಕೃಷ್ಣನ ತೊಡೆಯಲ್ಲಿ ಅವನ ತೋಳುಗಳೇ ತಲೆದಿಂಬಾಗಿ ಮಲಗಿ ಬೆಳೆದವನು ; ಸಹಜವಾಗಿಯೇ ಮದಿಸಿದ ಹಾಲಾಯುಧನಿಗೆ ಪ್ರೀತಿಯಿಂದ ಎರಡನೆಯ ಮದದಂತೆ ಇದ್ದವನು ; ದೇವತೆಗಳಿಗೆ ಸಮಾನವಾದ ವಿಕ್ರಮವುಳ್ಳ ಪಾಂಡವರ

ಪ್ರೇಮಕ್ಕೆ ಪಾತ್ರನಾದವನು. ಇಂತಹವನನ್ನು ಕೊಂದವನು ಬದುಕುವುದು ಸಾಧ್ಯವೇ ಇಲ್ಲ" ಎಂದು ಅವನಿಗೆನ್ನಿಸಿತು.

§ ೩

ಹೀಗೆ ಈ ಕಡೆ ಧೃತರಾಷ್ಟ್ರ ಗಾಂಧಾರಿ ದುಶ್ಶಲೆಯರು ಅಭಿಮನ್ಯುವಿನ ಅನ್ಯಾಯವಾದ ವಧೆಯನ್ನು ಕೇಳಿ ದುಃಖಿಸುತ್ತಿರಲು, ಆ ಕಡೆ ದುರ್ಯೋಧನ ದುಶ್ಶಾಸನ ಶಕುನಿಗಳು ಅದೇ ಅಭಿಮನ್ಯು ವಧೆಯಿಂದ ಹಿಗ್ಗಿದರು.

"ನಮಗೆ ಪಾಂಡವರೊಡನೆ ಇದ್ದ ವೈರ ಈ ಅಭಿಮನ್ಯುವಿನ ವಧೆಯಿಂದ ದೃಢವಾಯಿತು. ನಮಗೆ ಜಯವಾಯಿತು, ನಮ್ಮ ಶತ್ರುಗಳು ಸೋತು ಓಡಿದರು. ಇದರಿಂದ ಕೃಷ್ಣನ ದರ್ಪ ತಲೆಕೆಳಗಾಯಿತು. ನನಗೆ ಅಭ್ಯುದಯವುಂಟಾಯಿತು, ಕೀರ್ತಿ ಬಂದಿತು" ಎಂದು ದುರ್ಯೋಧನನು ಹೆಮ್ಮೆಯಿಂದ ತಮ್ಮನಿಗೆ ಹೇಳಿದನು.

"ಭೀಷ್ಮನನ್ನು ವಧೆಮಾಡಿ ಪಾಂಡವರು ಮುಂದೆ ನುಗ್ಗುತ್ತಿದ್ದುದರಿಂದ ನಮಗೆ ಉಂಟಾಗಿದ್ದ ದುಃಖವು ಜಯದ್ರಥನು ಸಾಧಿಸಿದ ಈ ಅಭಿಮನ್ಯುವಧೆಯಿಂದ ಮಾಯವಾಯಿತು. ಇವನೇನು ಎರಡನೆಯ ಅರ್ಜುನನೋ ಎಂಬಂತೆ ಬಾಣಗಳ ಮಳೆಯನ್ನು ಕರೆದ ಆ ಸೌಭದ್ರನನ್ನು ಕಡಿಮುದರಿಂದ ಪಾಂಡವರ ಎದೆಗೆ ತೀವ್ರಶೋಕದ ಶರವನ್ನು ನೆಟ್ಟಹಾಗಾಯಿತು" ಎಂದು ದುಶ್ಶಾಸನನೂ ತೃಪ್ತಿಯಿಂದ ಹೇಳಿದನು.

ಶಕುನಿಯೂ ಆ ಜಯದ್ರಥನ ಕೃತ್ಯವನ್ನು ಪ್ರಶಂಸಿಸುತ್ತ, "ಈ ಇವನು ಇಂದಿನ ಯುದ್ಧದಲ್ಲಿ ಮಹಾಕಾರ್ಯ ಮಾಡಿದನು. ಇವನಿಗೆ ಇಷ್ಟು ಪೌರುಷವುಂಟೆಂದು ಇದುವರೆಗೆ ಯಾರು ತಿಳಿದಿದ್ದರು? ಈ ದಿನ ಇವನು ಕಾಳಗದಲ್ಲಿ ಅಭಿಮನ್ಯುವಿನ ಪ್ರಾಣ

ವನ್ನು ಸೆಳೆದದ್ದು ಮಾತ್ರವಲ್ಲ, ಅದರೊಡನೆಯೇ ಪಾಂಡವರು ಅಪ್ರತಿಮ ಪರಾಕ್ರಮಿಗಳೆಂಬ ಕೀರ್ತಿಯನ್ನೂ ಅಪಹರಿಸಿದನು" ಎಂದನು.

ಹೀಗೆ ತನಗೆ ಜಯವಾಯಿತೆಂದು ಹಿಗ್ಗುತ್ತ ಬಂದ ದುರ್ಯೋಧನನಿಗೆ ತನ್ನ ತಂದೆಯನ್ನು ವಂದಿಸಿ ಬರಬೇಕೆಂದು ಮನಸ್ಸಾಗಿ, ಅವನು ತಮ್ಮನನ್ನೂ ಮಾವನನ್ನೂ ಜೊತೆಗೆ ಬನ್ನಿರೆಂದು ಕರೆದನು. ಆದರೆ "ಧೃತರಾಷ್ಟ್ರನಿಗೆ ಈ ಕುಲಯುದ್ಧವನ್ನು ಕಂಡರಾಗದು. ಅವನು ಪಾಂಡವ ಪಕ್ಷಪಾತಿ. ನಮ್ಮನ್ನು ಸದಾ ಬಯ್ಯುತ್ತಾನೆ. ಆದ್ದರಿಂದ ಈಗ ಹೋಗುವುದು ಬೇಡ. ಯುದ್ಧಮುಗಿದು ಸಂಪೂರ್ಣಜಯವನ್ನು ಪಡೆದ ಮೇಲೆ ಸಂತೋಷದಿಂದ ಅವನ ಬಳಿಗೆ ಹೋಗುವುದು ಯುಕ್ತ" ಎಂದು ಶಕುನಿ ಎಷ್ಟೇ ಹೇಳಿದರೂ ಕೇಳದೆ, "ಏನಾದರೂ ಸರಿಯೆ, ಪೂಜ್ಯನಾದ ತಂದೆಯನ್ನು ವಂದಿಸಿಯೇ ಬರಬೇಕು" ಎಂದು ದುರ್ಯೋಧನನು ತಮ್ಮನನ್ನೂ ಮಾವನನ್ನೂ ಕರೆದುಕೊಂಡು ತಾಯಿತಂದೆಯರಿದ್ದಲ್ಲಿಗೆ ಬಂದನು.

ಬಂದ ಆ ಮೂವರೂ ತಮ್ಮತಮ್ಮ ಹೆಸರುಗಳನ್ನು ಹೇಳಿಕೊಂಡು ಧೃತರಾಷ್ಟ್ರ ಗಾಂಧಾರಿಯರಿಗೆ ವಂದಿಸಿದರು. ಆದರೆ ಧೃತರಾಷ್ಟ್ರನು ಅವರಲ್ಲಿ ಯಾರಿಗೂ ಆಶೀರ್ವಾದ ಮಾಡಲಿಲ್ಲ. "ಬದುಕಬೇಕೆಂಬ ಆಸೆಯನ್ನು ತೊರೆದು ಆ ಅಭಿಮನ್ಯುವನ್ನು ಕೊಂದವರಿಗೆ, ಕೃಷ್ಣನಿಗೂ ಪಾರ್ಥನಿಗೂ ಹೃದಯವೆನ್ನಿಸಿದ ಆ ಬಾಲಕನನ್ನು ಕೊಂದವರಿಗೆ ಹೇಗೆ ಆಶೀರ್ವಾದಮಾಡಲಿ ?" ಎಂದು ಅವನು ಮೌನವಾಗಿದ್ದನು. "ವಂದಿಸಿದವರಿಗೆ ಆಶೀರ್ವಾದ ಮಾಡಲಿಲ್ಲವಲ್ಲಾ!" ಎಂದು ಆ ಮೂವರೂ ವಿಸ್ಮಿತರಾದರು.

"ಅನೇಕ ಗಂಡುಮಕ್ಕಳು ಹುಟ್ಟಿದ ಈ ಕುಲದಲ್ಲಿ ದುಶ್ಶಲಿಯೊಬ್ಬಳೇ ಹೆಣ್ಣಾಗಿ ಹುಟ್ಟಿ, ನೂರು ಗಂಡುಗಳಿಗಿಂತ ನಮಗೆ

ಹೆಚ್ಚಾದಳು. ಇಂತಹ ಪ್ರಿಯಪುತ್ರಿಯು ನಿಮ್ಮ ದಯೆಯಿಂದ ಈಗ ಪತಿಹೀನೆಯಾಗುವಳು" ಎಂದು ಧೃತರಾಷ್ಟ್ರನು ಪೇಚಾಡಿದನು.

ಅದಕ್ಕೆ ದುರ್ಯೋಧನನು "ಜಯದ್ರಥನಿಗೂ ಈ ಅಭಿಮನ್ಯು ವಧೆಗೂ ಏನು ಸಂಬಂಧ? ಜಯದ್ರಥನ ಜೊತೆಗೆ ಇನ್ನೂ ಎಷ್ಟೋ ಜನ ರಾಜರು ಸೇರಿಕೊಂಡು ಆ ಪಾಂಡವರನ್ನು ತಡೆದರು" ಎಂದು ಸಮಾಧಾನ ಹೇಳಿದನು.

"ಆದರೂ ಅಭಿಮನ್ಯು ನಮ್ಮ ಮಕ್ಕಳಂತೆಯೇ ನಮಗೆ ಮಗನಲ್ಲವೆ? ಒಬ್ಬೊಂಟಿಯಾಗಿ ಯುದ್ಧಕ್ಕೆ ಬಂದ ಎಳೆಯನಲ್ಲವೆ? ಅಂತಹವನ ಮೇಲೆ ಅನೇಕರು ಒಟ್ಟಾಗಿ ಬಿದ್ದು ನಿರ್ದಯೆಯಿಂದ ಕೊಂದಿರಲ್ಲಾ! ನಿಮ್ಮ ತೋಳು ಹೇಗೆ ಬೀಳದೆ ನಿಂತುವೋ!" ಎಂದು ಸಂತಾಪದಿಂದ ನುಡಿದ ತಂದೆಗೆ ದುರ್ಯೋಧನನು "ತಂದೆಯೇ, ಮುದುಕನಾದ ಭೀಷ್ಮನನ್ನು ಮೋಸದಿಂದ ಕೊಂದವರ ತೋಳುಗಳು ಕಡಿದುಬೀಳದೆ ನಿಂತಿರುವಾಗ ಅಭಿಮನ್ಯುವನ್ನು ಕೊಂದ ನಮ್ಮ ತೋಳುಗಳು ಏಕೆ ಬೀಳಬೇಕು? ಅಭಿಮನ್ಯು ವಯಸ್ಸಿನಲ್ಲಿ ಬಾಲಕನಾದರೂ ಪರಾಕ್ರಮದಲ್ಲಿ ಬಾಲಕನಲ್ಲ" ಎಂದನು.

"ಭೀಷ್ಮನನ್ನು ಕೆಡಹಿದ್ದೂ ಅಭಿಮನ್ಯುವನ್ನು ಕೊಂದದ್ದೂ ಒಂದಕ್ಕೊಂದು ಸಮನಲ್ಲ. ಭೀಷ್ಮನಾದರೋ ಇಚ್ಛಾಮರಣಿ; ತನ್ನನ್ನು ಕೆಡಹುವ ಉಪಾಯವನ್ನು ತಾನೇ ಹೇಳಿಕೊಟ್ಟು ಆತ್ಮತೃಪ್ತಿಯಿಂದ ಬಿದ್ದವನು. ಇವನಾದರೋ ಇನ್ನೂ ಬಾಲಕ; ನಮ್ಮ ಕುರುವಂಶದ ನಾಯಕ; ಅರ್ಜುನನ ಮೊದಲ ಮಗ. ಇಂಥವನನ್ನು ಕೊಂದಿರಲ್ಲಾ!" ಎಂದು ಮರುಗುತ್ತಿದ್ದ ತಂದೆಯನ್ನು ಕುರಿತು ದುಶ್ಶಾಸನನು "ತಂದೆಯೇ, ಅಭಿಮನ್ಯುವು ನಮ್ಮಂತಹ ವೀರರು ಎದುರಿಗೆ ನಿಂತು ನೋಡುತ್ತಿದ್ದ ಹಾಗೆಯೇ ವಜ್ರಶಕ್ತಿಯನ್ನು ಪಡೆದ

ಬಿಲ್ಲನ್ನು ಬಗ್ಗಿಸಿ, ಸೂರ್ಯನು ಕಿರಣಮಾಲೆಗಳನ್ನು ಕರೆಯುವಂತೆ, ಬಾಣಗಳ ಮಳೆಗರೆದು ರಾಜರನ್ನೆಲ್ಲ ನೋಯಿಸಿದನು. ಇಂತಹ ಹುಡುಗನನ್ನು ಹುಡುಗನೆಂದು ಹೇಳಬಹುದೆ?" ಎಂದನು.

ಆದರೆ ಯಾರು ಏನು ಹೇಳಿದರೂ ಧೃತರಾಷ್ಟ್ರನ ದುಃಖ ಅಡಗದು. "ಏಕಾಕಿಯಾಗಿ ಬಂದ ಬಾಲಕನನ್ನು ಇವರು ಕೊಂದರಲ್ಲಾ! ಪುತ್ರಶೋಕದಿಂದ ತಪಿಸುವ ಅರ್ಜುನನು ಮುಂದೇನು ಮಾಡುವನೋ!" ಎಂದು ಅವನ ಕಳವಳ ಆರದು.

ದುರ್ಯೋಧನನಿಗಾದರೋ ನಿಶ್ಚಿಂತೆ. "ಪಾರ್ಥನು ಏನು ಮಾಡಿಯಾನು!" ಎಂಬ ತಾತ್ಸಾರ. "ಈ ಪಾರ್ಥನೆಂಬವನು ಯಾರು!" ಎಂದು ಅಲಕ್ಷ್ಯ.

ಮಗನ ಮೌಢ್ಯಕ್ಕೆ ಮರುಗಿ, ಧೃತರಾಷ್ಟ್ರನು "ಅರ್ಜುನನ ಬಲ ಪರಾಕ್ರಮಗಳು ನಿನಗೆ ಗೊತ್ತಿಲ್ಲದಿದ್ದರೆ ದೇವೇಂದ್ರನನ್ನು ಕೇಳು: ನಿವಾತಕವಚರೆಂಬ ರಾಕ್ಷಸರಿಂದ ಅವನಿಗಾಗುತ್ತಿದ್ದ ಪೀಡೆಯನ್ನು ಪಾರ್ಥನು ಪರಿಹರಿಸಿದನು. ಅಥವಾ ಈಶ್ವರನನ್ನು ಕೇಳು: ಅಂದು ಕಿರಾತರೂಪದಲ್ಲಿ ಬಂದು, ಗಾಂಡೀವಿಯ ದಿವ್ಯಾಸ್ತ್ರಗಳಿಂದ ಏಟು ತಿಂದು ಅವನು ಆನಂದಗೊಂಡನು. ಇಲ್ಲವೆ, ಅಗ್ನಿಯನ್ನು ಕೇಳು: ಆ ದಿನ ಖಾಂಡವವನವನ್ನು ದಹಿಸುವಾಗ ಪಾರ್ಥನು ಕೊಟ್ಟ ಸರ್ಪಗಳ ಆಹುತಿಯನ್ನು ಅವನು ತಿಂದು ತೇಗಿದನು. ಅದೂ ಬೇಡವಾದರೆ, ಆ ದಿನ ನಿನ್ನನ್ನು ಗೆದ್ದು ಸೆರೆಹಿಡಿದು ಕೊಂಡೊಯ್ದನಲ್ಲಾ, ಆ ಚಿತ್ರಾಂಗದನೆಂಬ ವಿದ್ಯಾಧರನನ್ನು 'ಅರ್ಜುನನು ಯಾರು?' ಎಂದು ಕೇಳು" ಎಂದು ಅರ್ಜುನನ ಸಾಹಸವನ್ನು ವರ್ಣಿಸಿದನು.

"ಕರ್ಣನಿರುವಾಗ ನಮಗೇನು ಭಯ?" ಎಂದು ದುರ್ಯೋಧನನಿಗೆ ನಿರ್ಭೀತಿ.

"ಆದರೆ ಅರ್ಜುನನಿಗೆ ಎದುರಾಗಿ ನಿಂತು ಯುದ್ಧಮಾಡುವ ಪ್ರತಿವೀರನಲ್ಲವಲ್ಲಾ, ನಿನ್ನ ಕರ್ಣ! ದೇವೇಂದ್ರನಿಗೆ ತನ್ನ ಸಹಜ ಕವಚವನ್ನು ದಾನಮಾಡಿದ ಈ ಕರ್ಣನು ಅರ್ಧರಥನು; ಸುಳ್ಳಾಡಿ ಅಸ್ತ್ರಗಳನ್ನು ಪಡೆದದ್ದರಿಂದ ಅವು ವ್ಯರ್ಥವಾದವು; ಅವನಿಗೆ ಪಾಂಡವರಲ್ಲಿ ಅನುಕಂಪವುಂಟು; ಜೊತೆಗೆ, ತಾನು ಪರಾಕ್ರಮಿ ಯೆಂಬ ಮದದಿಂದ ಮೈಮರೆತಿದ್ದಾನೆ. ಹೀಗೆ ನಿರ್ವೀರ್ಯನಾದ ಕರ್ಣನಿಗೂ ಇಂದ್ರಾಗ್ನಿರುದ್ರರು ಒಲಿದು ಅಸ್ತ್ರಗಳನ್ನು ಕೊಟ್ಟರೆ, ಆಗ ಅವನು ಅರ್ಜುನನಿಗೆ ಸಮಾನನಾದಾನು" ಎಂದು ಧೃತರಾಷ್ಟ್ರನು ದುರ್ಯೋಧನನಿಗೆಂದನು.

ಆಗ, ಅದುವರೆಗೂ ಅವನ ಮಾತುಗಳನ್ನು ಮೌನವಾಗಿ ಕೇಳುತ್ತಿದ್ದ ಶಕುನಿಯು ತಡೆಯಲಾರದೆ "ನೀವು ನಮ್ಮನ್ನು ನಿಂದಿಸು ವುದರಲ್ಲಿ ತುಂಬ ಗಟ್ಟಿಗರು" ಎಂದಷ್ಟೆ ಹೇಳಿದನು.

"ಓಹೋ, ಶಕುನಿಯೂ ಇಲ್ಲೇ ಇದ್ದಾನೆ! ಶಕುನಿ, ಸದಾ ಜೂಜಿನಲ್ಲೇ ಮುಳುಗಿರುವ ನಿನ್ನಿಂದ ನಮ್ಮ ವಂಶದಲ್ಲಿ ಈ ವೈರಾಗ್ನಿ ಹುಟ್ಟಿತು. ನೀನು ಇಟ್ಟ ಈ ಬೆಂಕಿ ನನ್ನ ಮಕ್ಕಳನ್ನು ಸುಡದೆ ಇರದು" ಎಂದು ಧೃತರಾಷ್ಟ್ರನು ಹೇಳುತ್ತಿರುವಾಗಲೇ ನೆಲ ಗುಡುಗಿ ನಡುಗಿತು! ಉಲ್ಕಾಪಾತವಾದಂತೆ ಆಕಾಶ ಬೆಳಕಾಯಿತು! ಶಂಖ ಪಟಹ ಸಿಂಹನಾದಗಳೆಲ್ಲವೂ ಏಕಕಾಲದಲ್ಲಿ ಆದ ಹಾಗೆ ಪಾಂಡವರ ಶಿಬಿರದಿಂದ ಧ್ವನಿ ಕೇಳಿಸಿತು!

"ಇದೇನಿದು ಕೋಲಾಹಲ?" ಎಂದು ದುರ್ಯೋಧನನು ಕುತೂಹಲಗೊಂಡು, ಜಯತ್ರಾತನನ್ನು ಕರೆದು, "ಏನಾಯಿತು, ತಿಳಿದು ಬಾ" ಎಂದು ಆಜ್ಞಾಪಿಸಿದನು.

ಉಲ್ಕಾಪಾತವಾದುದನ್ನು ಕೇಳಿದ ಅಂಧನೃಪನು "ಇದು ಉಲ್ಕಾಪಾತವಲ್ಲ. ತನ್ನ ಮೊಮ್ಮಗನ ಸಾವಿನಿಂದ ಸಂಕಟಗೊಂಡ

ದೇವೇಂದ್ರನು ಅತ್ತು ಸುರಿಸಿದ ಸುಡುವ ಕಣ್ಣೀರಿನ ಹನಿಗಳಿವು” ಎಂದು ಹೇಳುತ್ತಿರುವಷ್ಟರಲ್ಲಿ ಜಯತ್ರಾತನು ಹೋಗಿಬಂದು, ತಾನು ಕೇಳಿದುದನ್ನು ವಿಜ್ಞಾಪಿಸಿದನು.

“ಸಂಶಪ್ತಕರ ಸೈನ್ಯವನ್ನು ಎದುರಿಸಲು ಹೋಗಿದ್ದ ಅರ್ಜುನನು ಹಿಂದಿರುಗಿ ಬಂದ ಮೇಲೆ ಹತನಾದ ಮಗನನ್ನು ತೊಡೆಯ ಮೇಲಿಟ್ಟುಕೊಂಡು ಕಣ್ಣೀರಿನಿಂದ ಅವನ ಕಳೇಬರವನ್ನು ನೆನೆಸಿದನು. ಆಗ ಜನಾರ್ದನನು ಅವನ ಕಣ್ಣೀರನ್ನು ಕಂಡು ಜರೆಯಲು, ‘ಯಾವನು ನನ್ನ ಮಗನನ್ನು ಕೊಂದನೋ, ಅವನ ಸಾವಿಗೆ ಯಾರು ಸಂತೋಷಪಟ್ಟರೋ, ಅವರೆಲ್ಲರನ್ನೂ ನಾಳೆ ಸಂಜೆಯಾಗುವುದರೊಳಗಾಗಿ ಕೊಂದುಬಿಡುತ್ತೇನೆ’ ಎಂದು ಪಾರ್ಥನು ಪ್ರತಿಜ್ಞೆಮಾಡಿದನು. ಅವನ ಆ ನಿಶ್ಚಯವನ್ನು ಕಂಡು ಪಾಂಡವರ ಮನಸ್ಸು ನೆಮ್ಮದಿಯಾಯಿತು. ಅವನ ವೀರಾಲಾಪಗಳಿಂದ ಅವರ ಉತ್ಸಾಹ ಉಕ್ಕಿತು; ಅವರ ಮುಖ ಹರ್ಷದಿಂದ ಅರಳಿತು; ತಾವಿನ್ನು ಗೆದ್ದೆವೆಂದು ಅವರು ಆ ಕೋಲಾಹಲಶಬ್ದವನ್ನು ಮಾಡಿದರು. ಆಗ ಭೂದೇವಿ ಬೆದರಿದಳೊ ಎಂಬಂತೆ ಅದೇ ಕ್ಷಣದಲ್ಲಿ ಭೂಮಿಯು ನಡುಗಿತು.”

ಹೀಗೆಂದು ವಿಜ್ಞಾಪಿಸಿ ಜಯತ್ರಾತನು ಸುಮ್ಮನಾಗಲು, “ಪಾರ್ಥನ ಪ್ರತಿಜ್ಞೆಯನ್ನು ಕೇಳಿಯೇ ಭೂಮಿ ಹೀಗೆ ನಡುಗಿತೆಂದ ಮೇಲೆ, ಅವನು ಬಾಣವನ್ನು ಹಿಡಿದರೆ ಮೂರು ಲೋಕಗಳೂ ನಡುಗುವುದು ಖಂಡಿತ” ಎಂದು ಧೃತರಾಷ್ಟ್ರನು ಕಾತರನಾದನು.

“ಆ ಅರ್ಜುನನ ಪ್ರತಿಜ್ಞೆಯು ನೆರವೇರದ ಹಾಗೆ ನಮ್ಮ ಎಲ್ಲಾ ಅಕ್ಷೋಹಿಣಿಗಳನ್ನೂ ಒಟ್ಟುಮಾಡಿ, ಅದರ ನಡುವೆ ಜಯದ್ರಥನನ್ನು ಮುಚ್ಚಿ ಮರೆಮಾಡಿಬಿಡುತ್ತೇನೆ. ದ್ರೋಣನ ಸಲಹೆಯನ್ನು ಪಡೆದು ಅಭೇದ್ಯವಾದ ವ್ಯೂಹವನ್ನು ರಚಿಸುತ್ತೇನೆ. ತನ್ನ

ಇಷ್ಟಾರ್ಥ ಕೈಗೂಡದೆ ಅವನು ಸಂಕಟಪಟ್ಟು ಸೋದರರೊಡನೆಯೂ ಸೈನ್ಯದೊಡನೆಯೂ ಅಗ್ನಿಪ್ರವೇಶಮಾಡಿ ಸಾಯಲಿ" ಎಂದು ದುರ್ಯೋಧನನು ಎಷ್ಟು ಧೈರ್ಯದಿಂದಿದ್ದರೂ ಧೃತರಾಷ್ಟ್ರನ ಕಳವಳ ಕಡಿಮೆಯಾಗಲಿಲ್ಲ.

"ಕೃಷ್ಣನನ್ನೇ ಕಣ್ಣಾಗಿ ಉಳ್ಳ ಆ ಅರ್ಜುನನ ಬಾಣಗಳು ನುಗ್ಗಿಬಂದಾಗ, ಭೂಮಿಯನ್ನು ಹೊಕ್ಕರೂ ಸರಿಯೆ, ಗಗನವನ್ನು ಹತ್ತಿದರೂ ಸರಿಯೆ, ತಪ್ಪಿಸಿಕೊಂಡು ಬದುಕುವುದು ಸಾಧ್ಯವಿಲ್ಲ" ಎಂದು ಧೃತರಾಷ್ಟ್ರನು ಕೌರವನ ಎದುರಿಗೆ ಪುನಃ ಪಾಂಡವರ ಪ್ರತಾಪವನ್ನೇ ಎತ್ತಿ ಆಡಿದುದನ್ನು ಕೇಳಿ, "ಮಾಡಿದ ತಪ್ಪಿಗೆ ಅನುಗುಣವಾದ ಶಿಕ್ಷೆಯನ್ನು ವಿಧಿಸುವ ಈ ದುರ್ಯೋಧನನ ಎದುರಿಗೆ ಇಂತಹ ಕ್ರೂರವಾಕ್ಯವನ್ನು ಬೇರೆ ಯಾವನಾದರೂ ಆಡಿದ್ದಿದ್ದರೆ ಅವನು ಆ ಕ್ಷಣವಲ್ಲಿಯೇ ಪ್ರಾಣ ಕಳೆದುಕೊಳ್ಳುತ್ತಿದ್ದನು" ಎಂದು ಕಂಚುಕಿಯಾದ ಜಯತ್ರಾತನು ಆಶ್ಚರ್ಯದಿಂದ ತನಗೆ ತಾನೇ ಹೇಳಿಕೊಂಡನು.

## § ೪

ಆ ಸಮಯಕ್ಕೆ ಸರಿಯಾಗಿ ಹಿಡಿಂಬೆಯ ಮಗನಾದ ಘಟೋತ್ಕಚನು, ಆನೆಯು ಅಂಕುಶಕ್ಕೆ ವಶವಾಗಿ ವರ್ತಿಸುವ ಹಾಗೆ, ಚಕ್ರಧರನ ಆಜ್ಞೆಗೆ ಒಳಗಾಗಿ ಕೌರವರ ಶಿಬಿರದ ಬಳಿಗೆ ಬಂದು ಹೆಬ್ಬಾಗಿಲ ಹತ್ತಿರ ನಿಂತು "ಹಿಡಿಂಬೆಯ ಮಗನಾದ ಘಟೋತ್ಕಚನು ಬಂದಿದ್ದೇನೆ. ಅಜ್ಜನಾದ ಧೃತರಾಷ್ಟ್ರನನ್ನು ಕಾಣಬೇಕಾಗಿದೆ. ನನಗೆ ಹಿರಿಯನಾದರೂ ತನ್ನ ದೋಷಗಳಿಂದ ಶತ್ರುವಾಗಿರುವ ಆ ದುರ್ಯೋಧನನನ್ನು ಕಾಣಬೇಕಾಗಿದೆ. ಶ್ರೀ ಕೃಷ್ಣನು ಹೇಳಿಕಳುಹಿರುವ ಮಾತುಗಳನ್ನು ಅವರಿಗೆ ತಿಳಿಸಬೇಕಾಗಿದೆ" ಎಂದು ಘೋಷಿಸಿದನು.

ದುರ್ಯೋಧನನು ಅವನ ಘೋಷಣೆಯನ್ನು ಕೇಳಿ, "ಬಾ, ನಿನ್ನ ಶತ್ರುವಿನ ಮನೆಗೆ ಬೇಗ ಬಾ. ಈ ವಿಷಯದಲ್ಲಿ ನನಗೂ ತುಂಬ ಕುತೂಹಲವುಂಟು. ಆ ಜನಾರ್ದನನ ಮಾತುಗಳನ್ನು ಹಿಂದೆ ಹೇಳು, ಕೇಳುವುದಕ್ಕೆ ನಾನು ದುರ್ಯೋಧನನು ಬಂದಿದ್ದೇನೆ" ಎಂದು ಅವನನ್ನು ಕರೆದನು.

ಘಟೋತ್ಕಚನು ಅವನನ್ನು ಗಮನಿಸದೆ, ಮೊದಲು ಧೃತ ರಾಷ್ಟ್ರನನ್ನು ಲಕ್ಷಿಸಿ, "ಪೂಜ್ಯನಾದ ಈ ಧೃತರಾಷ್ಟ್ರನ ಆಕಾರವು ಎಷ್ಟು ಲಲಿತವಾಗಿದೆ, ಎಷ್ಟು ಗಂಭೀರವಾಗಿದೆ! ಮುದುಕನಾದರೂ ಮೈಯಲ್ಲಿ ಸುಕ್ಕು ಬಂದಿಲ್ಲ. ನೂರು ಮಕ್ಕಳನ್ನು ಪಡೆದರೂ ರೂಪ ಹಾಗೇ ಕೆಡದೆ ಇದೆ. ಇಂತಹ ಸ್ಫುರದ್ರೂಪಿಯಾದವನು ಸ್ವರ್ಗಕ್ಕೆ ಬಂದರೆ ಎಲ್ಲಿ ತಮ್ಮ ದೊಡ್ಡತನ ಹೋದೀತೋ ಎಂಬ ಸಂಶಯ ದಿಂದ ಹೆದರಿ ದೇವತೆಗಳು ಇವನನ್ನು ಅಂಧನನ್ನಾಗಿ ಮಾಡಿದರೆಂದು ಕಾಣುತ್ತದೆ" ಎಂದು ಆತನ ರೂಪವನ್ನು ಮೆಚ್ಚಿಕೊಂಡನು. ಅನಂತರ, ಘಟೋತ್ಕಚನಾದ ತಾನು ವಂದಿಸುತ್ತೇನೆಂದು ಹೇಳಲು ಹೊರಟು, ಅಷ್ಟರಲ್ಲಿಯೇ ಅದು ಕ್ರಮವಲ್ಲವೆಂಬುದನ್ನು ಜ್ಞಾಪಿಸಿ ಕೊಂಡು, "ಅಜ್ಜ, ಯುಧಿಷ್ಠಿರನೇ ಮೊದಲಾದ ನನ್ನ ಹಿರಿಯರು ವಂದಿಸುತ್ತಾರೆ, ಅನಂತರ ನಾನು ಘಟೋತ್ಕಚನು ವಂದಿಸುತ್ತೇನೆ" ಎಂದು ವಂದಿಸಿದನು.

ಧೃತರಾಷ್ಟ್ರನು ಮೊಮ್ಮಗನನ್ನು ಪ್ರೀತಿಯಿಂದ ಬಳಿಗೆ ಕರೆದು, "ಮಗು, ಅಭಿಮನ್ಯುವಿನ ವಧೆಯ ವಾರ್ತೆ ಸಂತೋಷದ ಸುದ್ದಿ ಯಲ್ಲ. ಇದರಿಂದ ನಿನಗೆಷ್ಟು ಸಂಕಟವಾಗಿದೆಯೋ ನನಗೂ ಅಷ್ಟೇ ಆಗಿದೆ. ಈ ಕಾರ್ಯ ನನಗೆ ಪ್ರಿಯವಲ್ಲ ಎಂಬುದು ನಿನಗೆ ತಿಳಿಯದು. ಮಕ್ಕಳು ಮಾಡಿದ ತಪ್ಪಿನಿಂದ ನನಗೆ ಇಂಥ ದೀನಾವಸ್ಥೆ ಬಂತು" ಎಂದು ಮರುಗಿದನು.

ಆಗ ಘಟೋತ್ಕಚನು ಆ ಪಿತಾಮಹನ ಸೌಜನ್ಯವನ್ನೂ ಕಲ್ಯಾಣಗುಣಗಳನ್ನೂ ಶ್ಲಾಘಿಸಿ, ದೂತನಾದ ತಾನು ಭಗವಂತ ನಾದ ಚಕ್ರಾಯುಧನಿಂದ ತಂದ ಅಪ್ಪಣೆಯನ್ನು ತಿಳಿಸಲು ತೊಡಗಿ ದನು. ಶ್ರೀ ಕೃಷ್ಣನ ಗುರುತ್ವವನ್ನು ಅರಿತ ಧೃತರಾಷ್ಟ್ರನು ಅವನ ಅಪ್ಪಣೆಯನ್ನು ಕೇಳುವುದಕ್ಕಾಗಿ ಪೀಠವನ್ನು ಬಿಟ್ಟು ಎದ್ದು ನಿಂತನು. ಆದರೆ ಘಟೋತ್ಕಚನು "ತಾವು ಕುಳಿತುಕೊಂಡೇ ಜನಾರ್ದನನ ಸಂದೇಶವನ್ನು ಕೇಳಬೇಕು. ಇದು ಭಗವಂತನ ಕೋರಿಕೆ" ಎಂದೆ ನ್ನಲು, ಧೃತರಾಷ್ಟ್ರನು ಹಾಗೆಯೇ ಆಗಲೆಂದು ಕುಳಿತನು.

ಘಟೋತ್ಕಚನು ತಾನು ಜನಾರ್ದನನಿಂದ ತಂದ ಸಂದೇಶ ವನ್ನು ಪಿತಾಮಹನಿಗೆ ಹೇಳಿದನು: "ಬಾಲಕನಾದ- ಅಭಿಮನ್ಯುವಿನ ವಿಯೋಗದಿಂದ ಅರ್ಜುನನು ಬಹುವಾಗಿ ಪ್ರಲಾಪಿಸಿದನು. ಒಬ್ಬ ಮಗನನ್ನು ಕಳೆದುಕೊಂಡ ಅರ್ಜುನನಿಗೇ ಇಷ್ಟು ಶೋಕವುಂಟಾ ಗಿರುವಾಗ ಇರುವ ನೂರು ಜನ ಮಕ್ಕಳನ್ನೂ ಕಳೆದುಕೊಂಡಾಗ ನಿನಗೆ ಎಷ್ಟು ಶೋಕವಾದೀತೋ! ಆದ್ದರಿಂದ ಈ ಪುತ್ರಶೋಕದ ಬೆಂಕಿ ನಿನ್ನ ಪ್ರಾಣವನ್ನು ಆಹುತಿಕೊಳ್ಳದ ಹಾಗೆ ತಡೆಯುವು ದಕ್ಕಾಗಿ ನಿನ್ನ ಸೈನ್ಯಗಳನ್ನು ಸಿದ್ಧಪಡಿಸಿಕೊ—ಎಂದು ಭಗವಂತನು ಹೇಳಿ ಕಳುಹಿಸಿದ್ದಾನೆ" ಎಂದನು.

ಆ ಮಾತು ಕೇಳಿ, ಧೃತರಾಷ್ಟ್ರನು ದುಃಖದಿಂದ ಕೈ ಕೈ ಹಿಸುಕಿಕೊಳ್ಳುತ್ತ, "ಕೃಷ್ಣನಿಗೆ ಕೋಪ ಬಂದಿದೆ. ಅದಕ್ಕೇ ಹೀಗೆ ಮಾತನಾಡಿದ್ದಾನೆ. ಇನ್ನು ಆ ಅರ್ಜುನನು ಈ ಕ್ಷತ್ರಿಯರೆಲ್ಲ ರನ್ನೂ ಕೊಲ್ಲುವುದು ಖಂಡಿತ" ಎಂದು ಕೊರಗಿದನು.


ದುರ್ಯೋಧನನಿಗಾದರೋ ಆ ದೂತವಾಕ್ಯವನ್ನು ಕೇಳಿ ತಿರ ಸ್ಕಾರದಿಂದ ನಗು ಬಂತು. "ಏಕಾಕಿಯಾದ ಪಾರ್ಥನು ಈ ರಾಜ ಸಮೂಹವನ್ನು ಸಂಹಾರ ಮಾಡಬೇಕಾದರೆ ಶ್ರೀ ಕೃಷ್ಣನು ದೇವತೆ

ಗಳನ್ನು ಜೊತೆಗೆ ಕರೆದುಕೊಳ್ಳುತ್ತಾನೋ ಏನೋ!" ಎಂದು ಅಣಕಿಸಿದನು.

"ಅಬ್ಬ! ಕೃಷ್ಣನು ಹೇಳಿದ ಮಾತುಗಳನ್ನು ಕೇಳಿ, ಅರ್ಜುನನು ಮಾಡುವ ಕಾರ್ಯಗಳನ್ನು ಕೇಳಿ ಇವನು ನಗುವನಲ್ಲಾ!" ಎಂದು ಘಟೋತ್ಕಚನಿಗೆ ದುರ್ಯೋಧನನ ತಿರಸ್ಕಾರವನ್ನು ಕಂಡು ಕ್ರೋಧ ವುಂಟಾಯಿತು. "ದುರ್ಯೋಧನ, ಜನಾರ್ದನನು ನಿನಗೂ ಒಂದು ಸಂದೇಶವನ್ನು ಹೇಳಿ ಕಳುಹಿಸಿದ್ದಾನೆ" ಎಂದನು.

ಯಾವನೋ ಗೋಪಾಲಕನಿಂದ ದೂತನಾಗಿ ಬಂದವನು ರಾಜನಾದ ತನ್ನಣ್ಣನನ್ನು ಇಷ್ಟು ಲಘುವಾಗಿ ಕಾಣುವನಲ್ಲಾ ಎಂದು ದುಶ್ಶಾಸನನಿಗೂ ಕೋಪಬಂತು. "ಎಲವೋ, ನೀನಾಡುವ ಮಾತು ಕ್ಷತ್ರಿಯರಿಗೆ ಅವಮಾನಕರವಾದುದು. ಭೂಮಿಯ ಇತರ ರಾಜರೆಲ್ಲರೂ ಈ ದುರ್ಯೋಧನನ ಆಜ್ಞಾನುವರ್ತಿಗಳು. ಇಂತಹವನಿಗೆ ರಾಜನೂ ಅಲ್ಲದ ಯಾವನೋ ಒಬ್ಬನು ಏನೋ ಸಂದೇಶ ಕಳುಹುತ್ತಾನಂತೆ!" ಎಂದು ಅವನು ಕೃಷ್ಣನನ್ನು ನಿಂದಿಸಿದನು.

ತನ್ನ ಸ್ವಾಮಿಯ ನಿಂದೆಯನ್ನು ಕೇಳಿ ಸಹಿಸುವುದು ಘಟೋತ್ಕಚನಿಗೆ ಸಾಧ್ಯವಾಗಲಿಲ್ಲ. "ಜರಾಸಂಧನ ನಗರದಲ್ಲಿ ಸೆರೆಸಿಕ್ಕಿ ಮಾನಮಹಿಮೆಗಳನ್ನು ಕಳೆದುಕೊಂಡಿದ್ದ ದೊರೆಗಳನ್ನು ಬಿಡಿಸಿ ದವನು ಶ್ರೀ ಕೃಷ್ಣನಲ್ಲವೆ! ಅಂದು ರಾಜಸೂಯದಲ್ಲಿ ನೆರೆದ ರಾಜರ ಎದುರಿಗೆ ಭೀಷ್ಮನಿಂದ ಅಗ್ರಪೂಜೆಯನ್ನು ಪಡೆದವನು ಶ್ರೀ ಕೃಷ್ಣ ನಲ್ಲವೆ! ಲಕ್ಷ್ಮಿಯು ಆತನ ವಕ್ಷಸ್ಥಳದಲ್ಲಿ ವಾಸಮಾಡಿ ಆತನ ಆಜ್ಞಾಧಾರಕಳಾಗಿರುವಳು. ಇಂತಹ ಚಕ್ರಾಯುಧನು, ರಾಜರಿಗೆ ರಾಜನಾದವನು, ನಿಮಗೆ ಮಾತ್ರ ರಾಜನಲ್ಲವೆಂಬುದು ಹೇಗೆ?" ಎಂದು ಗರ್ಜಿಸಿದನು.



ಕೌರವನ ಸಭೆಯಲ್ಲಿ ದೂತ ಘಟೋತ್ಕಚ

ಅಷ್ಟರಲ್ಲಿ ದುರ್ಯೋಧನನು ತನ್ನ ತಮ್ಮನಿಗೆ ಸಮಾಧಾನ ಹೇಳಿ, ಅವರ ವಿವಾದವನ್ನು ತಡೆದು, "ಅವನು ದೊರೆಯೋ, ದೊರೆಯಲ್ಲವೋ, ಬಲವುಳ್ಳವನೋ, ಬಲವಿಲ್ಲದವನೋ—ಸುಮ್ಮನೆ ಮಾತಾಡಿ ಏನು ಪ್ರಯೋಜನ? ಒಳ್ಳೆಯದು, ನಿಮ್ಮ ಪ್ರಭು ಏನು ಹೇಳಿಕಳುಹಿದ್ದಾನೆ?" ಎಂದು ಕೇಳಿದನು.

ದುರ್ಯೋಧನನು ಕೃಷ್ಣನನ್ನು ಪ್ರಭುವೆಂದು ಕರೆದುದು ಕೇವಲ ಅಪಹಾಸ್ಯಕ್ಕೆಂಬುದು ಸೂಕ್ಷ್ಮಗ್ರಾಹಿಯಾದ ಘಟೋತ್ಕಚನಿಗೆ ತಿಳಿಯದೆ ಹೋಗಲಿಲ್ಲ. "ಹೌದು, ಮೂರು ಲೋಕಕ್ಕೂ ಸ್ವಾಮಿಯಾದ ಆ ನಾರಾಯಣನು ನಿಸ್ಸಂದೇಹವಾಗಿಯೂ ಪ್ರಭುವೇ. ನಮಗಂತೂ ನಿಜವಾಗಿಯೂ ಅವನೊಬ್ಬನೇ ಪ್ರಭು. ಅವನು ಹೇಳಿಕಳುಹಿಸಿದ್ದು ಇಷ್ಟು: ಕ್ಷತ್ರಿಯರ ನಾಶವಾಗುವುದು ನಿಶ್ಚಯ. ಈ ನಾಶದಿಂದ ಭೂಭಾರ ಇಳಿಯಲಿ. ಪುತ್ರಶೋಕದಿಂದ ಉಗ್ರಾಸ್ತ್ರಗಳನ್ನು ಪ್ರಯೋಗಿಸುವ ಫಲ್ಗುಣನನ್ನು ಯುದ್ಧದಲ್ಲಿ ಯಾವನೂ ಮೀರಿಸಲಾರನು" ಎಂದನು.

ಅದುವರೆಗೂ ಮಾತನಾಡದೆ ಮೌನವಾಗಿದ್ದ ಶಕುನಿ ಆಗ ಮಿತಿಯರಿಯದ ತಾತ್ಸಾರದಿಂದ "ಆಹಾ! ಬರಿಯ ಮಾತಿನಿಂದಲೇ ಭೂಮಿಯನ್ನು ಜಯಿಸಬಹುದಾದರೆ, ಆಡಿದ ಒಂದೊಂದು ಮಾತಿನಿಂದಲೂ ಕ್ಷತ್ರಿಯರು ಸತ್ತು ಬೀಳುವುದಾದರೆ ಕೃಷ್ಣಾರ್ಜುನರು ಸರ್ವ ಕ್ಷತ್ರಿಯರನ್ನೂ ವಧಿಸುವರು, ಹೌದು!" ಎಂದನು.

ಶಕುನಿ ಕೂಡ ಮಾತೆತ್ತಿದುದನ್ನು ಕೇಳಿ ಘಟೋತ್ಕಚನು "ಎಲಾ ಶಕುನಿ! ನಿನಗೇಕೆ ಈ ನಡುವೆ ಈ ಮಾತು? ಇದು ದಾಳ ಎಸೆಯುವ ದ್ಯೂತವಲ್ಲ, ಬಾಣಗಳನ್ನು ನಡಸತಕ್ಕ ಯುದ್ಧ. ಪರಸ್ತ್ರೀಯರನ್ನು ಅಪಹಾರಮಾಡುವ ರಾಜ್ಯತಂತ್ರವಲ್ಲ ಇದು. ಇಲ್ಲಿ

ಪ್ರಾಣಗಳೆ ಪಣ. ಬಾಣಗಳೇ ಅದನ್ನು ಗೆಲ್ಲಿಸುವ, ಸೋಲಿಸುವ ಕಾರಣ" ಎಂದು ಶಕುನಿಯನ್ನು ಹಳಿದನು.

"ಅಣ್ಣನಾದ ದುರ್ಯೋಧನನನ್ನು ಮಾತ್ರವಲ್ಲದೆ ಮಾವನಾದ ಶಕುನಿಯನ್ನೂ ಈ ದೂತನು ಇಷ್ಟು ಮಿತಿಮೀರಿ ಪರುಷವಾಗಿ ಮಾತನಾಡಿಸುವನಲ್ಲಾ!" ಎಂದು ದುಶ್ಶಾಸನನು ಮತ್ತೆ ಕೆರಳಿ, "ಎಲವೋ! ಇಷ್ಟು ಅಲಕ್ಷ್ಯದಿಂದ ಮಡುಕಿ ಬಾಯಿಗೆ ಬಂದಹಾಗೆ ಮಾತನಾಡಬೇಡ. ರಾಕ್ಷಸಿಯ ಮಗನಾದ್ದರಿಂದ ನಾವೇ ರೌದ್ರರೆಂಬ ದರ್ಪ ಬೇಡ. ರಾಕ್ಷಸರಿಗೆ ಸಮಾನವಾದ ಉಗ್ರಸ್ವಭಾವ ನಮಗೂ ಉಂಟು" ಎಂದು ಎದ್ದನು.

ಅದಕ್ಕೆ ಘಟೋತ್ಕಚನು "ಛಿ! ಛಿ! ನಿಮಗೆ ಇರುವಷ್ಟು ಕ್ರೌರ್ಯ ರಾಕ್ಷಸರಿಗೆಲ್ಲಿಂದ ಬರಬೇಕು! ಅರಗಿನ ಮನೆಯಲ್ಲಿ ಮೈ ಮರೆತು ಮಲಗಿರುವ ಸೋದರರನ್ನು ರಾಕ್ಷಸರು ಸುಡುವುದಿಲ್ಲ. ರಾಕ್ಷಸರು ತಮ್ಮ ಸೋದರರ ಪತ್ನಿಯರ ಮುಡಿಯನ್ನು ಹಿಡಿಯುವುದಿಲ್ಲ. ರಾಕ್ಷಸರು ಯುದ್ಧದಲ್ಲಿ ಮಕ್ಕಳ ಕೊಲೆ ಯೆಂಬುದನ್ನು ಎಂದಿಗೂ ಸ್ಮರಿಸುವುದಿಲ್ಲ. ರಾಕ್ಷಸರ ರೂಪವು ವಿಕಾರವಾದುದಾದರೂ, ಅವರ ನಡತೆ ಉಗ್ರವಾದುದಾದರೂ, ಅವರು ದಯೆಯನ್ನು ಮರೆಯುವವರಲ್ಲ" ಎಂದು ಮೃದುವಾದ ಅಣಕದ ಮಾತುಗಳಿಂದಲೇ ಕೌರವರ ಅನ್ಯಾಯಗಳನ್ನು ಎತ್ತಿ ಆಡಿದನು.

ಮರ್ಮಭೇದಕಗಳಾದ ಆ ಮಾತುಗಳನ್ನು ಕೇಳಿ ದುರ್ಯೋಧನನಿಗೂ ಸೈರಣೆ ತಪ್ಪಿತು. ಆದರೂ ಅವನು ತನ್ನ ಕ್ರೋಧವನ್ನು ಬಿಗಿಹಿಡಿದು, ಘಟೋತ್ಕಚನನ್ನು ಕುರಿತು "ನೀನು ಇಲ್ಲಿ ಕಾದಾಡಲು ಬಂದಿಲ್ಲ, ದೂತಕಾರ್ಯಕ್ಕಾಗಿ ಬಂದಿದ್ದೀಯೆ. ಸಂದೇಶವನ್ನು ಹೇಳಿದ್ದಾಯಿತು. ಅದಕ್ಕೆ ನಾವು ಕೊಡುವ ಉತ್ತರವನ್ನು ಕೊಂಡು

ಹೋಗು" ಎಂದು ಹೇಳಿ, "ನಾವು ದೂತರನ್ನು ಕೊಲ್ಲುವವರಲ್ಲ" ಎಂದನು.

ದುರ್ಯೋಧನನು ಆಡಿದ ಕಡೆಯ ಮಾತಿನಲ್ಲಿ ಅಡಗಿದ್ದ ಅರ್ಥವು ಘಟೋತ್ಕಚನ ರೋಷವನ್ನು ಉಕ್ಕಿಸಿತು. "ನಾನು ದೂತನಾಗಿ ಬಂದಿದ್ದೇನೆ; ಇಲ್ಲದಿದ್ದರೆ ನನ್ನನ್ನು ಕೊಂದುಬಿಡುತ್ತಿದ್ದೆ ಎಂದು ಹೆದರಿಸುತ್ತಿರೋ? ಬಿಲ್ಲ ಹೆದೆಯನ್ನು ಕತ್ತರಿಸಿ, ಬಲ ಉಡುಗಿದ ಅಭಿಮನ್ಯುವನ್ನು ಕೊಂದ ಹಾಗಲ್ಲ. ಒಳ್ಳೆಯದು, ನಾನು ದೂತನೇ ಅಲ್ಲ. ಎಲ್ಲರೂ ಒಟ್ಟಾಗಿ ಸೇರಿ ಬನ್ನಿ, ಅದೇನಾಗುವುದೋ ನೋಡೋಣ. ನನಗೆ ಚಿಕ್ಕಂದಿನಿಂದಲೂ ನಿಮ್ಮೊಡನೆ ಕಾದಬೇಕೆಂದು ಮಹತ್ತಾದ ಆಸೆ ಉಂಟು. ಇದೋ, ಹಲ್ಲುಮುಡಿ ಕಚ್ಚಿ, ಮುಷ್ಟಿ ಬಿಗಿದು ನಿಂತಿದ್ದೇನೆ. ಇಲ್ಲಿ ಯಾರಾದರೂ ಗಂಡಸರಿದ್ದರೆ, ಯಮ ಲೋಕಕ್ಕೆ ಹೋಗುವ ಆಸೆಯುಳ್ಳವರಿದ್ದರೆ, ಎದ್ದೇಳಿ" ಎಂದು ಸಿಂಹದ ಮರಿಯಂತೆ ಆ ಘಟೋತ್ಕಚನು ಕೆದರಿ ನಿಂತನು.

ಆಗ ಧೃತರಾಷ್ಟ್ರನೇ ಘಟೋತ್ಕಚನ ರೋಷವನ್ನು ಇಳಿಸಲು ಸಮಾಧಾನೋಕ್ತಿಗಳನ್ನಾಡಿದನು. ಘಟೋತ್ಕಚನಿಗಾದರೋ ತನ್ನ ರೋಷವನ್ನು ತಡೆಯಲು ಆಗದು. ಆದರೆ ಅಜ್ಜನ ಮಾತುಗಳನ್ನು ಮೀರಲೂ ಆಗದು. ಕಡೆಗೆ ವಿನಯವನ್ನು ಬಿಡದೆ, ತನ್ನ ರೋಷವನ್ನು ತಡೆದು, "ಅಜ್ಜನ ಆಜ್ಞೆಯಂತೆ ನಾನು ದೂತನೇ ಆಗಿದ್ದೇನೆ. ಪೂಜ್ಯನಾದ ನಾರಾಯಣನಿಗೆ ಏನೆಂದು ವಿಜ್ಞಾಪಿಸಬೇಕು?" ಎಂದನು.

ಅದಕ್ಕೆ ದುರ್ಯೋಧನನು "ಆಃ, ವಿಜ್ಞಾಪಿಸುವುದಲ್ಲ; ನಾನು ಹೀಗೆ ಹೇಳಿದೆನೆಂದು ಅವನಿಗೆ ಹೇಳು: 'ಇಷ್ಟೇಕೆ ವ್ಯರ್ಥವಾದ ಮಾತು? ನಿನ್ನ ಪೌರುಷದ ಮಾತುಗಳಿಗೆ ನಾವೇನೂ ಭಯಪಡುವವರಲ್ಲ. ಯುದ್ಧಮಾಡಿ ನಿನಗೆ ನಾವು ಉತ್ತರ ಕೊಡುತ್ತೇವೆ. ಅನೇಕ ರಾಜರ ನಡುವೆ ಬಿಳಿಕೊಡೆಗಳ ಸಾಲಿನಲ್ಲಿ ನಾನು ಬರುತ್ತೇನೆ.

ನೀನು ಪಾಂಡವರ ಪಕ್ಕದಲ್ಲಿ ನಿಲ್ಲು. ನಮ್ಮ ಬಾಣಗಳ ಜೊತೆಯಲ್ಲಿ ನಿನಗೆ ಪ್ರತ್ಯುತ್ತರವನ್ನು ಕೊಟ್ಟುಕಳುಹುತ್ತೇವೆ' ಎಂದು ಅವನಿಗೆ ತಿಳಿಸು" ಎಂದನು.

ಅನಂತರ ಘಟೋತ್ಕಚನು ಅಜ್ಜನ ಅನುಜ್ಞೆಯನ್ನು ಪಡೆದು, ಕೌರವನ ಶಿಬಿರವನ್ನು ಬಿಟ್ಟು ಹೋಗುವ ಮುಂಚೆ ಅಲ್ಲಿ ನೆರೆದಿದ್ದ ರಾಜರುಗಳನ್ನು ಉದ್ದೇಶಿಸಿ, "ಎಲೈ ರಾಜರೆ, ಧರ್ಮವನ್ನು ಆಚರಿಸಿ. ಸ್ವಜನರಲ್ಲಿ ಪ್ರೀತಿಯಿಂದಿರಿ. ನಿಮ್ಮ ನಿಮ್ಮ ಮನಸ್ಸಿನ ಇಷ್ಟಾರ್ಥಗಳನ್ನು ಈಗಲೇ ಮುಗಿಸಿಕೊಳ್ಳಿ. ನಾಳೆ ಸೂರ್ಯೋದಯದೊಡನೆ ನಿಮ್ಮ ಪಾಲಿನ ಯಮನು ಪಾಂಡವರ ವೇಷದಿಂದ ನಿಮ್ಮ ಬಳಿಗೆ ಬರುವನು" ಎಂದು ಜನಾರ್ದನನ ಕಟ್ಟಕಡೆಯ ಸಂದೇಶವನ್ನು ಸಾರಿ, ಪಾಂಡವರ ಪಾಳಯಕ್ಕೆ ಅಭಿಮುಖವಾಗಿ ಹೋದನು.

# ಕರ್ಣಭಾರದ ಕಥೆ

## § ೧

ದ್ರೋಣವಧೆಯಾದ ಅನಂತರ ಕರ್ಣನಿಗೆ ಸೇನಾಧಿಪತ್ಯಾಭಿಷೇಕವಾಯಿತು. ಅನೇಕ ನೃಪಸಿಂಹರು ಆನೆ, ಕುದುರೆ, ತೇರುಗಳನ್ನೇರಿ ಸಂತೋಷದಿಂದ ಸಿಂಹನಾದಗೈಯುತ್ತ ಪಾರ್ಥನಿಗೆ ಎದುರಾಗಿ ನಡೆದರು. ಲೋಕವೀರನೆನಿಸಿದ ಆ ಸರ್ಪಕೇತನನೂ ಶತ್ರುಗಳ ಆರ್ಭಟದಿಂದ ಸಹಿಸಲು ಅಶಕ್ಯವಾದ ಸಂಗ್ರಾಮಭೂಮಿಗೆ ತಾನೂ ನಡೆದನು. ತುಮುಲಯುದ್ಧವು ಪ್ರಾಪ್ತವಾಗುವ ಸಮಯ ಸನ್ನಿಹಿತವಾಯಿತು.

ಆಗ ಕುರುರಾಜನು "ಯುದ್ಧಕಾಲವು ಸಮೀಪವಾಯಿತೆಂದು ಮಹಾರಾಜನಾದ ಅಂಗೇಶ್ವರನಿಗೆ ವಿಜ್ಞಾಪಿಸಲಿ" ಎಂದು ಭಟನೊಬ್ಬನನ್ನು ಕರ್ಣನ ಕಡೆಗೆ ಕಳುಹಿಸಿದನು.

ಆ ವೇಳೆಗೆ ಯುದ್ಧೋತ್ಸವದಲ್ಲಿ ಪ್ರಮುಖನಾದ ಆ ಕರ್ಣನು ಯುದ್ಧದ ಉಡಿಗೆಗಳನ್ನು ಉಟ್ಟು, ಶಲ್ಯರಾಜನನ್ನು ಸಂಗಡ ಕರೆದುಕೊಂಡು ತನ್ನ ಮನೆಯಿಂದ ಹೊರಟು ಯುದ್ಧಭೂಮಿಗಾಗಿ ಬರುತ್ತಿದ್ದನು.

ಅತ್ಯುಗ್ರವಾದ ದೇಹಕಾಂತಿಯಿಂದ ಕೂಡಿದವನಾಗಿ, ಸಮರದಲ್ಲಿ ಅಗ್ರಗಣ್ಯನಾಗಿ, ಶೂರರಲ್ಲಿ ಮೊದಲಿಗನಾಗಿ, ಧೀಮಂತನಾದ ಆ ಕರ್ಣನ ಹೃದಯದಲ್ಲಿ ಏನೋ ಒಂದು ಹೊಸಬಗೆಯ ಪರಿತಾಪವಿದ್ದಂತೆ ಗೋಚರವಾಗುತ್ತಿತ್ತು. ಬೇಸಗೆಯ ಕಾಲದಲ್ಲಿ ಮೋಡಗಳ ಮರೆಗೆ ಸಂದು ತನ್ನ ನಿಜಕಾಂತಿಯನ್ನು ಕಳೆದುಕೊಂಡ ಸೂರ್ಯನಂತೆ ಕರ್ಣನ ಮುಖವು ಶೋಕದಿಂದ ಮುಸುಕಿಹೋಗಿತ್ತು.

ಆಗ ಅರಸನಿಂದ ಆಜ್ಞಪ್ತನಾದ ಭಟನು ಕರ್ಣನ ಬಳಿಗೆ ಬಂದು ಕೈಮುಗಿದು, ನಡುಗಿ, ದುರ್ಯೋಧನಾಜ್ಞೆಯನ್ನು ಆತನಿಗೆ ಬಿನ್ನವಿಸಿ ಹೋದನು.

ಕರ್ಣನಾದರೂ ಉತ್ಸಾಹದಿಂದಲೇ ಯುದ್ಧೋನ್ಮುಖನಾದವನು. "ನನ್ನ ಬಾಣಗಳಿಗೆ ಗುರಿಯಾಗಿ ಸಿಕ್ಕಿದ ದೊರೆಗಳಲ್ಲಿ ಒಬ್ಬನಾದರೂ ಜೀವದಿಂದ ಉಳಿದು ಹೋದವನಿಲ್ಲ. ಈ ದಿನ ಆ ಧನಂಜಯನು ಕಾಳಗದಲ್ಲಿ ಕಾಣಿಸಿಕೊಂಡರೆ, ಅವನನ್ನು ಕೊಂದು, ಕುರುಗಳಿಗೆ ನಾನು ಪ್ರಿಯವನ್ನುಂಟುಮಾಡುತ್ತೇನೆ" ಎಂದು ಶಲ್ಯರಾಜನನ್ನು ಸಾರಥಿಯನ್ನಾಗಿ ಪಡೆದು, ಅರ್ಜುನನಿರುವಲ್ಲಿಗೆ ರಥದಲ್ಲಿ ಬಂದನು.

ಹಿಂದೆ, ಚತುರಂಗ ಸೇನೆಯೆಲ್ಲವೂ ಪರಸ್ಪರವಾದ ಶಸ್ತ್ರಗಳ ಏಟಿನಿಂದ ಕತ್ತರಿಸಿ ಬಿದ್ದು ಭಯಂಕರವಾದ ಯುದ್ಧಭೂಮಿಗಳ ನಡುವೆ ಕೋಪಗೊಂಡ ಯಮನ ಹಾಗೆ ಪರಾಕ್ರಮವನ್ನು ಬೀರುತ್ತ ನಿಂತ ಕರ್ಣನಿಗೆ ಈ ದಿನವಾದರೋ ಬಹುಕಾಲದಿಂದ ಬಯಸಿದ ಯುದ್ಧ ಬಂದ ಸಮಯದಲ್ಲಿ ಮನಸ್ಸು ಯಾಕೋ ಅಳುಕುತ್ತಿದೆ.

"ಕುಂತಿಯು ಪಡೆದ ಮಕ್ಕಳಲ್ಲಿ ನಾನು ಮೊದಲನೆಯವನು. ನನಗೆ ರಾಧೇಯನೆಂದು ಹೆಸರಾಯಿತು. ಯುಧಿಷ್ಠಿರನೇ ಮೊದಲಾದ ಆ ಪಾಂಡವರು ನನಗೆ ತಮ್ಮಂದಿರು. ಬಹುಕಾಲದಿಂದ ಬಯಸಿದ್ದ ಆ ಯುದ್ಧದ ಹಬ್ಬ ಈ ದಿನ ಲಭಿಸಿದೆ. ದುರ್ಯೋಧನನ ಸ್ನೇಹವನ್ನು ಸಾರ್ಥಕಮಾಡುವ ಕಾಲ ಈಗ ಒದಗಿದೆ. ಆದರೂ ತಾಯಿಯಾದ ಕುಂತಿಯ ಮಾತಿನ ತಡೆಗೆ ಸಿಕ್ಕಿಬಿದ್ದುದರಿಂದ ನಾನು ಕಲಿತ ಅಸ್ತ್ರಗಳಷ್ಟೂ ನಿರರ್ಥವಾಯಿತು" ಎಂಬ ದುಗುಡದಿಂದ ಕರ್ಣನು ಬರುತ್ತಿದ್ದನು.

ಆಗಲೇ ಅವನಿಗೆ ತಾನು ಪರಶುರಾಮನಲ್ಲಿ ಕಲಿತ ವಿದ್ಯೆ ಆ ರಾಮನ ಶಾಪದಿಂದಲೇ ವ್ಯರ್ಥವಾದುದೂ ನೆನಪಾಗಿ, ಆ ದುಃಖ ವನ್ನು ಮೂಕವಾಗಿ ಅನುಭವಿಸಲಾರದೆ, ಶಲ್ಯರಾಜನಲ್ಲಿ ಅದನ್ನು ತೋಡಿಕೊಂಡನು. ಆ ವೃತ್ತಾಂತವನ್ನು ಕೇಳಬೇಕೆಂಬ ಕುತೂಹಲವಿದ್ದ ಶಲ್ಯನು ಅದನ್ನು ಆಸಕ್ತಿಯಿಂದ ಕೇಳಿದನು.

§ ೨

ಕರ್ಣನು ಅಸ್ತ್ರವಿದ್ಯೆಯನ್ನು ಕಲಿಯುವುದಕ್ಕಾಗಿ ಹಿಂದೆಯೇ ಆ ಜಮದಗ್ನಿಪುತ್ರನ ಸಮೀಪಕ್ಕೆ ಹೋದನು. ಹೋಗಿ, ಮಿಂಚುವ ಬಳ್ಳಿಯ ಹಾಗೆ ಹೊಂಬಣ್ಣದಿಂದ ಹೊಳೆಯುವ ಜಟಾಭಾರವನ್ನು ತಲೆಯಲ್ಲಿ ಹೊತ್ತು, ಕಾಂತಿಯನ್ನು ಹೊರಗೆ ಚೆಲ್ಲುವ ಗಂಡುಗೊಡಲಿಯನ್ನು ಹೆಗಲಲ್ಲಿ ಹೊತ್ತು, ಕ್ಷತ್ರಿಯರಿಗೆ ಯಮಪ್ರಾಯನಾದ ಆ ಭೃಗುಕುಲಧ್ವಜನು ಏಕಾಂತದಲ್ಲಿರುವ ಸಮಯದಲ್ಲಿ, ಕರ್ಣನು ಆತನ ಪಾದಗಳಿಗೆ ವಂದಿಸಿ, ಪಕ್ಕದಲ್ಲಿ ನಿಂತನು. ಆಗ ಆ ಜಮದಗ್ನಿ ಪುತ್ರನು ಕರ್ಣನನ್ನು ಆಶೀರ್ವದಿಸಿ, "ನೀನು ಯಾರು? ಇಲ್ಲಿಗೇಕೆ ಬಂದೆ?" ಎಂದು ಕೇಳಿದನು. ಅದಕ್ಕೆ ಕರ್ಣನು "ಪೂಜ್ಯರೇ, ನಾನು ಎಲ್ಲಾ ಅಸ್ತ್ರಗಳನ್ನೂ ಅಭ್ಯಾಸಮಾಡಿ ಕಲಿಯಬೇಕೆಂದು ಬಯಸುತ್ತೇನೆ" ಎಂದನು. ಅದನ್ನು ಕೇಳಿ ಆ ಭಾರ್ಗವನು ಕ್ಷತ್ರಿಯವಂಶದಲ್ಲಿ ಹುಟ್ಟಿದವರೊಡನೆ ತನಗೆ ವೈರವಿರುವ ಕಾರಣದಿಂದ "ನಾನು ಬ್ರಾಹ್ಮಣರಿಗೆ ಉಪದೇಶಮಾಡುತ್ತೇನೆಯೇ ಹೊರತು ಕ್ಷತ್ರಿಯರಿಗೆ ಮಾಡುವುದಿಲ್ಲ" ಎಂದನು. ಆ ಕಾರಣದಿಂದಲೇ ಕರ್ಣನು "ನಾನು ಕ್ಷತ್ರಿಯನಲ್ಲ" ಎಂದು ಹೇಳಿ, ಭಾರ್ಗವನಲ್ಲಿ ಅಸ್ತ್ರೋಪದೇಶವನ್ನು ಗ್ರಹಿಸಲು ತೊಡಗಿದನು.

ಹೀಗೇ ಕೆಲವುಕಾಲ ಕಳೆಯಿತು. ಆಗ ಒಂದಾನೊಂದು ದಿವಸ ಫಲ, ಮೂಲ, ಸಮಿತ್ತು, ಕುಶ, ಕುಸುಮಗಳನ್ನು ತರುವುದಕ್ಕಾಗಿ

ಕರ್ಣನು ತನ್ನ ಗುರುವಿನ ಜೊತೆಯಲ್ಲೇ ಕಾಡಿಗೆ ಹೋದನು. ಕಾಡಿನಲ್ಲಿ ಅಲೆದು ಆದ ಬಳಲಿಕೆಯಿಂದ ಆ ಗುರು ಕರ್ಣನ ತೊಡೆಯ ಮೇಲೆ ತಲೆಯಿಟ್ಟು ನಿದ್ರೆಮಾಡಿದನು. ಆಗ ದೈವಯೋಗದಿಂದ ವಜ್ರಮುಖವೆಂಬ ಒಂದು ಕ್ರಿಮಿ ಬಂದು, ಕರ್ಣನ ಎರಡು ತೊಡೆಗಳನ್ನೂ ಕೊರೆಯಿತು. ಅಲುಗಿದರೆ ಗುರುವಿಗೆ ನಿದ್ರಾಭಂಗವಾಗುವುದೆಂದು ಭಯಪಟ್ಟು, ಕರ್ಣನು ಆ ನೋವನ್ನು ಧೈರ್ಯದಿಂದ ಸಹಿಸಿದನು. ಗಾಯದಿಂದ ಹೊರಕ್ಕೆ ಹರಿದ ರಕ್ತದಲ್ಲಿ ಗುರುವಿನ ಮೈ ನೆನೆದು, ಆತನಿಗೆ ತಟ್ಟನೆ ಎಚ್ಚರವಾಯಿತು. ಆಗ ಆತನು ಕರ್ಣನ ಜನ್ಮದ ನೆಲೆಯನ್ನು ತಿಳಿದು, ರೋಷದಿಂದ ಉರಿಯುತ್ತ, "ಈ ಅಸ್ತ್ರಗಳು ನಿನಗೆ ಸಕಾಲದಲ್ಲಿ ವಿಫಲವಾಗಲಿ" ಎಂದು ಶಾಪ ಕೊಟ್ಟನು.

§ ೩

ಈ ಪೂರ್ವದ ಕಥೆಯನ್ನು ಕರ್ಣನು ಹೇಳಿಕೊಂಡಾಗ ಶಲ್ಯರಾಜನಿಗೂ ವ್ಯಥೆಯಾಯಿತು. ಆ ರಾಮನ ಶಾಪ ನಿಜವೇ ಪರೀಕ್ಷಿಸೋಣವೆಂದು ಕರ್ಣನು ತನ್ನ ಅಸ್ತ್ರಗಳನ್ನು ಗಮನಿಸಿದರೆ, ಅವುಗಳೆಲ್ಲ ನಿರ್ವೀರ್ಯಗಳಾಗಿ ಕಂಡುಬಂದವು. ಅದೂ ಅಲ್ಲದೆ ಸೈನ್ಯದ ಕುದುರೆಗಳು ನಿಶ್ಶಕ್ತಿಯಿಂದ ಕಣ್ಮುಚ್ಚಿ ಪರವಶವಾಗಿ, ಹೆಜ್ಜೆಹೆಜ್ಜೆಗೂ ಹೆಜ್ಜೆತಪ್ಪಿ ಜಾರುತ್ತಿವೆ. ಆನೆಗಳ ಕಪೋಲಗಳಲ್ಲಿ ಸುರಿಯುವ ಮದಜಲದ ಗಂಧ ಕಟುವಾಗಿದೆ. ಶಂಖ ದುಂದುಭಿಗಳು ಶಬ್ದ ಮಾಡದೆ ಸುಮ್ಮನಿವೆ. "ಈ ಸೂಚನೆಗಳನ್ನು ನೋಡಿದರೆ ಯುದ್ಧದಲ್ಲಿ ನಮಗೇ ಸೋಲಾಗುವ ಹಾಗಿದೆ" ಎಂದು ಕರ್ಣನು ವ್ಯಾಕುಲಗೊಂಡನು.

ಕರ್ಣನ ಕಷ್ಟವನ್ನು ಕಂಡು ಶಲ್ಯನು ವಿಷಾದಗೊಂಡನು. ಆಗ ಕರ್ಣನೇ ಅವನಿಗೆ ಧೈರ್ಯ ಹೇಳಬೇಕಾಯಿತು.

"ವಿಷಾದ ಬೇಡ, ಶಲ್ಯರಾಜ. ಸತ್ತರೆ ಸ್ವರ್ಗ ಸಿಕ್ಕುತ್ತದೆ. ಗೆದ್ದರೆ ಕೀರ್ತಿ ಕೈಗೂಡುತ್ತದೆ. ಲೋಕದಲ್ಲಿ ಈ ಎರಡು ಫಲಗಳೂ

ತಪ್ಪದೆ ದೊರಕುವುದರಿಂದ ಯುದ್ಧವು ವ್ಯರ್ಥವಲ್ಲ. ಇದೂ ಅಲ್ಲದೆ, ಕಾಂಭೋಜ ಕುಲದಲ್ಲಿ ಹುಟ್ಟಿ, ಗರುಡನಂತೆ ವೇಗಶಾಲಿಗಳಾದ ಈ ಕುದುರೆಗಳು ಯುದ್ಧದಲ್ಲಿ ಎಂದಿಗೂ ಹಿಮ್ಮೆಟ್ಟತಕ್ಕವಲ್ಲ. ರಕ್ಷಿಸಿದವನನ್ನು ಇವು ತಾವೂ ಪ್ರತಿಯಾಗಿ ರಕ್ಷಿಸುತ್ತವೆ" ಎಂದು ಕರ್ಣನು ಶಲ್ಯನ ವಿಷಾದವನ್ನು ಕಳೆದನು.

ಅನಂತರ "ಗೋಬ್ರಾಹ್ಮಣರಿಗೆ ಅಕ್ಷಯವಾಗಲಿ. ಪತಿವ್ರತೆಯರಿಗೆ ಅಕ್ಷಯವಾಗಲಿ. ಯುದ್ಧದಲ್ಲಿ ಹಿಮ್ಮೆಟ್ಟದ ಯೋಧರಿಗೆ ಅಕ್ಷಯವಾಗಲಿ. ಸಮಯವೊದಗಿ ಬಂದಿರುವ ನನಗೆ ಅಕ್ಷಯವಾಗಲಿ" ಎಂದು ಮನಸ್ಸಿಗೆ ಪ್ರಸನ್ನತೆಯನ್ನು ತಂದುಕೊಂಡು, "ಅನನ್ಯಸಾಮಾನ್ಯವೆನ್ನಿಸಿದ ಈ ಪಾಂಡವರ ಯುದ್ಧಮುಖದಲ್ಲಿ ನುಗ್ಗುತ್ತೇನೆ. ಗುಣಶಾಲಿಯಾದ ಆ ಧರ್ಮರಾಯನನ್ನು ಬಂಧಿಸುತ್ತೇನೆ. ನನ್ನ ಮಹಾಸ್ತ್ರಗಳ ವೇಗದಿಂದ ಅರ್ಜುನನನ್ನು ಉರುಳಿಸುತ್ತೇನೆ. ಅನಂತರ ಸಿಂಹಗಳನ್ನು ಕೊಂದ ಕಾಡನ್ನು ಪ್ರವೇಶಿಸುವಂತೆ ಎಲ್ಲರೂ ಪ್ರವೇಶಿಸಲಿ" ಎಂದು ಕರ್ತವ್ಯವನ್ನು ನಿಶ್ಚಯಿಸಿ, ಅರ್ಜುನನು ಇರುವ ಕಡೆಗೆ ತನ್ನ ರಥವನ್ನು ನಡಸಬೇಕೆಂದು ಕರ್ಣನು ಶಲ್ಯನನ್ನು ಕೋರಿದನು.

§ ೪

ಆ ವೇಳೆಗೆ ದೇವೇಂದ್ರನು ಬ್ರಾಹ್ಮಣವೇಷದಿಂದ ಕರ್ಣನಲ್ಲಿಗೆ ಭಿಕ್ಷೆಗಾಗಿ ಬಂದನು. ಹಿಂದೆ ದೇವತೆಗಳೆಲ್ಲರೂ ಅರ್ಜುನನಿಗೇ ಜಯವಾಗಬೇಕೆಂದು ಬಯಸಿ, ಅದಕ್ಕಾಗಿ ಕರ್ಣನ ಕವಚಕುಂಡಲಗಳನ್ನು ಅಪಹರಿಸಬೇಕೆಂದು ದೇವೇಂದ್ರಸಭೆಯಲ್ಲಿ ಸಮರ್ಥಿಸಿದ್ದರು. ಅದನ್ನು ನೆರವೇರಿಸುವುದಕ್ಕಾಗಿ ಇಂದ್ರನು ತಾನೇ ಬ್ರಾಹ್ಮಣನ ವೇಷದಿಂದ ಕರ್ಣನಲ್ಲಿಗೆ ಭಿಕ್ಷೆಬೇಡುತ್ತ ಬಂದನು.

ಬೇಡುತ್ತ ಬಂದನಾದರೂ ಅವನ ವಾಣಿ ವೀರ್ಯವತ್ತಾಗಿತ್ತು. ಆ ಧೀರಮಧುರವಾದ ಸ್ವರವನ್ನು ಕೇಳಿ, ರಥದ ಕುದುರೆಗಳು ಕಿವಿಗಳನ್ನೆತ್ತಿಕೊಂಡು, ರೆಪ್ಪೆಗಳನ್ನೂ ಹೊಯ್ಯದೆ, ಕೊರಳು ಕೊಂಕಿಸಿ, ಪರವಶವಾಗಿ, ಚಿತ್ರದಲ್ಲಿ ಬರೆದಂತೆ ನಿಂತವು.

ಕರ್ಣನು ಅದನ್ನು ಕಂಡು, "ಈತನ ಮಹಿಮೆ ದೊಡ್ಡದು. ಈತನು ಸಾಮಾನ್ಯ ಬ್ರಾಹ್ಮಣನಲ್ಲ, ಶ್ರೀಮಂತನೇ ಇರಬೇಕು" ಎಂದುಕೊಂಡು, ಆತನನ್ನು ಕರೆಯಲು ಅನ್ಯರನ್ನು ಕಳುಹದೆ ತಾನೇ ಹೋಗಿ ಸತ್ಕರಿಸಿ ಕರೆತಂದನು.

ಆಗ ಆ ಬ್ರಾಹ್ಮಣವೇಷದ ಶಕ್ರನು ತನ್ನೊಡನೆ ಬಂದ ಮೇಘಗಳನ್ನು ಹಿಂದಕ್ಕೆ ಹೋಗಹೇಳಿ, ಕರ್ಣನ ಸಮೀಪಕ್ಕೆ ಬಂದು, "ಮಹತ್ತರವಾದ ಭಿಕ್ಷೆಯನ್ನು ಬೇಡುತ್ತೇನೆ" ಎಂದನು.

ಕರ್ಣನಿಗೆ ಬಹಳ ಸಂತೋಷವಾಯಿತು. ತಾನು ಧನ್ಯನಾದೆನೆಂದು ಅವನು ತಿಳಿದನು. "ಪೂಜ್ಯರೆ, ಅನೇಕ ರಾಜೇಂದ್ರರು ತಮ್ಮ ಕಿರೀಟಗಳ ಮಣಿಗಳ ಬೆಳಕಿನಿಂದ ನನ್ನ ಪಾದಗಳನ್ನು ಬೆಳಗುತ್ತಾರೆ. ನನ್ನ ಶಿರಸ್ಸು ಅನೇಕ ವಿಪ್ರೇಂದ್ರರ ಪಾದಧೂಳಿಯಿಂದ ಪಾವನವಾದದ್ದು. ಇಂತಹ ಕರ್ಣನಾದ ನಾನು ತಮ್ಮ ಪಾದಕ್ಕೆ ಎರಗುತ್ತೇನೆ" ಎಂದು ಕರ್ಣನು ಅವನಿಗೆ ವಂದಿಸಿದನು.

ಅವನಿಗೆ ಹೇಗೆ ಆಶೀರ್ವಾದ ಮಾಡಬೇಕೆಂದು ಶಕ್ರನಿಗೆ ಸ್ವಲ್ಪ ಚಿಂತೆಯಾಯಿತು. "ದೀರ್ಘಾಯುವಾಗು ಎಂದರೆ ಬಹುಕಾಲ ಬದುಕುತ್ತಾನೆ. ಹೇಳದಿದ್ದರೆ ನನ್ನನ್ನು ಮೂಢನೆಂದು ನಿರಾಕರಿಸುತ್ತಾನೆ" ಎಂದುಕೊಂಡು, ಆ ಎರಡು ಮಾರ್ಗಗಳನ್ನೂ ಬಿಟ್ಟು, "ಅಯ್ಯಾ ಕರ್ಣ, ಸೂರ್ಯನ ಹಾಗೆ, ಚಂದ್ರನ ಹಾಗೆ, ಹಿಮವಂತನ ಹಾಗೆ, ಸಾಗರದ ಹಾಗೆ ನಿನ್ನ ಯಶಸ್ಸು ಶಾಶ್ವತವಾಗಿರಲಿ" ಎಂದನು.

ಕರ್ಣನಿಗಾದರೂ "ದೀರ್ಘಾಯುವಾಗೆಂದು ಹರಸಬಾರದಾಗಿತ್ತೆ?" ಎಂದು ಒಂದರೆಕ್ಷಣ ಕೊರತೆಯೆನ್ನಿಸಿತು. ಆದರೆ ಒಡನೆಯೇ "ಇಲ್ಲ, ಅದಕ್ಕಿಂತ ಇದೇ ಒಳ್ಳೆಯದು. ಆಯುಸ್ಸು, ಐಶ್ವರ್ಯ ಹಾವಿನ ನಾಲಗೆಯ ಹಾಗೆ ಚಪಲ. ಧರ್ಮವನ್ನು ಸಾಧಿಸಿದರೆ, ದೇಹ ಹೋದರೂ ಗುಣಗಳು ಉಳಿಯುತ್ತವೆ" ಎಂದು ಸಮಾಧಾನಗೊಂಡು, "ಪೂಜ್ಯರಿಗೆ ಏನು ಇಚ್ಛೆ? ನಾನು ಏನು ಕೊಡಲಿ?" ಎಂದು ಕೇಳಿದನು.

ಆ ಕಪಟ ಬ್ರಾಹ್ಮಣನು ಇಂಥದೇ ಬೇಕೆಂದು ಸ್ಪಷ್ಟವಾಗಿ ಹೇಳದಿರಲು, ಕರ್ಣನು "ಪೂಜ್ಯರೆ, ಪವಿತ್ರವಾದ ಗೋಧನದಲ್ಲಿ ನಿಮಗೆ ಇಷ್ಟವುಂಟೆ? ಅಮೃತಕ್ಕೆ ಸಮಾನವಾದ ಕ್ಷೀರಧಾರೆಯನ್ನು ಕರೆಯುವ ಸಾವಿರ ಗೋವುಗಳಿಗೆ ಚಿನ್ನದ ಕೊಂಬುಗಳನ್ನಿಡಿಸಿ, ತಾಯ ಹಾಲನ್ನು ಕುಡಿದು ತೃಪ್ತಿಯಿಂದ ನಲಿಯುವ ಕರುಗಳ ಸಮೇತವಾಗಿ ಕೊಡುತ್ತೇನೆ. ಕೇಳುವವರು ಇಂಥದನ್ನು ಕೇಳುವುದು ತಕ್ಕುದು" ಎಂದನು.

"ಏನು ಗೋಸಹಸ್ರವನ್ನು ನೀನು ದಾನಮಾಡಿದರೂ ಒಂದು ಮುಹೂರ್ತಕಾಲ ಹಾಲು ಕುಡಿಯಬಹುದು, ಅಷ್ಟೆ. ಇದು ಇಷ್ಟವಿಲ್ಲ, ಕರ್ಣ" ಎಂದು ಆ ಬ್ರಾಹ್ಮಣರೂಪಿನ ಶಕ್ರನು ಅದನ್ನೊಲ್ಲದಿರಲು, ಕರ್ಣನು "ಹಾಗಾದರೆ ಸಾವಿರ ಕುದುರೆಗಳನ್ನು ಕೊಡುತ್ತೇನೆ. ಸೂರ್ಯನ ಕುದುರೆಗಳಿಗೆ ಸಮಾನವಾದ ಈ ಕುದುರೆಗಳು ರಾಜ್ಯಲಕ್ಷ್ಮಿಯನ್ನು ಸಾಧಿಸಿಕೊಡುವ ಸಾಮರ್ಥ್ಯವುಳ್ಳವಾದ್ದರಿಂದ ಎಲ್ಲ ರಾಜರ ಮನ್ನಣೆಗೂ ಪಾತ್ರವಾದವು. ಕಾಂಭೋಜ ಕುಲದಲ್ಲಿ ಜನಿಸಿದ ಗುಣಶಾಲಿಗಳಾದ ಈ ಕುದುರೆಗಳು ವಾಯುವೇಗದಿಂದ ಮುಂದೆ ನುಗ್ಗಿ ಯುದ್ಧದಲ್ಲಿ ಪರಿಶ್ರಮಪಡೆದಿವೆ" ಎಂದನು.

"ಕುದುರೆಯಾದರೇನು? ಒಂದು ಮುಹೂರ್ತಕಾಲ ಹತ್ತಬಹುದು, ಅಷ್ಟೆ" ಎಂದು ಶಕ್ರನು ಅದನ್ನೂ ನಿರಾಕರಿಸಲು, ಕರ್ಣನು "ಹಾಗೆ ಅದೂ ಬೇಡವಾದರೆ, ಪರ್ವತಗಳ ಗುಂಪಿನಂತಿರುವ ಆನೆಯ ಹಿಂಡನ್ನು ದಾನಕೊಡುತ್ತೇನೆ. ಅವುಗಳ ಕಪೋಲದಲ್ಲಿ ಸುರಿಯುವ ಮದಧಾರೆಗೆ ದುಂಬಿಗಳು ಬಂದು ಮುತ್ತುತ್ತವೆ. ಅವು ಘೀಳಿಟ್ಟು ಮೊರೆದರೆ, ಆ ಘೋಷ ಗುಡುಗಿನಂತೆ ಗಂಭೀರವಾಗಿರುತ್ತದೆ. ಬಿಳುಪಾದ ದಂತಗಳನ್ನೂ ನಖಗಳನ್ನೂ ತಾಳಿ, ಯುದ್ಧದಲ್ಲಿ ಶತ್ರುಗಳನ್ನು ಮರ್ದನಮಾಡುವಂತಹ ಆನೆಗಳನ್ನು ಕೊಡುತ್ತೇನೆ" ಎಂದನು.

"ಆನೆಯಾದರೆ ತಾನೇ ಏನು, ಕರ್ಣ? ಮುಹೂರ್ತಕಾಲ ಏರಬಹುದು, ಅಷ್ಟೆ" ಎಂದು ಶಕ್ರನು ಅದನ್ನೂ ಒಪ್ಪದಿರಲು, ಕರ್ಣನು ಅವನಿಗೆ ಲೆಕ್ಕವಿಲ್ಲದಷ್ಟು ಚಿನ್ನವನ್ನು ದಾನ ಕೊಡುವೆನೆಂದನು. ಆ ಕಪಟ ಬ್ರಾಹ್ಮಣನು ಒಂದು ಕ್ಷಣ ಅದಕ್ಕೆ ಆಸೆಗೊಂಡವನ ಹಾಗೆ ನಟಿಸಿ, ಮರುಕ್ಷಣದಲ್ಲಿಯೇ ಅದನ್ನೂ ನಿರಾಕರಿಸಿದನು.

"ಹಾಗಾದರೆ ಪೃಥ್ವಿಯನ್ನೇ ಗೆದ್ದು ನಿಮಗೆ ಕೊಡುತ್ತೇನೆ."

"ಪೃಥ್ವಿಯಿಂದ ಏನು ಮಾಡಲಿ, ಕರ್ಣ?"

"ಹಾಗಾದರೆ, ನಾನು ಅಗ್ನಿಯಲ್ಲಿ ಮಾಡಿರುವ ಹೋಮದ ಫಲವನ್ನು ಕೊಡುತ್ತೇನೆ."

"ಈ ಹೋಮದ ಫಲದಿಂದ ಏನು ಮಾಡಲಿ, ಕರ್ಣ?"

ಹೀಗೆ ಆ ಬ್ರಾಹ್ಮಣನು ಮಹತ್ತರವಾದ ಭಿಕ್ಷೆಯನ್ನು ಬೇಡುವ ಸಲುವಾಗಿಯೇ ಬಂದರೂ ತಾನು ನೀಡಿದ ಯಾವುದನ್ನೂ ಒಪ್ಪದೆ ಹೋದುದಕ್ಕೆ ಕಾತರಗೊಂಡು, ಬೇಡಿದವರಿಗೆ ಬೇಡಿದುದನ್ನು ಕೊಡುವೆನೆಂಬ ಸಂಕಲ್ಪವುಳ್ಳ ಆ ಅಂಗರಾಜನು "ಹಾಗಾದರೆ ನನ್ನ ತಲೆಯನ್ನೇ ಕೊಡುತ್ತೇನೆ" ಎಂದನು.

ಕರ್ಣನ ಈ ಪರಮೌದಾರ್ಯವನ್ನು ಕೇಳಿ ಇಂದ್ರನು ಹೆದರಿದನು. ಆಗ ಕರ್ಣನೇ ಅವನ ಹೆದರಿಕೆಯನ್ನು ಕಳೆಯುತ್ತ "ಹಾಗಾದರೆ, ನನ್ನ ಅಂಗಗಳ ಜೊತೆಯಲ್ಲೇ ಹುಟ್ಟಿ, ನನ್ನ ದೇಹಕ್ಕೆ ರಕ್ಷೆಯಾಗಿರುವ ಈ ಕವಚವನ್ನು ಕೊಡುತ್ತೇನೆ. ಇದನ್ನು ದೇವಾಸುರರು ಕೂಡ ತಮ್ಮ ಅಸ್ತ್ರಗಳಿಂದ ಭೇದಿಸಲಾರರು. ಇದು ನಿಮಗೆ ಇಷ್ಟವಾದರೆ, ಈ ಕವಚದ ಜೊತೆಗೆ ನನ್ನ ಕುಂಡಲಗಳನ್ನೂ ನಾನು ಪ್ರೀತಿಯಿಂದ ನಿಮಗೆ ಕೊಡುತ್ತೇನೆ" ಎಂದನು.

ಅದಕ್ಕಾಗಿಯೇ ವೇಷ ಮರೆಸಿಕೊಂಡು ಬಂದಿದ್ದ ಶಕ್ರನು ಹರ್ಷದಿಂದ "ಕೊಡು, ಕೊಡು" ಎಂದನು.

ಆಗ ಕರ್ಣನಿಗೆ "ಓಹೋ, ಇದಕ್ಕಾಗಿಯೇ ಈತನು ಬಂದನೆಂದು ಕಾಣುತ್ತದೆ. ಇದೇನಾದರೂ ಆ ಕಪಟಿಯಾದ ಕೃಷ್ಣನ ಉಪಾಯವಿರಬಹುದೆ?" ಎಂದು ಅರೆಕ್ಷಣ ಶಂಕೆಯಾಯಿತು. ಆದರೂ ಒಡನೆಯೇ "ಆ ಕೃಷ್ಣನೇ ಈ ವೇಷವನ್ನು ತಾಳಿ ಬಂದನಾದರೂ ಇದಕ್ಕೆ ದುಃಖಪಡುವುದು ಯೋಗ್ಯವಲ್ಲ" ಎಂದು ಮನಸ್ಸನ್ನು ಸ್ಥಿರಪಡಿಸಿಕೊಂಡು, "ಇದೊ, ತೆಗೆದುಕೊ" ಎಂದನು.

ಆಗ "ನಿನ್ನ ಕವಚಕುಂಡಲಗಳನ್ನು ಕೊಡಬೇಡ, ಬೇಡ" ಎಂದು ಶಲ್ಯನು ಎಷ್ಟು ತಡೆದರೂ ಕೇಳದೆ, "ನೋಡು ಶಲ್ಯ, ಸರಿಯಾದ ಕಾಲ ಕಳೆದುಹೋದರೆ ಕಲಿತ ವಿದ್ಯೆ ಅಪ್ರಯೋಜಕವಾಗುತ್ತದೆ; ಬಲವಾದ ಬುಡವುಳ್ಳ ಮರಗಳೂ ಬಿದ್ದುಹೋಗುತ್ತವೆ; ನೀರ್ದಾಣಗಳಲ್ಲಿ ಕೂಡ ನೀರು ಬತ್ತಿಹೋಗುತ್ತದೆ. ಆದರೆ ದಾನ ಮಾಡಿದ್ದು, ಹೋಮ ಮಾಡಿದ್ದು ಎಂಬ ಈ ಎರಡು ಮಾತ್ರ ಶಾಶ್ವತವಾಗಿ ಉಳಿಯುತ್ತವೆ" ಎಂದು ಸಮಾಧಾನ ಹೇಳುತ್ತಾ ತನ್ನ ಕವಚ ಕುಂಡಲಗಳನ್ನು ಕತ್ತರಿಸಿ, ಆ ಬ್ರಾಹ್ಮಣವೇಷದ ಇಂದ್ರನಿಗೆ ಕರ್ಣನು ದಾನಮಾಡಿದನು.



ಕರ್ಣನು ಕವಚಕುಂಡಲಗಳನ್ನು ಕೊಟ್ಟನು

ಇಂದ್ರನು ಅದನ್ನು ತೆಗೆದುಕೊಂಡು, ತಾನು ಬಂದ ಕಾರ್ಯವಾಯಿತೆಂದು ಐರಾವತವನ್ನು ಏರಿ, ಮುಂದೆ ನಡೆಯುವ ಕರ್ಣಾರ್ಜುನರ ಯುದ್ಧವಿಶೇಷವನ್ನು ನೋಡುವ ಉತ್ಸುಕತೆಯಿಂದ ಕಣ್ಮರೆಯಾದನು.

ಆಗ, ಬಂದು ಹೋದವನು ಇಂದ್ರನೆಂಬುದು ಶಲ್ಯನಿಗೂ ತಿಳಿಯಿತು, ಕರ್ಣನಿಗೂ ತಿಳಿಯಿತು. ಅಂಗರಾಜನು ಶಕ್ರನಿಂದ

ವಂಚಿತನಾದನೆಂದು ಶಲ್ಯನು ಮರುಗಿದನು. ಆದರೆ ಕರ್ಣನು "ಹಾಗಲ್ಲ, ಶಲ್ಯ. ಯಾವನು ಬ್ರಾಹ್ಮಣರ ಅನೇಕ ಯಜ್ಞಗಳಲ್ಲಿ ಆಹುತಿಯನ್ನು ಪಡೆದು ತಣಿಯುವನೋ, ಯಾವನು ಆ ಅಪ್ರತಿಮನಾದ ಅರ್ಜುನನನ್ನು ಪಡೆದವನೋ, ಯಾವನು ರಾಕ್ಷಸರ ಸಮೂಹವನ್ನು ಸಂಹಾರಮಾಡಿದನೋ, ಯಾವನ ಕೈಬೆರಳು ಸುರಗಜವನ್ನು ಆಸ್ಫಾಲನಮಾಡಿ ಕರ್ಕಶವಾಗಿದೆಯೋ ಅಂತಹ ಪಾಕಶಾಸನನು ನನ್ನನ್ನು ಬೇಡಿ ತನ್ನ ಕಾರ್ಯವನ್ನು ಸಾಧಿಸಿಕೊಳ್ಳಬೇಕಾಯಿತು. ಆದ್ದರಿಂದ ಶಕ್ರನಿಂದ ನಾನು ವಂಚಿತನಾಗಲಿಲ್ಲ, ನನ್ನಿಂದ ಶಕ್ರನೇ ವಂಚಿತನಾದನು" ಎಂದು ಹೇಳಿ ಸಮಾಧಾನಚಿತ್ತದಿಂದ ಇದ್ದನು.

§ ೫

ಇತ್ತ, ಕರ್ಣನ ಕವಚ ಕುಂಡಲಗಳನ್ನು ತೆಗೆದುಕೊಂಡು ಹೋದ ಪುರಂದರನಿಗೆ ಪಶ್ಚಾತ್ತಾಪವುಂಟಾಯಿತು. ಆಗ ಅವನು ಕರ್ಣನನ್ನು ಅನುಗ್ರಹಿಸಬೇಕೆಂದು ಒಬ್ಬ ದೇವದೂತನನ್ನು ಕರೆದು, "ವಿಮಲಾ ಎಂಬ ಅಮೋಘಾಸ್ತ್ರವನ್ನು ದೇವೇಂದ್ರನು ನಿನಗೆ ಕೊಟ್ಟಿರುವನು ಎಂದು ಕರ್ಣನಿಗೆ ತಿಳಿಸು. ಅದರಿಂದ ಪಾಂಡವರಲ್ಲಿ ಒಬ್ಬನನ್ನು ವಧಿಸಬಹುದು, ಅದು ಸ್ಮರಿಸಿದಾಗ ಅವನ ಕೈಸೇರುತ್ತದೆ ಎಂದೂ ಹೇಳು" ಎಂದು ಅವನನ್ನು ಕರ್ಣನ ಬಳಿಗೆ ಅಟ್ಟಿದನು.

ಆದರೆ ಅದು ದೇವೇಂದ್ರನು ಕೊಟ್ಟ ದಾನವಾದರೂ, ಅದರಿಂದ ಒಬ್ಬ ಪಾಂಡವನನ್ನು ಕೊಲ್ಲುವುದು ಸಾಧ್ಯವಾದರೂ, ದಾನಕೊಟ್ಟುದಕ್ಕೆ ಪ್ರತಿಯನ್ನು ಪಡೆಯಲು ಕರ್ಣನು ಇಷ್ಟಪಡಲಿಲ್ಲ. ಆದರೆ "ಬ್ರಾಹ್ಮಣವಚನಕ್ಕೆ ಮರ್ಯಾದೆಕೊಟ್ಟು ಇದನ್ನು ತೆಗೆದುಕೊ" ಎಂದು ದೇವದೂತನು ಹೇಳಿದಾಗ, ಅದುವರೆಗೆ ಒಂದು ಬಾರಿಯಾದರೂ ಬ್ರಾಹ್ಮಣವಚನವನ್ನು ಮೀರದಿದ್ದ ಕರ್ಣನು ಆ ಅಸ್ತ್ರವನ್ನು ಪ್ರತಿಗ್ರಹಿಸಿದನು. ಅನಂತರ ದೇವದೂತನು ಹಿಂದಿರುಗಿದನು.

ಆಗ ಮಹಾಕೋಲಾಹಲವಾಯಿತು. ಪ್ರಳಯಸಾಗರದ ಘೋಷಕ್ಕೆ ಸಮನಾದ ಶಂಖನಿಸ್ವನವು ಕೇಳಿಬಂದಿತು. "ಇದು ಕೃಷ್ಣನದೋ, ಪಾರ್ಥನದೋ, ಇಬ್ಬರಲ್ಲಿ ಒಬ್ಬರ ಶಂಖದ ಧ್ವನಿ. ಹಾಗಾದರೆ, ಯುಧಿಷ್ಠಿರನ ಪರಾಜಯದಿಂದ ಅತಿಯಾಗಿ ಕೋಪಗೊಂಡ ಪಾರ್ಥನು ಈ ದಿನ ತನಗೆ ತಕ್ಕ ರೀತಿಯಲ್ಲಿ ಯುದ್ಧ ಮಾಡುವನು" ಎಂದು ಕರ್ಣನು ಅದನ್ನು ಕೇಳಿ ಉತ್ಸಾಹಿಸಿದನು. ಅವನ ಇಷ್ಟದಂತೆ ಶಲ್ಯನು ಅರ್ಜುನನು ಇದ್ದ ಕಡೆಗೆ ರಥವನ್ನು ನಡೆಸಿಕೊಂಡು ಹೋದನು.

# ಊರುಭಂಗದ ಕಥೆ

## § ೧

ಕೌರವರ, ಪಾಂಡವರ ಯುದ್ಧ ಹದಿನೆಂಟು ದಿವಸ ನಡೆಯಿತು. ಎರಡು ಕಡೆಯವರೂ ವೀರಸ್ವರ್ಗವನ್ನು ಪಡೆಯುವುದಕ್ಕೋಸ್ಕರ ಯುದ್ಧವೆಂಬ ಅಗ್ನಿಯಲ್ಲಿ ತಮ್ಮ ದೇಹಗಳನ್ನೇ ಹೋಮ ಮಾಡ ಬಯಸಿ ಕಾದಾಡಿದರು. ಸತ್ತ ಆನೆಗಳು ಕುಸಿದ ಬೆಟ್ಟಗಳಂತೆ ಬಿದ್ದಿದ್ದುವು. ಅತಿರಥರು ಅಸ್ತ್ರಗಳಿಂದ ಹತರಾಗಿ ನೆಲಕ್ಕೆ ಬಿದ್ದುದ ರಿಂದ ಬರಿದಾದ ರಥಗಳಲ್ಲಿ ಹದ್ದುಗಳು ಗೂಡುಮಾಡಿಕೊಂಡವು. ಸತ್ತುಬಿದ್ದ ಆನೆ ಕುದುರೆ ಪದಾತಿಗಳ ರಕ್ತದಿಂದ ನೆಲವು ಕೆಸರಾಗಿ ಹೋಯಿತು. ಸುತ್ತ ಯಾವಕಡೆ ನೋಡಿದರೂ ಛತ್ರ, ಚಾಮರ, ತೋಮರ, ಗದಾ, ಖಡ್ಗ, ಶೂಲ, ಮುಸಲ, ಮುದ್ಗರ ಮುಂತಾದ ಆಯುಧಗಳು ಚೂರುಚೂರಾಗಿ ಕಿಕ್ಕಿರಿದು ತುಂಬಿದ್ದುವು. ಸುತ್ತಲೂ ಹರಿಯುತ್ತಿದ್ದ ನೆತ್ತರಿನ ಹೊಳೆಗಳಿಗೆ ಸತ್ತ ಆನೆಗಳೇ ಸೇತುವೆಗ ಳಾಗಿದ್ದುವು. ರಥಿಯಾಗಲಿ ಸಾರಥಿಯಾಗಲಿ ಇಲ್ಲದ ಬರಿಯ ರಥ ಗಳನ್ನು ಕುದುರೆಗಳು ಎಳೆದುಕೊಂಡು ಓಡುತ್ತಿದ್ದುವು. ಕತ್ತು ಕತ್ತರಿಸಿ ತಲೆ ಕೆಳಗುರುಳಿದರೂ ಕೆಳಗಿನ ಕಬಂಧವು ಮೊದಲಿನ ಅಭ್ಯಾಸದಿಂದ ನಿಲ್ಲದೆ ಮುಂದೋಡಿ ಬೀಳುತ್ತಿತ್ತು. ಮದದಾನೆಗಳು ಮಾವಟಿಗರಿಲ್ಲದೆ ಮನಸ್ಸು ಬಂದಂತೆ ತಿರುಗುತ್ತಿದ್ದುವು. ಹದ್ದುಗಳು ಸತ್ತ ದೇಹಗಳ ಮೇಲೆ ಎರಗಿ, ರಕ್ತದಿಂದ ನೆನೆದ ಕೊಕ್ಕಿನಿಂದ ಕುಕ್ಕುತ್ತ, ಮೈಯ ಚರ್ಮವನ್ನು ಹರಿದು, ಮಾಂಸವನ್ನು ಕಿತ್ತು ಎತ್ತಿಕೊಂಡು ಹಾರಿಹೋಗುತ್ತಿದ್ದುವು. ವಾಹನಗಳ ಮೇಲಿದ್ದ ವೀರರ ಮೃತದೇಹಗಳನ್ನು ನರಿಗಳು ಎಳೆದು ಕೆಳಗಿಳಿಸುತ್ತಿದ್ದುವು. ಹೀಗೆ ಸಮಂತಪಂಚಕದ ಯುದ್ಧಭೂಮಿಯು ಉಭಯಪಕ್ಷದ

ವೀರರ ಶೌರ್ಯಕ್ಕೆ ಒರೆಗಲ್ಲಿನ ಹಾಗಿತ್ತು; ಪ್ರಾಣಾಗ್ನಿ ಹೋಮಗಳನ್ನು ನಡಸುವ ಆಶ್ರಮಪ್ರದೇಶದ ಹಾಗಿತ್ತು; ಆ ಯುದ್ಧಭೂಮಿಯಲ್ಲಿ ಸತ್ತುಬಿದ್ದಿದ್ದ ಆನೆ ಕುದುರೆ ಪದಾತಿಗಳ ಸಾಲನ್ನು ನೋಡಿದರೆ ಬಣ್ಣಬಣ್ಣಗಳನ್ನು ಕಲಸಿ ಬರೆದ ಚಿತ್ರದ ಹಾಗೆ ಕಾಣುತ್ತಿತ್ತು. ನೆಲದಮೇಲೆ ಮುರಿದು ಬಿದ್ದಿದ್ದ ಶಸ್ತ್ರಾಸ್ತ್ರಗಳಲ್ಲಿ ಸೂರ್ಯನ ಕಿರಣವು ಪ್ರತಿಫಲಿತವಾಗಿ, ಆಕಾಶದಿಂದ ಕೆಳಗುರುಳಿದ ನಕ್ಷತ್ರ ಮಂಡಲದಂತೆ ಗೋಚರವಾಗುತ್ತಿತ್ತು. ಕುರುಕ್ಷೇತ್ರವು ಹೀಗೆ ಭಯಂಕರವಾಗಿತ್ತು.

ಹದಿನೆಂಟನೆಯ ದಿವಸದ ಮಧ್ಯಾಹ್ನದ ವೇಳೆಗೆ ಧೃತರಾಷ್ಟ್ರನ ಕಡೆಯಲ್ಲಿ ದುರ್ಯೋಧನನು ಒಬ್ಬನು ಮಾತ್ರ ಉಳಿದಿದ್ದನು. ಯುಧಿಷ್ಠಿರನ ಕಡೆಯಲ್ಲಿ ಕೃಷ್ಣನೂ ಐದು ಜನ ಪಾಂಡವರೂ ಅಷ್ಟೇ ಉಳಿದಿದ್ದರು.

§ ೨

ಆಗ, ಭೀಮನಿಗೂ ದುರ್ಯೋಧನನಿಗೂ ಗದಾಯುದ್ಧವು ಮೊದಲಾಯಿತು. "ದ್ರೌಪದಿಯ ಮುಡಿಯನ್ನು ಹಿಡಿದು ಎಳೆಸಿದನಲ್ಲಾ" ಎಂಬ ಅವಮಾನದಿಂದ ಭೀಮನಿಗೆ ದುರ್ಯೋಧನನ ಮೇಲೆ ಕ್ರೋಧ. "ನನ್ನ ನೂರು ಜನ ತಮ್ಮಂದಿರೂ ನಾಶವಾದರಲ್ಲಾ" ಎಂಬ ಶೋಕದಿಂದ ದುರ್ಯೋಧನನಿಗೆ ಭೀಮನ ಮೇಲೆ ಕ್ರೋಧ. ಇವರ ಗದಾಯುದ್ಧವನ್ನು ನೋಡುವುದಕ್ಕಾಗಿ ಕುರುಕುಲ ಯದುಕುಲಗಳಿಗೆ ದೇವತೆಗಳೆನಿಸಿದ ವ್ಯಾಸ, ಬಲರಾಮ, ಕೃಷ್ಣ, ವಿದುರ ಮುಂತಾದವರು ಬಂದು ನೆರೆದರು.

ಗದಾಯುದ್ಧ ಮೊದಲಾಯಿತು. ಇಂದ್ರನ ಐರಾವತದ ಸೊಂಡಿಲಿನಂತೆ ಸಮರ್ಥವಾದ ತನ್ನ ತೋಳನ್ನು ಬೀಸಿ, ದುರ್ಯೋಧನನು ಕಾದಚಿನ್ನದ ಹಲಗೆಯಂತಿದ್ದ ಭೀಮನ ವಿಶಾಲವಾದ ವಕ್ಷವನ್ನು ತನ್ನ ಗದೆಯಿಂದ ಕುಟ್ಟಿದನು. ಒಬ್ಬರನ್ನೊಬ್ಬರು ಗದೆ

ಗಳಿಂದ ಹೊಡೆದು ಬಡಿದರು. ಆ ಗದೆಯ ಘಟ್ಟನೆಯನ್ನು ಕೇಳಿ ದರೆ 'ಮೋಡಗಳು ಗುಡುಗುವುವೊ! ವಜ್ರಪಾತಕ್ಕೆ ಸಿಡಿದು ಪರ್ವತಗಳು ಒಡೆಯುವುವೊ! ಎದೆಯೊಡೆಯುವ ಈ ಆರ್ಭಟಕ್ಕೆ ನೆಲ ಬಿರಿದು ಬಾಯಿಬಿಡುವುದೊ! ಬಿರುಗಾಳಿಯು ಭೋರ್ಗರೆದು, ಕಡಲು ಉಕ್ಕಿ ಮೊರೆದು, ದೊಡ್ಡ ಅಲೆ ಎದ್ದು ಬಿದ್ದು ಮಂದರ ವನ್ನು ಮುಳುಗಿಸುವುದೊ!' ಎಂಬ ಭ್ರಮೆಯುಂಟಾಗುತ್ತಿತ್ತು.

ಕ್ರೋಧದಿಂದ ದುರ್ಯೋಧನನ ಕಣ್ಣು ಅರಳಿತು. ತಲೆ ಯಲುಗಿದ್ದರಿಂದ ಕಿರೀಟ ಬಾಗಿತು. ದೇಹವನ್ನು ಕುಗ್ಗಿಸಿ, ಶತ್ರು ವಿನ ರಕ್ತದಲ್ಲಿ ನೆನೆದು ಕೆಸರಾದ ಗದೆಯನ್ನು ಆ ದುರ್ಯೋಧನನು ತಲೆಯ ಮೇಲೆತ್ತಿ ಝಳಪಿಸಿದಾಗ ಕೈಲಾಸಪರ್ವತದ ಶಿಖರದಲ್ಲಿ ಮಹೇಂದ್ರನ ವಜ್ರಾಯುಧವು ನಿಂತಹಾಗಾಯಿತು. ಅದು ಎರಗಿ ದೊಡನೆ ಭೀಮನ ದೇಹದಿಂದ ರಕ್ತ ಹೊರಸೂಸಿತು. ಹಣೆಯ ಮುಂಭಾಗವು ಒಡೆದು, ರಕ್ತದ ಮಳೆ ಸುರಿಯಿತು. ಬಿಗುವಾಗಿದ್ದ ಅವನ ಭುಜ ಸಡಿಲವಾಯಿತು. ಸಂತತವಾದ ರಕ್ತಧಾರೆಗಳಿಂದ ಭೀಮನ ಎದೆ ನೆನೆಯಿತು. ಧಾತುಗಳಿಂದ ಕೆಂಪಾದ ಹೊಳೆಯ ನೀರು ಮೇರುಪರ್ವತದ ಬಂಡೆಗಳ ಮೇಲೆ ಹರಿದುಹೋಗುವಂತೆ ಭೀಮನ ದೇಹದಲ್ಲಿ ಗದೆಯ ಗಾಯಗಳ ಮೇಲೆ ರಕ್ತವು ಪ್ರವಹಿಸುತ್ತಿತ್ತು.

ಭೀಮನು ದುರ್ಯೋಧನನ ಕಡೆಗೆ ಬಾಗಿ, ಆರ್ಭಟಿಸುತ್ತ ತನ್ನ ಭೀಮಗದೆಯನ್ನು ಬೀಸಿದನು. ಭುಜವನ್ನು ಮೇಲೆತ್ತಿ ಅವನ ಗುರಿಯನ್ನು ಮುರಿದನು. ಹೆಜ್ಜೆಯನ್ನು ನೋಡಿ ಇಟ್ಟು, ಒಂದೇ ಸಮನೆ ಹೊಡೆದನು.

ಆದರೇನು? ಭೀಮನು ದುರ್ಯೋಧನನಿಗಿಂತ ಬಲಶಾಲಿ ಯೇನೋ ನಿಜ. ಆದರೆ ದುರ್ಯೋಧನನು ಭೀಮನಿಗಿಂತ ಶಿಕ್ಷಿತ ನೆಂಬುದೂ ನಿಜ. ಆದ್ದರಿಂದಲೇ ಪರ್ವತಕ್ಕೆ ಸರಿಸಮನಾದ ಆ

ಭೀಮನು, ಯುದ್ಧವಿಕ್ರಮದಲ್ಲಿ ಅಪ್ರತಿಮ ಸಾಹಸಿಯಾದವನು, ದುರ್ಯೋಧನನ ಗದೆಯ ಏಟಿಗೆ ಭೂಮಿಯಲ್ಲಿ ಬಿದ್ದನು. ನೆತ್ತಿಯೊಡೆದು ಸುರಿಯುವ ರಕ್ತದಲ್ಲಿ ಮೈ ನೆನೆದು ಅವನು ಬಿದ್ದುದನ್ನು ನೋಡಿದರೆ, ಗಿರಿರಾಜನಾದ ಹೇಮಕೂಟವು ವಜ್ರಪಾತಕ್ಕೆ ಸಿಕ್ಕಿ ಕೆಳಗುರುಳಿದಾಗ ಅದರ ಮೈಯಲ್ಲಿ ಕರಗಿ ಹರಿಯುವ ಧಾತುವಿನ ಜ್ಞಾಪಕವಾಗುತ್ತಿತ್ತು.

ದುರ್ಯೋಧನನ ಬಲವಾದ ಪೆಟ್ಟನ್ನು ತಡೆಯಲಾರದೆ ಅಂಗಗಳು ಸಡಿಲವಾಗಿ ಕುಸಿದುಬಿದ್ದ ಆ ಭೀಮನನ್ನು ನೋಡಿ ವ್ಯಾಸ ಋಷಿಯು ವಿಸ್ಮಯದಿಂದ ಬೆರಳನ್ನು ಗಲ್ಲದಲ್ಲಿಟ್ಟು, ಮುಖವನ್ನು ಮೇಲಕ್ಕೆತ್ತಿ ನೋಡಿದನು. ಯುಧಿಷ್ಠಿರನು ದೀನನಾದನು ; ವಿದುರನು ಕಣ್ಣೀರು ತುಂಬಿ ಕಳವಳಿಸಿದನು ; ಅರ್ಜುನನು ಗಾಂಡಿವದ ಕಡೆಗೆ ಕೈಚಾಚಿದನು ; ಶ್ರೀಕೃಷ್ಣನು ಆಕಾಶವನ್ನು ದೃಷ್ಟಿಸುತ್ತಿದ್ದನು. ಪ್ರೇಕ್ಷಕನಾದ ಹಲಾಯುಧನು ತನ್ನ ಶಿಷ್ಯನ ಅಭ್ಯುದಯವನ್ನು ಕಂಡು ನೇಗಿಲನ್ನು ಗಿರಗಿರನೆ ತಿರುಗಿಸಿದನು. ವೀರನೂ ಅಭಿಮಾನಿಯೂ ತೇಜಸ್ವಿಯೂ ಸಾಹಸಿಯೂ ವಿನಯವಂತನೂ ಆದ ಆ ದುರ್ಯೋಧನನಾದರೋ ವಿವಿಧವಾದ ರತ್ನಗಳಿಂದ ವಿಚಿತ್ರವಾದ ತನ್ನ ಮೌಲಿಯನ್ನು ತೂಗುತ್ತ, “ ಹೆದರಬೇಡ, ಭೀಮ ! ವೀರಪುರುಷನಾದವನು ಯುದ್ಧದಲ್ಲಿ ದೀನನನ್ನು ಕೊಲ್ಲುವುದಿಲ್ಲ ” ಎಂದು ಅವನನ್ನು ಅಪಹಾಸ್ಯಮಾಡಿದನು.

ಭೀಮನು ದುರ್ಯೋಧನನ ಅಪಹಾಸ್ಯಕ್ಕೆ ಗುರಿಯಾದುದನ್ನು ಕಂಡು, ಜನಾರ್ದನನು ತನ್ನ ತೊಡೆಯನ್ನು ಹೊಡೆದುಕೊಂಡು ಅವನಿಗೆ ಏನೋ ಸಂಜ್ಞೆ ಮಾಡಿದನು. ಭೀಮನು ಆ ಸಂಜ್ಞೆಯಿಂದ ಹುರುಪುಗೊಂಡು ಎದ್ದು, ಹುಬ್ಬುಗಳನ್ನು ಹೆಣೆದುಕೊಂಡು, ಕೈಯಿಂದ ಹಣೆಯ ಬೆವರನ್ನು ಒರಸುತ್ತ, ಚಿತ್ರಾಂಗದವೆಂಬ

ಹೆಸರಿನ ತನ್ನ ಮಹಾಗದೆಯನ್ನು ಎರಡು ಕೈಗಳಿಂದಲೂ ಬಿಗಿ ಹಿಡಿದನು. ಕ್ರೋಧದಿಂದ ಕೆಂಪಾದ ಕಣ್ಣುಗಳನ್ನು ತಿರುಗಿಸುತ್ತ ಸಿಂಹದಂತೆ, ಗೂಳಿಯಂತೆ ಗರ್ಜಿಸಿದನು. ಮಗನ ದೈನ್ಯವನ್ನು ನೋಡಿ ತಂದೆಯಾದ ವಾಯುದೇವನು ಮರುಕಗೊಂಡು ಅವನಿಗೆ ಮಿಗಿಲಾದ ಬಲವನ್ನು ನೀಡಿದನೋ ಎಂಬ ಹಾಗೆ ಭೀಮನು ಹೊಸ ಚೈತನ್ಯವನ್ನು ಪಡೆದು ಗರ್ಜಿಸುತ್ತ ಎದ್ದನು.

ಪುನಃ ಗದಾಯುದ್ಧವು ಮೊದಲಾಯಿತು. ಭೀಮನು ಅಂಗೈಗಳನ್ನು ನೆಲಕ್ಕೆ ಉಜ್ಜಿ, ಬಾಹುಗಳನ್ನು ಅಪ್ಪಳಿಸಿ, ಹಲ್ಲುಮುಡಿಯನ್ನು ಕಚ್ಚಿ ನಿಂತನು. ಕ್ರೋಧಕ್ಕೆ ವಶನಾಗಿ, ಆರ್ಭಟಿಸಿ ಮೊರೆಯುತ್ತ, ತನ್ನ ಪರಾಕ್ರಮದ ಸೊಕ್ಕಿನಲ್ಲಿ ಧರ್ಮವನ್ನು ತಿರಸ್ಕರಿಸಿ, ಕರುಣೆಯನ್ನು ಆಚೆ ತಳ್ಳಿ, ಗದಾಯುದ್ಧದ ಮರ್ಯಾದೆಯನ್ನು ಮೀರಿ, ಭೀಮನು ದುರ್ಯೋಧನನ ತೊಡೆಯನ್ನು ಗದೆಯಿಂದ ಅಪ್ಪಳಿಸಿದನು. ಕುರುರಾಜನು ಅಂಗಗಳಿಂದ ರಕ್ತವನ್ನು ಸುರಿಸುತ್ತ ಕೆಳಗೆ ಬಿದ್ದನು.

ಆ ದೃಶ್ಯವನ್ನು ಕಂಡು ಭಗವಂತನಾದ ವ್ಯಾಸಮಹರ್ಷಿಯು ಚಕಿತನಾಗಿ ಆಕಾಶಕ್ಕೆ ನೆಗೆದನು. ಬಲರಾಮನು ಅದನ್ನು ನೋಡಲಾರೆನೆಂದು ಕಣ್ಣುಮುಚ್ಚಿಕೊಂಡನು. ದುರ್ಯೋಧನನಿಗೆ ಆದ ಗತಿಯನ್ನು ಕಂಡು ಕ್ರೋಧದಿಂದ ಹಲಧರನು ಕಣ್ಣುಮುಚ್ಚಿಕೊಂಡನೆಂದು ದ್ವೈಪಾಯನನು ಕೃಷ್ಣನಿಗೆ ಜ್ಞಾಪಿಸಿದನು. ಪಾಂಡವರು ಬಲರಾಮನ ಕೋಪಕ್ಕೆ ಹೆದರಿ ಭೀಮನನ್ನು ತಮ್ಮ ಕರಪಂಜರದಲ್ಲಿ ಅಡಗಿಸಿಕೊಂಡು ಹೋದರು. ಕೃಷ್ಣನು ಆ ಭೀಮನಿಗೆ ತನ್ನ ಕರಾವಲಂಬನವನ್ನು ಕೊಟ್ಟು ಕರೆದುಕೊಂಡು ಹೋದನು.

§ ೩

ಭೀಮನು ಹೀಗೆ ಓಡಿಹೋಗುವುದನ್ನು ನೋಡಿ ಕ್ರೋಧದಿಂದ ಹಲಾಯುಧನ ಕಣ್ಣು ಕೆರಳಿತು, ಕಿಡಿ ಕಾರಿತು. ಕ್ರೋಧ

ದಿಂದ ತಲೆಯಲುಗಿಸುತ್ತ, ದುಂಬಿಗಳು ತುಂಬಿರುವ ತನ್ನ ಕುಸುಮ ಮಾಲೆಯನ್ನು ಹಿಡಿದು ಸ್ವಲ್ಪ ಮೇಲೆತ್ತುತ್ತ, ಭೀಮನೊಡನೆ ಓಡುತ್ತಿರುವ ಪಾಂಡವರನ್ನು ಕುರಿತು "ಎಲೈ ರಾಜರೆ, ಇದು ತಕ್ಕದ್ದಲ್ಲ. ಶತ್ರುಸೈನ್ಯಗಳಿಗೆ ಯಮಪ್ರಾಯವಾದ ಈ ನನ್ನ ನೇಗಿಲನ್ನು ಲಕ್ಷಿಸದೆ, ಯುದ್ಧಧರ್ಮವನ್ನು ಗಮನಿಸದೆ, ತಾನೇ ಮಹಾಬಲನೆಂಬ ಮದದಿಂದ ನನ್ನನ್ನೂ ಕಡೆಗಣಿಸಿ, ಅವನು ದುರ್ಯೋಧನನ ತೊಡೆಯನ್ನು ಗದೆಯಿಂದ ಬಡಿದು ಕೆಡಹಿದನು" ಎಂದು ಕೂಗಿದನು.

ಅನಂತರ ದುರ್ಯೋಧನನನ್ನು ಕುರಿತು "ಅಪ್ಪಾ, ದುರ್ಯೋಧನ, ಒಂದು ಗಳಿಗೆಯವರೆಗೆ ಸಮಾಧಾನ ತಾಳಿಕೋ. ಈ ನನ್ನ ನೇಗಿಲು ಆ ಮಹಾರಾಕ್ಷಸನ ಪಟ್ಟಣ ಪ್ರಾಕಾರ ಕೂಟಗಳಿಗೆ ಅಂಕುಶಪ್ರಾಯವಾಗಿ, ಸೌಭವೆಂಬ ನಗರಿಯನ್ನು ನಾಶಮಾಡಿತು. ಇದೇ ನೇಗಿಲು ಕಾಳಿಂದಿಯ ಜಲವನ್ನು ಬೇರೆಕಡೆಗೆ ತಿರುಗಿಸಿತು. ಎಷ್ಟೋ ಶತ್ರುಗಳ ಪ್ರಾಣವನ್ನು ಉಪಾಹಾರವಾಗಿ ತೆಗೆದುಕೊಂಡು ತೃಪ್ತಿ ಕಂಡಿರುವ ಈ ನೇಗಿಲನ್ನು ಈಗ ಮೇಲೆತ್ತಿ, ಬೆವರು ರಕ್ತಗಳಿಂದ ನೆನೆದು ಹದವಾಗಿರುವ ಭೀಮನ ಹರಡಿದ ಎದೆಯಲ್ಲಿ ನಾಟಿ, ಹೊಲವನ್ನು ಉಳುವಂತೆ ಅವನ ಎದೆಯನ್ನು ಕಿತ್ತು ಉತ್ತುಬಿಡುತ್ತೇನೆ" ಎಂದು ಸಮಾಧಾನ ಹೇಳಿದನು.

ದುರ್ಯೋಧನನು ಆ ಸ್ಥಿತಿಗೆ ಬಂದು ಬಳಲಿ ತಪಿಸುತ್ತಿದ್ದರೂ ಕ್ರುದ್ಧನಾದ ಬಲರಾಮನನ್ನು ಅನುಸರಿಸಿ ಬಂದನು. ಬಿಸಿರಕ್ತದಿಂದ ನೆನೆದ ಅವನ ಮೈ ಯುದ್ಧಚಂದನವನ್ನು ಪೂಸಿದಂತೆ ರಂಜಿಸುತ್ತಿತ್ತು. ನೆಲದ ದೂಳು ಮೆತ್ತಿ ಅವನ ತೋಳು ಸ್ವಲ್ಪ ಕೆಂಪಾಗಿತ್ತು. ಕೌರವನು ಮತ್ತೊಮ್ಮೆ ಮಕ್ಕಳಾಟವಾಡುವನೋ ಎಂಬಂತೆ ತೆವಳಿಕೊಂಡು ಬಂದನು. ಹಿಂದೆ ದೇವಾಸುರರು ಕಡಲನ್ನು ಕಡೆದ ಬಳಿಕ, ಮಂದರಕ್ಕೆ ಸುತ್ತಿದ್ದ ವಾಸುಕಿಯನ್ನು ಬಿಚ್ಚಿಕಳುಹಿಸಿ

ದಾಗ, ಆ ವಾಸುಕಿಯು ತನ್ನ ಹೆಡೆಗಳ ಗುಂಪನ್ನು ಎಳೆದುಕೊಂಡು ಬಲು ಬಳಲಿಕೆಯಿಂದ ಸಾಗರವನ್ನು ಬಿಟ್ಟುಬಂದ ಹಾಗೆ ತೊಡೆ ಯುಡಿದ ಕುರುರಾಜನು ಹಲಧರನ ಬಳಿಗೆ ಬಂದನು.

ಭೀಮನು ಗದಾಯುದ್ಧದ ಮರ್ಯಾದೆಯನ್ನು ಮೀರಿ ತನ್ನ ತೊಡೆಯನ್ನು ಮುರಿದುದರಿಂದ ಅರೆಜೀವಗೊಂಡ ದುರ್ಯೋಧನನು ಕೈಯೂರಿ, ತೋಳಿನ ಬಲದಿಂದ ದೇಹವನ್ನು ಎಳೆಯುತ್ತ ಬಂದು, "ಬಲದೇವರೆ, ಈ ರೋಷವನ್ನು ಬಿಟ್ಟುಬಿಡಿ. ನಿಮ್ಮ ಪಾದಗಳಲ್ಲಿ ತಲೆಯಿಟ್ಟು ಬೇಡುತ್ತೇನೆ. ಕುರುಕುಲದವರಿಗೆ ತಿಲಾಂಜಲಿಯನ್ನು ಕೊಡುವ ಮುಗಿಲುಗಳ ಹಾಗಿರುವ ಆ ಪಾಂಡವರು ಬದುಕಿರಲಿ. ಇಂದಿಗೆ ವೈರ ಮುಗಿಯಿತು, ಇಂದಿಗೆ ಯುದ್ಧ ಮುಗಿಯಿತು ; ಇಂದಿಗೆ ನನ್ನ ಬದುಕು ಮುಗಿಯಿತು" ಎಂದು ಬೇಡಿ ಕೊಂಡನು.

ಆದರೆ ಹಲಮುಸಲಪಾಣಿಯಾದ ಆ ಬಲರಾಮನ ಕೋಪ ಬೇಗ ಆರದು. "ಈ ನೇಗಿಲಿನ ಮೊನೆಯಿಂದ ಆ ಪಾಂಡವರ ಮೈಯನ್ನು ಕೊರೆದು ಕೊರೆಯುತ್ತೇನೆ. ಈ ಒನಕೆಯ ಏಟು ಗಳಿಂದ ಅವರ ಎದೆ ಭುಜಗಳನ್ನು ಅರೆದು ಅರೆಯುತ್ತೇನೆ. ನೀನು ಸ್ವರ್ಗಕ್ಕೆ ಹೋಗುವಾಗ ನಿನಗೆ ಅನುಚರರಾಗಿ ಅವರೂ ಬರಲಿ" ಎಂದನು.

ಆದರೆ "ಭೀಮನು ತನ್ನ ಪ್ರತಿಜ್ಞೆಯನ್ನು ನೆರವೇರಿಸಿ ಕೊಂಡನು. ನನ್ನ ನೂರು ಜನ ತಮ್ಮಂದಿರೂ ಸತ್ತರು. ನಾನೂ ಹೀಗಾದೆ. ಇನ್ನು ಯುದ್ಧದಿಂದ ಏನು ಫಲ?" ಎಂದು ದುರ್ಯೋ ಧನನು ಬಲರಾಮನ ಮಾತನ್ನು ಒಪ್ಪಲಿಲ್ಲ.

"ನನ್ನ ಕಣ್ಣೆದುರಿನಲ್ಲಿಯೇ ಇಂತಹ ಮೋಸ ನಡೆಯಿ ತಲ್ಲಾ !" ಎಂದು ಬಲರಾಮನ ರೋಷ ಆರಲಿಲ್ಲ.

ಅದಕ್ಕೆ ದುರ್ಯೋಧನನು "ಇಲ್ಲ, ಮೋಸವಾಗಲಿಲ್ಲ. ನಾನು ನನ್ನ ಛಲವನ್ನು ತೀರಿಸಿಕೊಂಡಿದ್ದೇನೆ. ನನ್ನ ಬದುಕು ಸಾರ್ಥಕ ವಾಗಿದೆ. ಆ ದಿನ ಅರಗಿನ ಮನೆಯ ಉರಿಯಿಂದ ಬದುಕಿಬಂದಂದಿ ನಿಂದ ಭೀಮನು ತನ್ನ ಬುದ್ಧಿಬಲವೆಲ್ಲವನ್ನೂ ಪ್ರಯೋಗಿಸಿ ಜೀವ ವುಳಿಸಿಕೊಳ್ಳುವುದಕ್ಕಾಗಿ ಯುದ್ಧಮಾಡಬೇಕಾಯಿತು. ಕಾಡಿನಲ್ಲಿ ಹಿಡಿಂಬನೊಡನೆ ಕಾದಾಡಿ ಅವನನ್ನು ಕೊಂದ ಭೀಮನಿಗೆ ನಾನು ಈ ದಿನ ಸೋತೆನೆಂಬುದು ಸರ್ವಥಾ ಅಲ್ಲ" ಎಂದು ಹೇಳಿದರೂ "ಭೀಮನು ಇವನನ್ನು ವಂಚನೆಯಿಂದ ಸೋಲಿಸಿ ಇನ್ನೂ ಬದುಕಿ ರುವನಲ್ಲಾ!" ಎಂದು ಬಲರಾಮನ ಮನಸ್ಸು ಕುದಿಯುತ್ತಿತ್ತು.

ಆಗ ದುರ್ಯೋಧನನು "ನಾನು ಈ ಸ್ಥಿತಿಗೆ ಬರುವುದಕ್ಕೆ ಭೀಮನು ಕಾರಣನಲ್ಲ. ಇದು ಭೀಮನ ವಂಚನೆಯಲ್ಲ. ಯಾವನು ಪಾರಿಜಾತಪುಷ್ಪವನ್ನು ತಂದು ದೇವೇಂದ್ರನ ಹೆಮ್ಮೆಯನ್ನು ಮುರಿ ದನೋ, ಯಾವನು ಸಾವಿರ ದೇವವರುಷಗಳ ಕಾಲ ಸಾಗರದ ನೀರಿನ ನಡುವೆ ಯೋಗನಿದ್ರೆ ಮಾಡಿದನೋ, ಆ ಸರ್ವಲೋಕ ಪ್ರಿಯನಾದ ಶ್ರೀಹರಿಯು ಯುದ್ಧದಲ್ಲಿ ತನಗಿರುವ ಅವ್ಯಾಜವಾದ ಪ್ರೀತಿಯಿಂದ ಆ ಭೀಮನ ಗದೆಯಲ್ಲಿ ಬಂದು ಅಡಗಿ, ಇಂದು ನನ್ನನ್ನು ಮೃತ್ಯುವಿಗೆ ಒಪ್ಪಿಸಿಕೊಟ್ಟಿರುವನು" ಎಂದನು.

§ ೪

ಆಗ ಧೃತರಾಷ್ಟ್ರನೂ ಗಾಂಧಾರಿಯೂ ಅಂತಃಪುರದ ಸ್ತ್ರೀಯರೂ ದುರ್ಯೋಧನನನ್ನು ಹುಡುಕುತ್ತಾ ಆ ರಣಭೂಮಿಗೆ ಬಂದರು. ದುರ್ಯೋಧನನ ಸಣ್ಣಮಗನಾದ ದುರ್ಜಯನು ಅವರಿಗೆ ದಾರಿ ತೋರಿಸುತ್ತ ಅವರನ್ನು ಕರೆದುತಂದನು.

"ಹುಟ್ಟುಕುರುಡನಾದ ನನಗೆ ನನ್ನ ನೂರು ಜನ ಮಕ್ಕಳೇ ಕಣ್ಣಾಗಿದ್ದರು. ಉಳಿದ ಒಬ್ಬ ಮಗನೂ ಈ ದಿನ ವಂಚನೆಗೆ

ಬಲಿಯಾಗಿ ಬಿದ್ದನೆಂಬುದನ್ನು ಕೇಳಿ, ಕಣ್ಣಿನಲ್ಲಿ ನೀರು ತುಂಬಿ, ನನ್ನ ಹುಟ್ಟುಕುರುಡು ಎರಡರಷ್ಟಾಯಿತು" ಎಂದು ಧೃತರಾಷ್ಟ್ರನು "ಎಲ್ಲಿರುವೆ, ಮಗು?" ಎಂದು ಅರಸುತ್ತ ಕೂಗಿದನು.

"ಮಂದಭಾಗ್ಯೆಯಾದ ನಾನು ಇನ್ನೂ ಬದುಕಿರುವೆನಲ್ಲಾ" ಎಂದು ದುಃಖಿಸುತ್ತ, ಗಾಂಧಾರಿ "ಎಲ್ಲಿರುವೆ, ಮಗು?" ಎಂದು ಅರಸುತ್ತ ಕೂಗಿದಳು.

ದುರ್ಯೋಧನನ ಹೆಂಡಿರು ತಲೆ ಕೆದರಿಕೊಂಡು ಅಳುತ್ತಾ "ಎಲ್ಲಿರುವೆ, ಮಹಾರಾಜ?" ಎಂದು ಆಕ್ರಂದನ ಮಾಡುತ್ತಿದ್ದರು.

ಗದಾಘಾತದ ನೋವನ್ನು ಕೂಡ ಲಕ್ಷಿಸದಿದ್ದ ದುರ್ಯೋಧನನಿಗೆ ತನ್ನ ರಾಣಿಯರ ಇರವನ್ನು ಕಂಡಾಗ ನೋವೆಂದರೇನು ಎಂಬುದರ ಮೊದಲ ಅನುಭವವಾಯಿತು.

"ಮಾನಿಗಳೂ ವೀರರೂ ಧೀರರೂ ಪರಾಕ್ರಮಿಗಳೂ ಆದ ನೂರು ಜನ ಮಕ್ಕಳನ್ನು ಪಡೆದರೂ ಆ ಮಕ್ಕಳು ಕೈಯೆತ್ತಿ ಕೊಡುವ ತರ್ಪಣಜಲವನ್ನು ಸವಿಯುವ ಪುಣ್ಯ ನನಗೆ ಇಲ್ಲದೆ ಹೋಯಿತಲ್ಲಾ!" ಎಂದು ಧೃತರಾಷ್ಟ್ರನು ಹಲುಬಿದನು.

"ಮಕ್ಕಳು ಮೊಮ್ಮಕ್ಕಳುಗಳ ಮುಖವನ್ನು ನೋಡುವ ಆಸೆಯನ್ನು ತೊರೆದು, ಪತಿಯನ್ನು ಅನುಸರಿಸಿ ಕಣ್ಣಿಗೆ ಬಟ್ಟೆ ಕಟ್ಟಿಕೊಂಡಿರುವ ಈ ಗಾಂಧಾರಿಯು ಮಗನನ್ನು ಕಾಣದೆ ವ್ಯಥೆಪಡುವಳಲ್ಲಾ! ಅತ್ತೂ ಅತ್ತೂ ಇವಳ ಕಣ್ಣುಪಟ್ಟಿ ನೆನೆದುಹೋಗಿದೆಯಲ್ಲಾ! ಏನು ಮಾಡಲಿ?" ಎಂದು ಬಲದೇವನು ನಿಂತಲ್ಲಿಯೆ ಕಳವಳಿಸಿದನು.

ಧೃತರಾಷ್ಟ್ರನು ಮಗನನ್ನು ಹುಡುಕುತ್ತಾ "ಅಷ್ಟಾದಶ ಅಕ್ಷೋಹಿಣೀಪತಿಯೆ" ಎಂದು ಕರೆದಾಗ, ತಂದೆ ತನ್ನನ್ನು ಕೀರ್ತಿಸಿದನೆಂದು ದುರ್ಯೋಧನನು ಹಿಗ್ಗಿದನು; "ನನ್ನ ನೂರು ಜನ

ಮಕ್ಕಳಲ್ಲಿ ನೀನು ಹಿರಿಯನು" ಎಂದು ಕರೆದಾಗ "ಆ ನೂರು ಜನರೂ ನನಗಿಂತ ಮೊದಲೇ ನಾಶವಾಗಿ, ನಾನೊಬ್ಬನು ಉಳಿದೆ ನಲ್ಲಾ" ಎಂದು ನಾಚಿದನು; "ನಮಸ್ಕರಿಸು, ಬಾ, ಮಗು" ಎಂದು ಕರೆದಾಗ, ವಿಧೇಯನಾದ ಆ ದುರ್ಯೋಧನನು ಏಳಲು ಪ್ರಯತ್ನಿಸಿ, ನಿಲ್ಲಲಾರದೆ ಬಿದ್ದನು. "ಭೀಮನು ನನ್ನ ತೊಡೆಗಳಿಗೆ ಹೊಡೆದದ್ದು ಮೊದಲ ಪೆಟ್ಟು. ತಾಯಿತಂದೆಯರಿಗೆ ನಮಸ್ಕಾರ ಮಾಡುವ ಶಕ್ತಿಯನ್ನು ನೀಗಿಕೊಂಡದ್ದು, ಇದು ಎರಡನೆಯ ಪೆಟ್ಟು" ಎಂದು ಅವನು ಬಹುವಾಗಿ ನೊಂದನು.

ಪುನಃ ಎಲ್ಲರೂ ದುರ್ಯೋಧನನನ್ನು ಅರಸುತ್ತ ಮುಂದೆ ಹೋದರು. ಮಗುವಾದ ದುರ್ಜಯನಿಗೆ ಯುದ್ಧಭೂಮಿಯಲ್ಲಿ ನಡೆದು ನಡೆದು ದಣಿವಾಗಿದ್ದರೂ, "ಹೋಗು ಮಗು, ತಂದೆಯ ತೊಡೆಯ ಮೇಲೆ ವಿಶ್ರಮಿಸಿಕೊಳ್ಳುವೆಯಂತೆ" ಎಂದು ಧೃತ ರಾಷ್ಟ್ರನು ಆ ಮಗುವನ್ನು ಪ್ರೋತ್ಸಾಹಿಸಿದನು.

ಮಗುವು ತನ್ನನ್ನು ಅರಸುತ್ತಾ ಬಂದ ಕೂಗು ದುರ್ಯೋಧನನಿಗೆ ಕೇಳಿಸಿತು. "ದುಃಖವೆಂದರೆ ಏನೆಂಬುದನ್ನು ಅರಿಯದ ಈ ಹಸುಳೆ, ನನ್ನ ತೊಡೆಯಲ್ಲಿ ಮಲಗಿ ನಿದ್ರಿಸುವ ಈ ಕಂದ, ಈಗ ನಾನು ಹೀಗೆ ಸೋತು ಬಿದ್ದಿರುವುದನ್ನು ಕಂಡು ಏನೆಂದುಕೊಳ್ಳುವನೋ" ಎಂದು ದುರ್ಯೋಧನನ ಹೃದಯವು ಪುತ್ರಸ್ನೇಹದಿಂದ ತಪಿಸಿತು.

ದುರ್ಜಯನು ಮಹಾರಾಜನನ್ನು ಕಂಡನು. "ನೀನು ಇಷ್ಟು ತಡಮಾಡಿದ್ದರಿಂದ ನಾನೇ ಇಲ್ಲಿಗೆ ಬಂದೆ" ಎಂದು ಹೇಳುತ್ತಾ ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳುವುದಕ್ಕೆ ಹೋದನು. ದುರ್ಯೋಧನನು ಆ ಮಗು ತನ್ನ ತೊಡೆಯನ್ನು ಏರದಂತೆ ತಡೆದು, "ಹೃದಯಕ್ಕೆ ಆನಂದವನ್ನೂ ಕಣ್ಣುಗಳಿಗೆ ಉತ್ಸವವನ್ನೂ ಉಂಟು ಮಾಡುತ್ತಿದ್ದ ಈ ಕಂದಚಂದಿರನು ಕಾಲ ಬದಲಾದುದರಿಂದ ನನ್ನ

ಪಾಲಿಗೆ ಬೆಂಕಿಯಂತಾಗಿರುವನಲ್ಲಾ" ಎಂದು ಪರಮದಾರುಣವಾದ ವೇದನೆಯನ್ನು ಅನುಭವಿಸಿದನು.

ದುರ್ಯೋಧನನ ವೇದನೆ, ಪಾಪ, ಆ ಮಗುವಿಗೆ ಹೇಗೆ ತಿಳಿಯ ಬೇಕು! "ಏಕೆ ತಡೆಯುತ್ತೀಯೆ, ಅಪ್ಪ? ನಾನು ನಿನ್ನ ತೊಡೆಯ ಮೇಲೆ ಕುಳ್ಳಿರಬಾರದೆ?" ಎಂದು ದುರ್ಜಯನೆಂದನು.

"ಇದುವರೆಗೆ ನೀನು ಕುಳಿತು ಅಭ್ಯಾಸವಾಗಿದ್ದ ಈ ಆಸನ ವನ್ನು ಮರೆತುಬಿಡು, ಮಗು. ಇನ್ನು ಮುಂದೆ ನೀನು ಈ ನನ್ನ ತೊಡೆಯೆಂಬ ಪೀಠದಲ್ಲಿ ಕುಳಿತುಕೊಳ್ಳುವಹಾಗಿಲ್ಲ. ಬೇರೆ ಎಲ್ಲಿ ದೊರೆತರೆ, ಅಲ್ಲಿ ಕುಳಿತುಕೊ" ಎಂದು ದುರ್ಯೋಧನನೆಂದನು.

"ಹಾಗಾದರೆ, ನೀನು ಎಲ್ಲಿಗೆ ಹೋಗುವೆ, ಮಹಾರಾಜ?"

"ನನ್ನ ನೂರುಜನ ತಮ್ಮಂದಿರು ಎಲ್ಲಿಗೆ ಹೋದರೋ ಅಲ್ಲಿಗೆ."

"ಹಾಗಾದರೆ, ನನ್ನನ್ನೂ ಅಲ್ಲಿಗೆ ಕರೆದುಕೊಂಡು ಹೋಗು."

ಅರಿಯದ ಹಸುಳೆಯ ಮುಗ್ಧವಾದ ಮಾತುಗಳನ್ನು ಕೇಳಿ, ದುರ್ಯೋಧನನು ಗದ್ಗದಸ್ವರದಿಂದ "ನೀನು ನನ್ನೊಡನೆ ಬರಬೇಕಾ ದರೆ, ಹೋಗಿ, ಭೀಮನನ್ನು ಕೇಳು, ಮಗು" ಎಂದನು.

ದುರ್ಜಯನಿಗೆ ಅರಸನ ಮಾತು ಅರ್ಥವಾಗಲಿಲ್ಲ. ಆಗ ಅವನು ಬೇರೆ ಮಾತೆತ್ತಿ, "ಅಜ್ಜ, ಅಜ್ಜಿ, ಅಮ್ಮ ಎಲ್ಲರೂ ನಿನ್ನನ್ನು ಹುಡುಕುತ್ತಿದ್ದಾರೆ" ಎಂದನು.

"ನಾನು ಬರಲಾರೆ. ನೀನು ಹೋಗು, ಮಗು."

"ನಾನು ನಿನ್ನನ್ನು ಎತ್ತಿಕೊಂಡು ಹೋಗುತ್ತೇನೆ."

"ನೀನು ಇನ್ನೂ ಚಿಕ್ಕವನು, ಮಗು."

ಆಗ ದುರ್ಜಯನು ಮುಂದೆ ಹೋಗಿ, "ಮಹಾರಾಜನು ಇಲ್ಲಿ ಇದ್ದಾನೆ. ನೆಲದ ಮೇಲೆ ಕುಳಿತಿದ್ದಾನೆ" ಎಂದು ಧೃತರಾಷ್ಟ್ರನನ್ನು ಕರೆದುತಂದನು.

"ಚಿನ್ನದ ಕಂಬದಂತೆ ಉನ್ನತನಾಗಿ, ಸಮುಸ್ತಭೂಮಿಗೂ ಚಕ್ರವರ್ತಿಯೆನ್ನಿಸಿ ಬಾಳಿದ ನನ್ನ ಮಗನು ನೆಲಕ್ಕೆ ಉರುಳಿದನಲ್ಲಾ! ಬಾಗಿಲಿನ ಅಗುಳಿಯಲ್ಲಿ ಅರ್ಧ ಮುರಿದಂತೆ ಬಿದ್ದಿರುವನಲ್ಲಾ!" ಎಂದು ದುರ್ಯೋಧನನು ಮಗನ ಇರವಿಗೆ ದುಃಖಿಸಿದನು.

ಗಾಂಧಾರಿ "ತುಂಬ ಬಳಲಿಕೆಯಾಗಿದೆಯೆ, ಮಗು ?" ಎಂದು ಕೇಳಿದಳು. "ಕಷ್ಟಸಹಿಷ್ಣುವಾದ ನಿನ್ನ ಮಗನಲ್ಲವೆ ನಾನು? ನನಗೆ ಬಳಲಿಕೆಯುಂಟೆ?" ಎಂದು ದುರ್ಯೋಧನನು ತಾಯನ್ನು ಸಂತೈಸಿದನು. ಭಯವೆಂದರೇನೆಂಬುದನ್ನೇ ಕಾಣದ ಮಕ್ಕಳನ್ನು ತಾನು ಪಡೆದೆನೆಂದು ಗಾಂಧಾರಿ ಅಭಿಮಾನಗೊಂಡಳು.

ದುರ್ಯೋಧನನು ತನ್ನ ತಂದೆಯನ್ನು ಕುರಿತು "ನನಗಾಗಿ ನೀವು ಶೋಕಪಡಬೇಡಿ. ನಿಮಗೆ ಬಾಗಿದ ಈ ಶಿರಸ್ಸನ್ನು ಬೇರೆ ಯಾರಿಗೂ ಬಾಗಿಸದೆ, ಮಾನದಿಂದ ನಾನು ಬಾಳಿದ್ದೇನೆ. ಯುದ್ಧದಲ್ಲಿ ಬೆನ್ನು ತೋರಿಸದೆ ಮಡಿದಿದ್ದೇನೆ. ಹುಟ್ಟಿದಾಗ ಯಾವ ಮಾನದೊಡನೆ ಹುಟ್ಟಿದೆನೋ ಅದೇ ಮಾನದಿಂದ ಇಂದು ನಾನು ಸ್ವರ್ಗಕ್ಕೆ ಹೋಗುತ್ತೇನೆ" ಎಂದು ಅವನನ್ನು ಸಂತೈಸಿದನು.

ಧೃತರಾಷ್ಟ್ರನಾದರೋ ಹುಟ್ಟುವಾಗಲೆ ಕಣ್ಣುಮುಚ್ಚಿ ಹುಟ್ಟಿದವನು. ಈಗಂತೂ ಮುಪ್ಪು ಅಧಿಕವಾಗಿದೆ. ದುಸ್ಸಹವಾದ ಪುತ್ರಶೋಕವು ಬೆಂಕಿಯಂತೆ ಅವನ ಎದೆಯನ್ನು ಸುಡುತ್ತಿದೆ, ಅವನ ಧೈರ್ಯವನ್ನು ನಾಶಮಾಡುತ್ತಿದೆ. "ಇಂಥ ಧೃತರಾಷ್ಟ್ರನಿಗೆ ನಾನು ಏನೆಂದು ಮುಖತೋರಲಿ!" ಎಂದು ಬಲದೇವನು ಕೊರಗಿದನು.

ಅನಂತರ ದುರ್ಯೋಧನನು ತನ್ನ ತಾಯನ್ನು ಕುರಿತು "ಅಮ್ಮಾ, ನಾನು ಪುಣ್ಯವನ್ನು ಏನಾದರೂ ಮಾಡಿದ್ದರೆ, ಅದರ ಫಲವಾಗಿ ನನಗೆ ಜನ್ಮಜನ್ಮಕ್ಕೂ ನೀನೇ ತಾಯಿಯಾಗು" ಎಂದು ನಮಸ್ಕರಿಸಿ ವಿಜ್ಞಾಪಿಸಿಕೊಂಡನು. "ನನ್ನ ಮನಸ್ಸಿನಲ್ಲಿದ್ದ ಅಪೇಕ್ಷೆಯನ್ನೇ ನೀನೂ

ಹೇಳಿದೆ, ಮಗು" ಎಂದು ಗಾಂಧಾರಿ ಮಗನ ಮಾತನ್ನು ಅನುಮೋದಿಸಿದಳು.

ಆ ಬಳಿಕ ದುರ್ಯೋಧನನು ಮಾಲವಿ, ಪೌರವಿ ಎಂಬ ತನ್ನ ಪತ್ನಿಯರನ್ನು ಕುರಿತು, "ಗದೆಯ ಘಾತಗಳನ್ನು ತಡೆದು ನನ್ನ ಹಣೆ ಒಡೆದು ಚೂರಾಗಿದೆ. ಎದೆಯಲ್ಲಿ ಬಿದ್ದ ಗದೆಯ ಪ್ರಹಾರಗಳಿಂದ ರಕ್ತವು ಪ್ರವಹಿಸಿ ಹಾರಗಳಿಗೆ ಎಡೆಯಿಲ್ಲದಾಗಿದೆ. ಈ ನನ್ನ ಭುಜಗಳಲ್ಲಿ ಗದೆಯ ಗಾಯಗಳು ಚಿನ್ನದ ಬಾಹುಬಂಧಗಳಂತೆ ಕಂಗೊಳಿಸುತ್ತಿವೆ. ನಾನು ಯುದ್ಧದಲ್ಲಿ ಬೆನ್ನು ತಿರುಗಿಸದೆ ಕಾದಾಡಿ ಮಡಿದಿದ್ದೇನೆ. ಆದ್ದರಿಂದ ನನಗಾಗಿ ಕಣ್ಣೀರಿಡಬೇಡಿ. ಅದೂ ಅಲ್ಲದೆ, ಮಾಡಬೇಕಾದ ವಿಧವಿಧವಾದ ಯಜ್ಞಗಳನ್ನು ವೇದೋಕ್ತ ಕ್ರಮದಿಂದ ನಾನು ಇಷ್ಟಪಟ್ಟು ಮಾಡಿದ್ದೇನೆ. ಬಾಂಧವರನ್ನು ಕಾಪಾಡಿದ್ದೇನೆ. ಶತ್ರುಗಳನ್ನು ಶಿಕ್ಷಿಸಿ, ಆಶ್ರಿತರನ್ನು ರಕ್ಷಿಸಿ, ಅವರ ಅಭೀಷ್ಟಗಳನ್ನು ಸಲ್ಲಿಸಿದ್ದೇನೆ. ಯುದ್ಧದಲ್ಲಿ ಹದಿನೆಂಟು ಅಕ್ಷೋಹಿಣೀನಾಯಕರೆಲ್ಲರನ್ನೂ ದಣಿಸಿ ಬಳಲಿಸಿದ್ದೇನೆ. ಇಂಥಾ ನನ್ನನ್ನು ಕಂಡು ಅಳುವುದು ಉಚಿತವೆ ?" ಎಂದು ಸಂತೈಸಿದನು. ಅವರು ತಮ್ಮ ದುಃಖವನ್ನು ಅಡಗಿಸಿಕೊಂಡು ಸಹಗಮನವನ್ನು ನಿಶ್ಚಯಿಸಿಕೊಂಡರು.

ಕಡೆಗೆ ದುರ್ಯೋಧನನು ಮಗನಾದ ದುರ್ಜಯನನ್ನು ಕುರಿತು "ಮಗು, ಪಾಂಡವರನ್ನು ನನ್ನ ಹಾಗೆಂದೇ ತಿಳಿದು ಅವರ ಶುಶ್ರೂಷೆ ಮಾಡು. ತಾಯಿಯಾದ ಕುಂತಿಯ ಅಪ್ಪಣೆಯಂತೆ ನಡೆದುಕೊ. ಅಭಿಮನ್ಯುವಿನ ತಾಯಿಯಾದ ಸುಭದ್ರೆಯನ್ನೂ ದ್ರೌಪದಿಯನ್ನೂ ನಿನ್ನ ತಾಯಿಯರೆಂದು ತಿಳಿದು ಪೂಜಿಸು. ನೋಡು ಮಗು, 'ನನ್ನ ತಂದೆಯಾದ ದುರ್ಯೋಧನನ ಹೃದಯವು ಅಭಿಮಾನದಿಂದ ಬೆಳಗುತ್ತಿತ್ತು. ಶ್ಲಾಘ್ಯನಾದ ಅವನು ಯುದ್ಧ



ದುರ್ಯೋಧನನು ಮಗನಿಗೆ ಬೋಧಿಸಿದನು

ದಲ್ಲಿ ಸಮಾನಬಲನಾದವನೊಡನೆ ಕಾಳಗ ಮಾಡುತ್ತ ಮಡಿದನು' ಎಂಬುದನ್ನು ನೆನೆದು, ದುಃಖಪಡದೆ ಇರು. ನಾನು ಸತ್ತ ಮೇಲೆ ಪಾಂಡವರು ನನಗೆ ತರ್ಪಣವನ್ನು ಕೊಡುವಾಗ ನೀನು ಯುಧಿಷ್ಠಿರನ ಹತ್ತಿರ ಹೋಗು. ಅವನ ಆ ಮಹಾಭುಜದ ಒತ್ತಿನಲ್ಲಿ ಮೈಗೆ ಮೈ ಸೋಕಿಸಿ ಕುಳಿತು, ನೀನೂ ನನಗೆ ತರ್ಪಣದ ಜಲವನ್ನು ನೀಡು" ಎಂದು ಬೋಧಿಸಿದನು.

ದುರ್ಯೋಧನನಿಗೆ ಅದುವರೆಗೂ ಪಾಂಡವರ ಮೇಲಿದ್ದ ವೈರವು ಈಗ ಒಮ್ಮೆಗೇ ಪಶ್ಚಾತ್ತಾಪವಾಗಿ ಪರಿಣಮಿಸಿದುದನ್ನು ಕಂಡು ಬಲದೇವನು ವಿಸ್ಮಿತನಾದನು.

§ ೫

ಆಗ ಸನ್ನಾಹದುಂದುಭಿಯ ಸದ್ದು ಅಡಗಿ ಮೌನವಾಗಿದ್ದ ಆ ರಣರಂಗದಲ್ಲಿ, ಗುರುಪುತ್ರನಾದ ಅಶ್ವತ್ಥಾಮನು ತನ್ನ ಬಿಲ್ಲಿನ ಹೆದೆಯನ್ನು ಮಿಡಿದು ಶಬ್ದಮಾಡುತ್ತ, ಹದ್ದುಗಳ ಗುಂಪುಗಳನ್ನು ಆಕಾಶಕ್ಕೆ ಹಾರಿಸುತ್ತ ಬಂದನು. ಅರಳಿದ ತಾವರೆಯೆಸಳಿನಂತೆ ವಿಶಾಲವಾದ ಕಣ್ಣುಳ್ಳ ಆ ಗುರುಪುತ್ರನು ಚಿನ್ನದ ಯೂಪಸ್ತಂಭವನ್ನೂ ತಿರಸ್ಕರಿಸುವ ತನ್ನ ಉದ್ದವಾದ ತೋಳಿನಲ್ಲಿ ಉಗ್ರವಾದ ಕಾರ್ಮುಕವೊಂದನ್ನು ರಭಸದಿಂದ ಎಳೆದು ಬರುತ್ತಿದ್ದರೆ, ಕಾಡುಕಿಚ್ಚು ಹತ್ತಿ ಉರಿಯುತ್ತಿರುವ ಮೇರುವಿನ ಕೋಡಿನಲ್ಲಿ ಮಳೆಬಿಲ್ಲು ನಿಂತ ಹಾಗೆ ಕಾಣಿಸುತ್ತಿತ್ತು.

ಮೊದಲು ದುರ್ಯೋಧನನು ಬಿಲ್ಲಿಗೆ ಹೆದೆಯೇರಿಸಿ ಯುದ್ಧಕ್ಕೆ ತೊಡಗಿದಾಗ ಅಶ್ವತ್ಥಾಮನೂ ಅವನನ್ನು ಕೂಡಿದನು. ಆದರೆ ನಡುವೆ ತಂದೆಯಾದ ದ್ರೋಣನು ಮಡಿದಾಗ ಅವನಿಗೆ ತರ್ಪಣ ಕೊಡಲು ತೊಡಗಿ ಉಳಿದುದೆಲ್ಲವನ್ನೂ ಮರೆತ ಸಮಯದಲ್ಲಿ ಭೀಮನು ದುರ್ಯೋಧನನನ್ನು ವಂಚನೆಯಿಂದ ಕೊಂದನು. "ಯಾವಾ

ತನಿಗೆ ಹನ್ನೊಂದು ಅಕ್ಷೋಹಿಣಿಯ ರಾಜರೂ ಆನೆ ಕುದುರೆ ತೇರುಗಳನ್ನೇರಿ, ಬಿಲ್ಲು ಬಾಣಗಳನ್ನು ಹಿಡಿದು ಕೈಮುಗಿದು ಆಜ್ಞಾಧಾರಕರಾಗಿದ್ದರೋ; ಯಾವನಿಗೆ ಪರಶುರಾಮನಂಥವನೊಡನೆ ಸೆಣಸಿದ ಭೀಷ್ಮನೂ ಆಚಾರ್ಯನಾದ ದ್ರೋಣನೂ ಭಟರಾಗಿ ಸೇರಿದ್ದರೋ; ಯಾವನು ತಾನೇ ಅಧಿರಥನಾಗಿ ಇಷ್ಟು ಸಂಪತ್ತನ್ನು ಪಡೆದಿದ್ದನೋ; ಅಂತಹ ಕುರುರಾಜನಿಗೆ ಇಂದು ಸೋಲಾದುದು ಇದು ಕಾಲದ ಮಹಿಮೆ" ಎಂದು ವ್ಯಸನಪಡುತ್ತ ಅಶ್ವತ್ಥಾಮನು ದುರ್ಯೋಧನನನ್ನು ಹುಡುಕಿಕೊಂಡು ಬಂದನು.

"ಯುದ್ಧದಲ್ಲಿ ವಿಜಯ ದೊರೆತರೆ, ನಾಲ್ಕು ಜನರ ಶ್ಲಾಘನೆಗೆ ಪಾತ್ರವಾಗಬೇಕು. ಮೋಸದಿಂದ ದುರ್ಯೋಧನನ ತೊಡೆಯೊಡೆದುದು ಯುಕ್ತವಲ್ಲ. ಇದೋ, ದ್ರೋಣಸುತನಾದ ನಾನು ಬಂದಿದ್ದೇನೆ, ಕಾದುವವರು ಬನ್ನಿ. ನಾನು ಕುರುರಾಜನ ಹಾಗೆ ಛಲ ಕುಂದಿ ಬಲ ಕುಂದಿ ತೊಡೆ ಮುರಿದು ಬಿದ್ದವನಲ್ಲ, ಕರ್ಣನ ಹಾಗೆ ಶಸ್ತ್ರಾಸ್ತ್ರಗಳೆಲ್ಲ ವಿಫಲವಾಗಲು ಬಳಲಿ ಕುಸಿದವನೂ ಅಲ್ಲ. ಬಿಲ್ಲು ಹಿಡಿದು ಬಂದಿದ್ದೇನೆ. ಒಬ್ಬನೇ ಕಾದುತ್ತೇನೆ, ಒಬ್ಬನೇ ಕಾದಿ ಜಯವನ್ನು ಸಾಧಿಸುತ್ತೇನೆ" ಎಂದು ಕೂಗುತ್ತ ಬಂದನು.

ಹೀಗೆ ಬಂದ ಅಶ್ವತ್ಥಾಮನ ಕಣ್ಣಿಗೆ ಸಮರಸಾಗರದ ತೀರವನ್ನು ಸೇರಿದ ಕುರುರಾಜನು ಗೋಚರವಾದನು. ಅವನ ಕಿರೀಟವು ಕೆಳಗುರುಳಿ, ಗಾಳಿಗೆ ಚಲಿಸುತ್ತಿದ್ದ ತಲೆಗೂದಲು ಸುತ್ತಲೂ ಕಿರಣಗಳ ಹಾಗಿತ್ತು. ಗದೆಯ ಗಾಯದ ರಕ್ತದಿಂದ ಮೈ ನೆನೆದು ಕೆಂಪಾಗಿತ್ತು. ಸಂಧ್ಯಾಸಮಯದಲ್ಲಿ ಅಸ್ತಗಿರಿಯ ನೆತ್ತಿಯನ್ನು ಏರಿ ನಿಂತ ಪಶ್ಚಿಮಕಾಲದ ಸೂರ್ಯನಂತೆ ಅಸ್ತಮಿಸುತ್ತಿದ್ದ ಆ ದುರ್ಯೋಧನನ ಸುತ್ತಲೂ ಸತ್ತ ಆನೆ ಕುದುರೆ ಪದಾತಿಗಳೂ ಮುರಿದ ರಥಗಳೂ ಪ್ರಾಕಾರದಂತೆ ಬಿದ್ದಿದ್ದುವು.

"ಕುರುರಾಜ, ಇದೇನಿದು ?" ಎಂದು ಅಶ್ವತ್ಥಾಮನು ಕೆರಳಿದನು.

"ಗುರುಪುತ್ರ, ಇದು ಅಸಂತೃಪ್ತಿಯ ಫಲ" ಎಂಬು ಕುರು ರಾಜನೆಂದನು.

"ಕೇಳು, ಕುರುರಾಜ. ನಿನ್ನ ಈ ಪರಾಭವಕ್ಕೆ ಕಾರಣರಾದವರನ್ನು ನಾನು ನಿರ್ಮೂಲಮಾಡಿಬಿಡುತ್ತೇನೆ. ಆ ಪಾಂಡವರನ್ನು ರಕ್ಷಿಸುವುದಕ್ಕಾಗಿ ಶ್ರೀ ಕೃಷ್ಣನು ತಾನೇ ಗರುಡನ ಮೇಲೇರಿ, ತನ್ನ ನಾಲ್ಕು ತೋಳುಗಳಲ್ಲಿ ಶಾರ್ಙ್ಗ ಚಕ್ರ ಮೊದಲಾದ ಆಯುಧಗಳನ್ನು ಹಿಡಿದು ಬಂದರೂ ಆ ಪಾಂಡವರನ್ನು ಧ್ವಂಸಮಾಡುತ್ತೇನೆ. ಆ ಕೃಷ್ಣನನ್ನೇ ಸಂಹರಿಸುತ್ತೇನೆ. ಬಾಣಗಳಿಂದ ಅವರೆಲ್ಲರನ್ನೂ ಕತ್ತರಿಸಿ, ಮಸಿ ಬಳಿದ ಪಟದ ಹಾಗೆ ಕಲಸಿಬಿಡುತ್ತೇನೆ" ಎಂದು ಯಮಕೋಪದಿಂದ ಉರಿದೆದ್ದನು.

ದುರ್ಯೋಧನನು ಅವನನ್ನು ತಡೆದು, "ಬೇಡ, ಗುರುಪುತ್ರ. ನನ್ನ ಸಹಾಯಕ್ಕೆ ನಿಂತ ರಾಜರುಗಳೆಲ್ಲರೂ ಯುದ್ಧದಲ್ಲಿ ಮಡಿದು, ಭೂಮಿತಾಯಿಯ ತೊಡೆಯಮೇಲೆ ಮಲಗಿವರು. ಕರ್ಣನು ಸ್ವರ್ಗಕ್ಕೆ ಹೋದನು, ಭೀಷ್ಮನು ಭೂಮಿಗೆ ಬಿದ್ದನು. ನನ್ನ ನೂರು ಜನ ತಮ್ಮಂದಿರೂ ಯುದ್ಧದಲ್ಲಿ ಶತ್ರುಗಳೊಡನೆ ಹೋರಾಡಿ, ಈ ಮೊದಲೇ ಮರಣಹೊಂದಿದರು. ಕಡೆಗೆ ನನಗೂ ಈ ಗತಿಯಾಯ್ತು. ಆದ ಕಾರಣ, ನೀನು ಇನ್ನು ಬಿಲ್ಲು ಹಿಡಿಯುವುದು ಬೇಡ. ಈ ವೈರವನ್ನು ಬಿಡು" ಎಂದು ಸಮಾಧಾನವಾಕ್ಯಗಳನ್ನಾಡಿದನು.

ಮೊದಲಿನಿಂದಲೂ ಪಾಂಡವರ ಮೇಲೆ ಛಲವನ್ನು ನಡಸಿಕೊಂಡು ಬಂದವನು ತನ್ನ ಕಡೆಗಾಲದಲ್ಲಿ ಹೀಗೆ ಕ್ಷಮಾಶೀಲನಾದುದನ್ನು ಕಂಡು, ಅಶ್ವತ್ಥಾಮನು "ಏನಿದು? ಗದಾಯುದ್ಧದಲ್ಲಿ ಭೀಮನು

ನಿನ್ನ ತೊಡೆಗಳನ್ನು ಮುರಿದುದರ ಜೊತೆಯಲ್ಲಿಯೇ ನಿನ್ನ ದರ್ಪವನ್ನೂ ಪುಡಿಮಾಡಿಬಿಟ್ಟನೇನು?" ಎಂದು ಹಂಗಿಸಿದನು.

"ಹಾಗಲ್ಲ, ಅಶ್ವತ್ಥಾಮ. ರಾಜನಾದ ನಾನು ಕೇವಲ ಮಾನವನ್ನೇ ಶರೀರವಾಗಿ ಉಳ್ಳವನು. ಆ ಮಾನಕ್ಕೋಸ್ಕರವೇ ನಾನು ಈ ಯುದ್ಧವನ್ನು ಎತ್ತಿಕೊಂಡೆ. ನೋಡು, ಹಿಂದೆ ಜೂಜಾಡಿದಾಗ ದ್ರೌಪದಿಯ ಮುಡಿಯನ್ನು ಹಿಡಿದು ಸಭೆಗೆ ಎಳೆಸಿ ತಂದುದನ್ನು ಜ್ಞಾಪಿಸಿಕೊ. ಅನಂತರ ಬಾಲನೆಂದು ಕೂಡ ಗಮನಿಸದೆ ಆ ಅಭಿಮನ್ಯುವನ್ನು ಕೊಂದದ್ದು ಸ್ಮರಿಸಿಕೊ. ಪಾಂಡವರನ್ನು ಪಗಡೆಯಾಟದಲ್ಲಿ ಸೋಲಿಸಿ, ಅವರನ್ನು ಕಾಡಿಗಟ್ಟಿದುದನ್ನೂ ಅಲ್ಲಿ ಅವರು ಕಾಡುಮೃಗಗಳಂತೆ ಬಾಳಿದುದನ್ನೂ ನೆನಪುಮಾಡಿಕೊ. ಹೀಗೆ, ಹಿಂದೆ ಅವರಿಗೆ ನಾನು ಕೊಟ್ಟ ಕಾಟಗಳೊಡನೆ ಅವರು ಈಗ ನನಗೆ ಮಾಡಿದುದನ್ನು ಹೋಲಿಸಿ ನೋಡಿದರೆ, ಇದು ಅತ್ಯಲ್ಪವೆನ್ನಿಸುತ್ತದೆ. ಆದ್ದರಿಂದ ಅವರನ್ನು ಮನ್ನಿಸುವುದೇ ತಕ್ಕುದು" ಎಂದು ದುರ್ಯೋಧನನು ಎಷ್ಟೇ ವಿಧದಿಂದ ತಿಳುಹಿದರೂ ಅಶ್ವತ್ಥಾಮನ ರೋಷ ಶಾಂತವಾಗಲಿಲ್ಲ.

"ಏನೇ ಆದರೂ ಸರಿಯೆ, ಇದೋ, ಇದು ನನ್ನ ಪ್ರತಿಜ್ಞೆ. ನಿನ್ನಾಣೆ, ನನ್ನಾಣೆ, ವೀರಲೋಕಗಳಾಣೆ. ರಾತ್ರಿಕಾಳಗವನ್ನು ಹೂಡಿ, ಪಾಂಡವರನ್ನು ನಾಶಮಾಡುತ್ತೇನೆ" ಎಂದು ಪ್ರತಿಜ್ಞೆಮಾಡಿದನು.

ಅದುವರೆಗೆ ನಡೆದುದೆಲ್ಲವನ್ನೂ ಮೂಕಸಾಕ್ಷಿಯಾಗಿ ನಿಂತು ನೋಡುತ್ತಿದ್ದ ಬಲರಾಮನು ಅಶ್ವತ್ಥಾಮನ ಘೋರಪ್ರತಿಜ್ಞೆಯನ್ನು ಕೇಳಿ, "ಈ ಗುರುಪುತ್ರನು ಆಡಿದ ಮಾತು ಆಗಿಯೇ ತೀರುವುದು" ಎಂದು ಉಸಿರು ಕರೆದಾಗ ಆತನು ಅಲ್ಲಿದ್ದುದು ಅಶ್ವತ್ಥಾಮನಿಗೂ ಧೃತರಾಷ್ಟ್ರನಿಗೂ ತಿಳಿಯಿತು. "ಪಾಂಡವರನ್ನು ವಂಚನೆಯಿಂದ ಕೊಲ್ಲುವೆನೆಂದು ಪ್ರತಿಜ್ಞೆಮಾಡಿದ ಈ ಗುರುಪುತ್ರನ ಮಾತಿಗೆ ಸಾಕ್ಷಿ ಬೇರೆ ಬೇಕಾಯಿತೆ!" ಎಂದು ಧೃತರಾಷ್ಟ್ರನು ನೊಂದನು.

ಅನಂತರ ಅಶ್ವತ್ಥಾಮನು ಅವರೆಲ್ಲರ ಎದುರಿನಲ್ಲಿ ದುರ್ಯೋಧನನ ಮಗನಾದ ದುರ್ಜಯನನ್ನು ಕರೆದು, “ಮಗು, ನಿನ್ನ ತಂದೆಯು ತನ್ನ ಬಾಹುಬಲದಿಂದ ಸಂಪಾದಿಸಿದ ರಾಜ್ಯಕ್ಕೆ ನೀನೇ ರಾಜನಾಗು. ಯಥಾಕ್ರಮವಾದ ರಾಜ್ಯಾಭಿಷೇಕವು ಇಲ್ಲದಿದ್ದರೂ ವಿಪ್ರನಾದ ನಾನು ಹೇಳುತ್ತೇನೆ: ನೀನು ರಾಜನಾಗು” ಎಂದು ಹರಸಿದನು.

ದುರ್ಯೋಧನನ ಪ್ರಾಣಗಳು ದೇಹವನ್ನು ಬಿಟ್ಟು ಹೊರಡಲು ಸಿದ್ಧವಾದವು. ಶಂತನುವೇ ಮೊದಲಾದ ಅವನ ಪಿತೃಪಿತಾಮಹರೂ ಕರ್ಣನನ್ನು ಮುಂದಿಟ್ಟುಕೊಂಡು ಅವನ ನೂರು ಜನ ತಮ್ಮಂದಿರೂ ಗಗನಮಾರ್ಗದಲ್ಲಿ ಬಂದು ನಿಂತರು. ಕಾಕಪಕ್ಷಧರನಾದ ಅಭಿಮನ್ಯು ತನ್ನ ತಾತನಾದ ಮಹೇಂದ್ರನ ಕೈಹಿಡಿದು ಐರಾವತದ ಮೇಲೆ ಕುಳಿತು ಬಂದು, ದುರ್ಯೋಧನನನ್ನು ಕೋಪದಿಂದ ಮಾತಾಡಿಸಿದನು. ಊರ್ವಶಿಯೇ ಮೊದಲಾದ ಅಪ್ಸರೆಯರು ಅವನ ಸಮೀಪಕ್ಕೆ ಬಂದರು. ಮಹಾಸಮುದ್ರಗಳೂ ಗಂಗಾದಿ ಮಹಾನದಿಗಳೂ ದೇಹವನ್ನು ಧರಿಸಿ ಬಂದವು. ಯಮನು ಸಾವಿರ ಹಂಸಗಳನ್ನು ಹೂಡಿದ ವಿಮಾನವನ್ನು ಅವನಿಗೋಸ್ಕರ ಕಳುಹಿಸಿದನು. ವೀರರನ್ನು ಕರೆದೊಯ್ಯುವ ಆ ವಿಮಾನವನ್ನೇರಿ ದುರ್ಯೋಧನನು ಸ್ವರ್ಗಕ್ಕೆ ಹೋದನು.

ಧೃತರಾಷ್ಟ್ರನಾದರೋ “ಮಕ್ಕಳು ಸತ್ತಮೇಲೆ ರಾಜ್ಯದಿಂದ ಏನು ಫಲ? ಇದನ್ನು ಸುಡಬೇಕು!” ಎಂದು, ಸಜ್ಜನರಿಂದ ಸಮೃದ್ಧವಾಗಿ ತಪಸ್ಸಿಗೆ ಆಶ್ರಯಸ್ಥಾನವಾದ ತಪೋವನಕ್ಕೆ ತೆರಳಿದನು.

ಅಶ್ವತ್ಥಾಮನು ಮಾತ್ರ ಕೈಗಳಲ್ಲಿ ಬಿಲ್ಲುಬಾಣಗಳನ್ನು ಧರಿಸಿ, ಮಲಗಿದ್ದ ಪಾಂಡವರನ್ನು ವಧಿಸುವುದಕ್ಕೋಸ್ಕರ ಅವರ ಪಾಳಯಕ್ಕೆ ನಡೆದನು.

# ವ್ಯಾಸಭಾರತ—ಭಾಸಭಾರತ

## § ೧

ಪಾಂಡವರಿಗೂ ಕೌರವರಿಗೂ ನಡೆದ ಕಲಹದ ಕಥೆಯನ್ನು ಭಗವಾನ್ ವ್ಯಾಸಮಹರ್ಷಿಗಳು ಹದಿನೆಂಟು ಪರ್ವಗಳ ಮಹಾಭಾರತವೆಂಬ ಕಾವ್ಯವಾಗಿ ರಚಿಸಿಕೊಟ್ಟರೆಂಬುದು ಲೋಕಪ್ರಸಿದ್ಧವಾಗಿದೆ. ಆ ಹದಿನೆಂಟು ಪರ್ವಗಳಲ್ಲಿ ಮೊದಲಿನ ಹತ್ತು ಪರ್ವಗಳು ಅನಂತರದ ಎಂಟು ಪರ್ವಗಳಿಗಿಂತ ಹೆಚ್ಚು ಜನಪ್ರಿಯವಾಗಿವೆ. ನಮ್ಮ ಹಿಂದಿನ ಕಾಲದ ಅನೇಕ ಕವಿಗಳು ತಾವು ಕಾವ್ಯಗಳನ್ನು ರಚಿಸುವುದಕ್ಕಾಗಿ ಮಹಾಭಾರತದಿಂದ ವಸ್ತುವನ್ನು ಆಯ್ದು ಎತ್ತಿಕೊಂಡಾಗ ಅವರ ಒಲವು ಕೂಡ ಮೊದಲಿನ ಹತ್ತು ಪರ್ವಗಳ ಕಡೆಗೇ ಇರುವುದನ್ನು ಈ ಹೊತ್ತಿಗೂ ನಾವು ಕಾಣಬಹುದು.

ಮೊದಲನೆಯದಾದ **ಆದಿಪರ್ವ**ದಲ್ಲಿ ಕುರು ಪಾಂಡವರ ಪೂರ್ವಿಕರ ಕಥೆ; ಕೌರವರು ಅಸೂಯೆಯಿಂದ ಪಾಂಡವರನ್ನು ಅರಗಿನ ಮನೆಯಲ್ಲಿ ಸುಡಲು ಯತ್ನಿಸಿದ್ದು; ಪಾಂಡವರು ಅಲ್ಲಿಂದ ಕಾಡಿಗೆ ತಪ್ಪಿಸಿಕೊಂಡು ಹೋದದ್ದು; ಅಲ್ಲಿ ಭೀಮನು ಹಿಡಿಂಬ, ಬಕ ಮುಂತಾದ ರಾಕ್ಷಸರನ್ನು ಕೊಂದದ್ದು; ಮುಂದೆ ಅದೇ ಪಾಂಡವರು ಬ್ರಾಹ್ಮಣರ ವೇಷದಿಂದ ಪಾಂಚಾಲರ ನಗರಿಗೆ ಬಂದು ದ್ರೌಪದಿಯನ್ನು ವರಿಸಿದುದು; ಅನಂತರ ಭೀಷ್ಮಾದಿಗಳು ಅವರನ್ನು ಹಸ್ತಿನಪುರಿಗೆ ಕರೆದುತಂದ ಬಳಿಕ, ಅರ್ಜುನನು ತೀರ್ಥಯಾತ್ರೆಗೆ ಹೊರಟು ಸುಭದ್ರೆಯನ್ನು ಮದುವೆಯಾದದ್ದು; ಆಗಲೇ ಖಾಂಡವವನವನ್ನು ಅಗ್ನಿಗೆ ಊಡಿಸಿ, ಮಯನಿಂದ ದಿವ್ಯಸಭೆಯನ್ನು ದಾನಪಡೆದದು; ಇವೇ ಮೊದಲಾದ ಕಥೆಗಳು ಇವೆ.

ಎರಡನೆಯದಾದ **ಸಭಾಪರ್ವ**ದಲ್ಲಿ ಪಾಂಡವರು ರಾಜಸೂಯವನ್ನು ಮಾಡಲು ನಿಶ್ಚಯಿಸಿ, ದಿಗ್ವಿಜಯಕ್ಕೆ ಮೊದಲು ಜರಾಸಂಧನನ್ನು ವಧಿಸಿದ್ದು; ದಿಗ್ವಿಜಯದ ಅನಂತರ ನಡೆದ ರಾಜಸೂಯದಲ್ಲಿ ಶ್ರೀ ಕೃಷ್ಣನಿಗೆ ಕೊಡಲೆತ್ತಿದ ಅಗ್ರಪೂಜೆಗೆ ಅಡ್ಡಬಂದ ಶಿಶುಪಾಲನ ವಧೆ; ಆ ಬಳಿಕ ಪಾಂಡವರ ಅಭ್ಯುದಯವನ್ನು ನೋಡಿ ಸಹಿಸದ ಕೌರವನು ಶಕುನಿಯ ಸಹಾಯದಿಂದ ದ್ಯೂತ, ಅನುದ್ಯೂತಗಳನ್ನು ಆಡಿ ಪಾಂಡವರನ್ನು ವನವಾಸಕ್ಕೆ ಅಟ್ಟಿದ್ದು—ಈ ಘಟನೆಗಳು ಇವೆ.

ಮೂರನೆಯದಾದ **ವನಪರ್ವ**ದಲ್ಲಿ ಪಾಂಡವರು ಕಾಡಿನಲ್ಲಿ ಪಟ್ಟ ಪಾಡು ; ಅವರನ್ನು ಕಾಡಿಗಟ್ಟಿದರೂ ತೃಪ್ತನಾಗದ ಕೌರವನು ಘೋಷಯಾತ್ರೆಯ ನೆಪದಿಂದ ಹೋಗಿ ಅವರನ್ನು ಪೀಡಿಸಿದ್ದು ; ಭೀಮಾರ್ಜುನರು ಕಿಮ್ಮೀರ, ಜಟಾಸುರ, ನಿವಾತಕವಚರು ಮೊದಲಾದ ರಾಕ್ಷಸರನ್ನೂ ಅಸುರರನ್ನೂ ಸಂಹರಿಸಿದ್ದು ; ದ್ರೌಪದಿಯನ್ನು ಅಪಹರಿಸಲು ಬಂದ ಜಯದ್ರಥನು ಅವಮಾನಿತನಾದದ್ದು ; ಇವೇ ಮೊದಲಾದ ಅನೇಕ ಸ್ವಾರಸ್ಯವಾದ ಪ್ರಕರಣಗಳಿವೆ.

ನಾಲ್ಕನೆಯದಾದ **ವಿರಾಟಪರ್ವ**ದಲ್ಲಿ ಹನ್ನೆರಡು ವರ್ಷ ವನವಾಸಮಾಡಿದ ಪಾಂಡವರು ಹದಿಮೂರನೆಯ ವರ್ಷದ ಅಜ್ಞಾತವಾಸಕ್ಕಾಗಿ ವೇಷಾಂತರದಿಂದ ವಿರಾಟನ ಮನೆಯನ್ನು ಸೇರಿದ್ದು ; ಅಲ್ಲಿ ಸೈರಂಧ್ರಿಯಾಗಿದ್ದ ದ್ರೌಪದಿಯನ್ನು ಬಯಸಿದ ಕೀಚಕನು ಬಾಣಸಿಗವೇಷದ ಭೀಮನಿಂದ ಹತನಾದದ್ದು ; ಗೋಗ್ರಹಣದ ನೆಪದಿಂದ ವಿರಾಟನಗರಕ್ಕೆ ಮುತ್ತಿಗೆ ಹಾಕಬಂದ ಕೌರವರನ್ನು ಬೃಹನ್ನಳೆಯಾಗಿದ್ದ ಅರ್ಜುನನು ಸೋಲಿಸಿದ್ದು ; ಅರ್ಜುನನ ಮಗನಾದ ಅಭಿಮನ್ಯುವಿಗೂ ವಿರಾಟನ ಮಗಳಾದ ಉತ್ತರೆಗೂ ಮದುವೆಯಾದದ್ದು ;—ಇವುಗಳ ವರ್ಣನೆಯಿದೆ.

ಐದನೆಯದಾದ **ಉದ್ಯೋಗಪರ್ವ**ದಲ್ಲಿ ದುರ್ಯೋಧನನು ಭೀಷ್ಮ, ದ್ರೋಣ, ವಿದುರ, ಧೃತರಾಷ್ಟ್ರ ಇವರು ಯಾರ ಮಾತನ್ನೂ ಕೇಳದೆ, ' ಪಾಂಡವರಿಗೆ ರಾಜ್ಯವನ್ನೂ ಕೊಡುವುದಿಲ್ಲ, ಐದು ಗ್ರಾಮಗಳನ್ನೂ ಕೊಡುವುದಿಲ್ಲ'ವೆಂದು ಹಠ ಹಿಡಿದು, ಸಂಧಿಗಾಗಿ ಬಂದ ಕೃಷ್ಣನನ್ನೇ ಕಟ್ಟಿಹಾಕಲು ಯತ್ನಿಸಿದ್ದು ; ಅದರಿಂದ ಕೌರವರಿಗೂ ಪಾಂಡವರಿಗೂ ಯುದ್ಧವು ಅನಿವಾರ್ಯವಾಗಿ, ಅವರು ತಮ್ಮ ತಮ್ಮ ಸಿದ್ಧತೆಗಳನ್ನು ಮಾಡಿಕೊಂಡದ್ದು ;—ಈ ಕಥೆ ಇದೆ.

ಆರನೆಯದು **ಭೀಷ್ಮಪರ್ವ.** ಕೌರವರ ಪಕ್ಷದ ಸೇನಾನಾಯಕತ್ವವನ್ನು ಭೀಷ್ಮನು ವಹಿಸಿ, ಹತ್ತು ದಿವಸಗಳ ಕಾಲ ಅವಿಚ್ಛಿನ್ನವಾಗಿ ಕಾಳಗಮಾಡಿ, ಕಡೆಗೆ ಶರಶಯನದಲ್ಲಿ ಮಲಗಿ ವಿರಮಿಸಿದನೆಂಬುದು ಇಲ್ಲಿಯ ಕಥೆ.

ಏಳನೆಯದು **ದ್ರೋಣಪರ್ವ.** ಭೀಷ್ಮನು ಆದ ಅನಂತರ ದ್ರೋಣನು ಸೇನಾಧಿಪತಿಯಾಗಿ ಐದು ದಿವಸಗಳ ಕಾಲ ಘೋರವಾಗಿ ಯುದ್ಧಮಾಡಿದ್ದು; ಆಗಲೇ ಅಭಿಮನ್ಯು, ಘಟೋತ್ಕಚ ಇವರು ವಧೆಯಾದದ್ದು; ಕಡೆಗೆ ಕೃಷ್ಣನ ಕೌಟಿಲ್ಯದಿಂದ ದ್ರೋಣನು ಶಸ್ತ್ರತ್ಯಾಗಮಾಡಿ ಹತನಾದದ್ದು ;—ಇದು ಈ ಪರ್ವದ ಕಥೆ.

ಎಂಟನೆಯ **ಕರ್ಣಪರ್ವ**ವು ಕುಂತಿಯ ಚೊಚ್ಚಲುಮಗನಾದ ಕರ್ಣನು ತನ್ನ ಸ್ವಾಮಿಯಾದ ಕೌರವನಿಗಾಗಿ ತನ್ನ ತಮ್ಮಂದಿರಾದ ಪಾಂಡವರ ಮೇಲೆ ಯುದ್ಧಮಾಡಬೇಕಾಗಿ ಬಂದು ಧರ್ಮಸಂಕಟವನ್ನು ಅನುಭವಿಸಿದ್ದು; ಎರಡು ದಿವಸಗಳು ಅನ್ಯಾದೃಶವಾಗಿ ಪಾಂಡವರನ್ನು ಎದುರಿಸಿದ್ದು ; ಕಡೆಗೆ ಕೃಷ್ಣನಿಂದ ಪ್ರೇರಿತನಾದ ಪಾರ್ಥನ ಬಾಣದಿಂದ ಹತನಾದದ್ದು—ಇದನ್ನು ವರ್ಣಿಸುತ್ತದೆ.

ಒಂಬತ್ತನೆಯ **ಶಲ್ಯಪರ್ವ**ದಲ್ಲಿ ಮಹಾಭಾರತ ಯುದ್ಧದ ಹದಿನೆಂಟನೆಯ ದಿವಸದ ಕಥೆಯಿದೆ. ಹದಿನೆಂಟನೆಯ ಹಗಲು

ಮೂಡುವ ವೇಳೆಗೆ ದುರ್ಯೋಧನನ ತಮ್ಮಂದಿರೂ ಮಕ್ಕಳೂ ಎಲ್ಲರೂ ಮಡಿದಿದ್ದಾರೆ. ಅವನ ಆಪ್ತರಾದ ಕರ್ಣಾದಿಗಳ ಕಥೆ ಮುಗಿದಿದೆ. ಆ ಪಕ್ಷದಲ್ಲಿ ಉಳಿದಿರುವ ಶಲ್ಯನು ಧರ್ಮರಾಜನನ್ನು ಕೆಣಕಿ ಅವನಿಂದ ಹತನಾಗುತ್ತಾನೆ. ಅದೇ ದಿನದ ಉತ್ತರಾರ್ಧದಲ್ಲಿ ಛಲವಾದಿಯಾದ ದುರ್ಯೋಧನನಿಗೂ ಪ್ರತಿಜ್ಞಾರೂಢನಾದ ಭೀಮಸೇನನಿಗೂ ಗದಾಯುದ್ಧ ನಡೆಯುತ್ತದೆ. ಅದರಲ್ಲಿ ಭೀಮನು ತಾನು ಪ್ರತಿಜ್ಞೆಮಾಡಿದಂತೆ ಅಂದು ದುಶ್ಶಾಸನನನ್ನು ಕೊಂದವನು, ಇಂದು ದುರ್ಯೋಧನನ ತೊಡೆಗಳನ್ನು ಒಡೆದು, ಕಿರೀಟವನ್ನು ಒದೆಯುತ್ತಾನೆ.

ಹತ್ತನೆಯದು **ಸೌಪ್ತಿಕಪರ್ವ.** ದುರ್ಯೋಧನನ ದುರವಸ್ಥೆಯನ್ನು ಕಂಡು, ಅಶ್ವತ್ಥಾಮನು ಪಾಂಡವ ನಿರ್ಮೂಲನಕ್ಕಾಗಿ ಪ್ರತಿಜ್ಞೆಮಾಡಿ, ಆ ರಾತ್ರಿ ಪಾಂಡವರು ನಿದ್ರಿಸುತ್ತಿರುವ ವೇಳೆಯಲ್ಲಿ ಹೋಗಿ, ಪಾಂಡವರೆಂಬ ಭ್ರಮೆಯಿಂದ ಉಪಪಾಂಡವರ ತಲೆಗಳನ್ನು ತರಿದುಕೊಂಡು ಬರುತ್ತಾನೆ. ಮಾರನೆಯ ಬೆಳಗ್ಗೆ ಅಶ್ವತ್ಥಾಮನ ಈ ಅಕಾರ್ಯದಿಂದ ಕ್ರುದ್ಧನಾದ ಭೀಮನು ಅವನ ಶಿರೋರತ್ನವನ್ನು ಕಿತ್ತುಹಾಕಿ, ಅವನ ಮಹಿಮೆಯನ್ನು ಕಿಡಿಸುತ್ತಾನೆ.

ಹೀಗೆ ಈ ಹತ್ತು ಪರ್ವಗಳು ಮುಗಿಯುವ ವೇಳೆಗೆ ಕೌರವರ ಕಡೆ ಪ್ರಾಯಃ ಎಲ್ಲರೂ ಸಂಹಾರವಾಗಿ, ಉಳಿದವರು ಬದುಕಿದ್ದರೂ ವಿಗತಸತ್ವರಾಗಿ, ಪಾಂಡವರ ಕಡೆ ಮಾತ್ರ ಶ್ರೀ ಕೃಷ್ಣನ ಅನುಗ್ರಹದಿಂದ ಐದು ಜನ ಐದುಜನವಾಗಿವೇ ಉಳಿಯುತ್ತಾರೆ. ಇಲ್ಲಿಂದ ಮುಂದೆ ಎಂಟು ಪರ್ವಗಳು ಇದ್ದರೂ ಕೌರವರ, ಪಾಂಡವರ ದಾಯಾದ್ಯದ ಕಥೆ ಮುಗಿಯುವುದು ಹತ್ತನೆಯ ಪರ್ವಕ್ಕೇ.

ಇದು ವ್ಯಾಸರು ಬರೆದ ಭಾರತ.

§ ೨

ಭಾಸನೆಂಬ ಮಹಾಕವಿ ಇದೇ ವ್ಯಾಸಭಾರತದ ಕಥೆಯನ್ನು ತಾನು ಎತ್ತಿಕೊಂಡು, ತನಗೆ ಇಷ್ಟವೆನ್ನಿಸಿದ ಕೆಲವು ಬದಲಾವಣೆ ಗಳೊಡನೆ ಐದು ಸಣ್ಣ ಸಣ್ಣ ನಾಟಕಗಳನ್ನು ಬರೆದಿದ್ದಾನೆ.

ಇವುಗಳಲ್ಲಿ ಮೊದಲನೆಯದು **ಮಧ್ಯಮ ವ್ಯಾಯೋಗ.** 'ವ್ಯಾಯೋಗ' ಎಂಬುದು ಒಂದು ರೀತಿಯ ಸಣ್ಣ ನಾಟಕಕ್ಕೆ ಹೆಸರು: ಇದರಲ್ಲಿ ಒಂದೇ ಒಂದು ಅಂಕ ಇರುತ್ತದೆ; ಇದರ ಕಥೆ ಯಲ್ಲಿ ಒಂದು ಕಾಳಗ ನಡೆಯುತ್ತದೆ. ಕೇಶವದಾಸನೆಂಬ ಬ್ರಾಹ್ಮಣನ ಮೂವರು ಮಕ್ಕಳಲ್ಲಿ ಮಧ್ಯಮನಾದವನನ್ನು ಘಟೋತ್ಕಚನು ಹಿಡಿ ದೊಯ್ಯುತ್ತಿರುವಾಗ ಪಾಂಡವಮಧ್ಯಮನಾದ ಭೀಮನು ಅವನನ್ನು ಬಿಡಿಸಬಂದು, ಮಗನೊಡನೆ ಕಾಳಗವಾಡಿದ ವಿನೋದದ ಕಥೆ ಈ ನಾಟಕದ ವಸ್ತು. ಇದು ವ್ಯಾಸಭಾರತದಲ್ಲಿಲ್ಲ, ಭಾಸನೇ ಕಟ್ಟಿದ್ದು. ಈ ಕಥೆಯ ಕಾಲ ಅರಣ್ಯಪರ್ವದ ಕಾಲ.

ಎರಡನೆಯ ನಾಟಕ: **ದೂತವಾಕ್ಯ.** ಇದರಲ್ಲಿರುವುದು ಉದ್ಯೋಗ ಪರ್ವದ ಕಥೆ. ಕೃಷ್ಣನು ಸಂಧಿಗಾಗಿ ದುರ್ಯೋಧನನ ಸಭೆಗೆ ಬಂದು, ಕೃತಕೃತ್ಯನಾಗದೆ ಹೋದ ಕಥೆ.

ಮೂರನೆಯದು: **ದೂತ ಘಟೋತ್ಕಚ**. ದ್ರೋಣ ಪರ್ವದಲ್ಲಿ ಅಭಿಮನ್ಯುವಧೆಯಾದ ಮೇಲೆ ನಡೆದದ್ದು ಈ ಕಥೆ. ಜಯದ್ರಥ ನನ್ನು ವಧಿಸುತ್ತೇನೆಂದು ಅರ್ಜುನನು ಮಾಡಿದ ಪ್ರತಿಜ್ಞೆಯನ್ನು ಕೇಶವನ ದೂತನಾಗಿ ಬಂದ ಘಟೋತ್ಕಚನು ಈ ನಾಟಕದಲ್ಲಿ ಕೌರವರಿಗೆ ತಿಳಿಸುತ್ತಾನೆ.

ನಾಲ್ಕನೆಯದು: **ಕರ್ಣಭಾರ.** ಇದು ಕರ್ಣಪರ್ವದ ಕಥೆಯ ಒಂದು ಅಂಶ. ಯುದ್ಧಕ್ಕೆ ಹೊರಟ ಅಂಗರಾಜನು, ಅದೇ ದಿನ ಅರ್ಜುನನ ಜೀವವನ್ನು ಉಳಿಸುವುದಕ್ಕಾಗಿ ಬ್ರಾಹ್ಮಣ ವೇಷದಿಂದ

ಬಂದ ಇಂದ್ರನಿಗೆ, ತನ್ನ ಕವಚಕುಂಡಲಗಳನ್ನು ಈಡಾಡಿದ ಮಹಾದಾನದ ಗೌರವವನ್ನು ಈ ಪುಟ್ಟನಾಟಕ ಕೊಂಡಾಡುತ್ತದೆ.

ಐದನೆಯದು: **ಊರುಭಂಗ**. ಎಂದರೆ ಭೀಮನು ದುರ್ಯೋಧನನ ತೊಡೆಗಳನ್ನು ಒಡೆದದ್ದು. ಇದರಲ್ಲಿ ಗದಾಪರ್ವದ ಕಥೆಯನ್ನು ಚಿತ್ರಿಸಿ, ಭಾಸನು ಸೌಪ್ತಿಕಪರ್ವವನ್ನು ಸೂಚಿಸಿದ್ದಾನೆ.

ಹೀಗೆ ಈ ಭಾಸನ ಐದು ಭಾರತನಾಟಕಗಳು ವ್ಯಾಸಭಾರತದ ವನಪರ್ವ, ಉದ್ಯೋಗಪರ್ವ, ದ್ರೋಣಪರ್ವ, ಕರ್ಣಪರ್ವ, ಗದಾಪರ್ವಗಳನ್ನು ಮಾತ್ರ ಮುಖ್ಯವಾಗಿ ಎತ್ತಿಕೊಂಡರೂ ಉಳಿದ ಪರ್ವಗಳ ಘಟನೆಗಳನ್ನು ಅಲ್ಲಲ್ಲೇ ಪಾತ್ರಗಳ ಮುಖದಿಂದ ಆಡಿಸಿ, ಒಟ್ಟಿನಲ್ಲಿ ಮಹಾಭಾರತದ ಸಂಪೂರ್ಣಚಿತ್ರವನ್ನು ಸಂಕ್ಷೇಪವಾಗಿ ತಿಳಿಸುತ್ತವೆ.

§ ೩

ಈ ಐದು ನಾಟಕಗಳಲ್ಲದೆ, ಭಾಸನೇ ಬರೆದಿರುವ ಇನ್ನೊಂದು ಭಾರತಕಥೆಯ ನಾಟಕವೂ ಉಂಟು. ಅದರ ಹೆಸರು: **ಪಂಚರಾತ್ರ.** ಇದು ಮೂರಂಕಗಳ ನಾಟಕ.

ಇದರೊಳಗಿರುವುದು ವಿರಾಟಪರ್ವದ ಕಥೆ. ವ್ಯಾಸಭಾರತದ ಕಥೆಯ ಹಾಗೆಯೇ ಇಲ್ಲಿಯೂ ಪಾಂಡವರು ವಿರಾಟನಗರದಲ್ಲಿ ಅಜ್ಞಾತವಾಸ ಮಾಡುತ್ತಿದ್ದಾರೆ; ಇಲ್ಲಿಯೂ ದ್ರೌಪದೀವ್ಯಾಜದಿಂದ ಕೀಚಕನ ವಧೆಯಾಗುತ್ತದೆ; ಅಲ್ಲಿನಂತೆಯೇ ಇಲ್ಲಿಯೂ ಕೌರವರು ಗೋಗ್ರಹಣಕ್ಕೆ ಹೋಗುತ್ತಾರೆ, ಬೃಹನ್ನಳೆಯ ಬಾಣಗಳಿಗೆ ಸೋಲುತ್ತಾರೆ; ಕಡೆಗೆ ಅಭಿಮನ್ಯು ಉತ್ತರೆಯರ ವಿವಾಹವೂ ಆಗುತ್ತದೆ.

ಆದರೆ ಮಾತ್ರ ಈ ಪಂಚರಾತ್ರ ನಾಟಕದಲ್ಲಿ ದುರ್ಯೋಧನನು ತನ್ನ ರಾಜ್ಯದಲ್ಲಿ ಅರ್ಧವನ್ನು ತಾನು ಆಡಿದ ಮಾತಿನ

ಪ್ರಕಾರ ಪಾಂಡವರಿಗೆ ಹಂಚಿಕೊಟ್ಟು, ಅವರೊಡನೆ ಸುಖವಾಗಿ ಬಾಳುತ್ತಾನೆ!

ಪಾಂಡವರು ಅಜ್ಞಾತವಾಸವನ್ನು ಅನುಭವಿಸುತ್ತಿರುವಾಗ ದುರ್ಯೋಧನನು ಒಂದು ಯಜ್ಞವನ್ನು ನಡಸುತ್ತಾನೆ. ಯಜ್ಞವು ಸಮಾಪ್ತವಾದ ಸಂಭ್ರಮದಲ್ಲಿ ದುರ್ಯೋಧನನು ದ್ರೋಣಾಚಾರ್ಯನಿಗೆ ತಾನು ಏನಾದರೂ ಗುರುದಕ್ಷಿಣೆಯನ್ನು ಕೊಟ್ಟು ಕೃತಾರ್ಥನಾಗಬೇಕೆಂದು ಬಯಸುತ್ತಾನೆ. ಆದರೆ "ಪಾಂಡವರು ತಮಗೆ ಬರಬೇಕಾದ ಅರ್ಧರಾಜ್ಯವನ್ನು ಪಡೆದು ಸುಖವಾಗಿ ಬಾಳಿದರೆ ಸಾಕು. ಅದೇ ನನಗೆ ನೀನು ಕೊಡಬಹುದಾದ ದಕ್ಷಿಣೆ" ಎಂದು ದ್ರೋಣನು ಹೇಳುತ್ತಾನೆ. ದುರ್ಯೋಧನನು ಅದಕ್ಕೆ ಸುಲಭವಾಗಿ ಒಪ್ಪುತ್ತಿದ್ದನೋ ಏನೋ. ಆದರೆ ತಂತ್ರಿಯಾದ ಶಕುನಿಯು "ಐದುರಾತ್ರೆಗಳೊಳಗಾಗಿ ಪಾಂಡವರು ಎಲ್ಲಿರುವರೆಂದು ತಿಳಿಸಿ ಕೊಟ್ಟರೆ ಅವರಿಗೆ ಅರ್ಧರಾಜ್ಯ ಕೊಡಬಹುದು" ಎಂದು ಒಂದು ತಡೆಯೊಡ್ಡುತ್ತಾನೆ. ಮಾವನ ಮಾತಿಗೆ ದುರ್ಯೋಧನನೂ ಒಪ್ಪುತ್ತಾನೆ. ರಾಜನಾದ ದುರ್ಯೋಧನನ ಸಂಶೋಧನೆಗಳಿಗೂ ಪ್ರಕಟವಾಗದಿರುವ ಅಜ್ಞಾತರಾದ ಆ ಪಾಂಡವರನ್ನು ತಾನು ಹೇಗೆ ಕಂಡುಹಿಡಿಯಲಿ ಎಂದು ದ್ರೋಣನು ವ್ಯಾಕುಲಗೊಂಡಿರುವಾಗ, ಕೀಚಕ ವಧೆಯ ವಾರ್ತೆ ಹಸ್ತಿನಪುರಿಗೆ ತಿಳಿಯುತ್ತದೆ. ಭೀಮನೇ ಕೀಚಕನ ವಧೆಗೆ ಕಾರಣನಾಗಿರಬೇಕೆಂದು ಭೀಷ್ಮನೊಬ್ಬನಿಗೆ ಮಾತ್ರ ಹೊಳೆಯುತ್ತದೆ. ಆಗ ಅವನು ದ್ರೋಣನನ್ನು "ಪಂಚರಾತ್ರ"ಕ್ಕೆ ಒಪ್ಪಿಸಿ, ಗೋಗ್ರಹಣದ ನೆಪದಿಂದ ವಿರಾಟನಗರಕ್ಕೆ ಹೋಗುತ್ತಾನೆ. ಅಲ್ಲಿ ಕೌರವರು ಪಾಂಡವರನ್ನು ಕಾಣುತ್ತಾರೆ. ದ್ರೋಣನ ಪಂಚರಾತ್ರದ ಒಪ್ಪಿಗೆ ಸಾರ್ಥಕವಾಗುತ್ತದೆ. ಆಗ ಸತ್ಯವಚನನಾದ ದುರ್ಯೋಧನನು ಪಾಂಡವರಿಗೆ ತಾನು ಆಡಿ

ದಂತೆ ಅರ್ಧ ರಾಜ್ಯವನ್ನು ಕೊಟ್ಟು ಅವರೊಡನೆ ಸುಖವಾಗಿ ಇರುತ್ತಾನೆ.

ವ್ಯಾಸಭಾರತದಲ್ಲಿ ನಾವು ಓದಿ ಕೇಳಿರುವ ಕಥೆಗೆ ತೀರ ವಿರುದ್ಧವಾದ ಈ ನವೀನ ಭಾಸಭಾರತದ ಮಂಗಲಾಂತವಾದ ಕಥೆ ತುಂಬ ಚಮತ್ಕಾರವುಳ್ಳದ್ದಾಗಿದೆ. ಇದರ ಸ್ವಾರಸ್ಯವನ್ನು ತಿಳಿಯು ಬೇಕಾದರೆ, ಮಕ್ಕಳು **"ಪಂಚರಾತ್ರದ ಕಥೆ"** ಎಂಬ ಪುಸ್ತಕವನ್ನು ಓದಬಹುದು.

Printed by U. Narasimha Mallya, Proprietor, The B.B.D.Power Press
Bangalore City.